ಕರ್ನಾಟಕ ವಿಧಾನಸಭೆ

ಗುರುವಾರ 6ನೇ ಜುಲೈ 2006ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಬಗ್ಗೆ ಚರ್ಚೆ.

ವಿಷಯ : ಬೆಂಗಳೂರು – ಮೈಸೂರು ಕಾರಿಡಾರ್ ಯೋಜನೆ ಬಗ್ಗೆ ಚರ್ಚೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಗುರುಮಿಠಕಲ್) :– ಮಾನ್ಯ ಅಧ್ಯಕ್ಷರೆ, ಮೈಸೂರು – ಬೆಂಗಳೂರು ಕಾರಿಡಾರ್ ವಿಷಯದಲ್ಲಿ ಸಾಕಷ್ಟು ಚರ್ಚೆಯಾಗಿದೆ ಮತ್ತು ವಿಶೇಷವಾಗಿ ಅದರ ಮೇಲೆ ಎಲ್ಲಾ ಸದಸ್ಯರು ಕೂಡ ತಮ್ಮದೇ ಆದಂಥ ಅನಿಸಿಕೆಗಳು, ವ್ಯಾಖ್ಯಾನಗಳು ಮತ್ತು ಅದೇ ರೀತಿ ಈ ಪ್ರಾಜೆಕ್ಟ್ ರಾಜ್ಯದ ಹಿತದೃಷ್ಟಿಯಿಂದ ತೆಗೆದುಕೊಳ್ಳಬೇಕೇ ಅಥವಾ ಬೇಡವೇ ಎಂಬ ಚರ್ಚೆ ಕೂಡ ಹೊರಗಡೆ ನಡೆದಿದೆ. ಏಕೆಂದರೆ ಇದು ಸುಮಾರು 11 ವರ್ಷಗಳ ಹಿಂದೆ ಪ್ರಾರಂಭವಾದಂಥ ಪ್ರಾಜೆಕ್ಟ್. ಈವತ್ತೂ ಕೂಡ ಕಾಂಟ್ರವರ್ಸಿಯಲ್ಲೇ ಮುಂದುವರೆಯುತ್ತಿದೆ. ಮತ್ತು ಅಧಿಕಾರದಲ್ಲಿ ಇದ್ದಂಥ ಪ್ರತಿಯೊಬ್ಬ ಮುಖ್ಯಮಂತ್ರಿಗಳು ತನ್ನದೇ ಆದಂಥ ಕೊಡುಗೆಯನ್ನು ಈ ಪ್ರಾಜೆಕ್ಟ್‌ಗೆ ಕೊಟ್ಟಿದ್ದಾರೆ. ಕೆಲವು ಜನ ಇದು ನನ್ನಿಂದ ಆರಂಭವಾದರೂ ಕೂಡ ನಾನು ಯಾವ ದೃಷ್ಟಿಯಿಂದ ಇದನ್ನು ಪ್ರಾರಂಭ ಮಾಡಿದ್ದೇನೆ. ಆ ಸದುದ್ದೇಶದಿಂದ ಈ ಪ್ರಾಜೆಕ್ಟ್ ಮುಂದೆ ಬರಲಿಲ್ಲ. ಅದಕ್ಕಾಗಿ ಈ ಪ್ರಾಜೆಕ್ಟ್‌ನಲ್ಲಿ ಲೋಪದೋಷಗಳಿವೆ. ಮತ್ತು ನಿಗದಿಪಡಿಸಿದ್ದಕ್ಕಿಂತ ಹೆಚ್ಚಿನ ಭೂಮಿಯನ್ನು ಆ ಪ್ರಾಜೆಕ್ಟ್‌ಗೆ ಕೊಟ್ಟಿದ್ದಾರೆ. ಇದು ಸರಿಯಲ್ಲ. ಇದು ಬಡವರ, ರೈತರ ಭೂಮಿ, ಇದನ್ನು ಅವರಿಗೆ ಕಬಳಿಸುವುದಕ್ಕೆ ಬಿಡುವುದಿಲ್ಲ ಎನ್ನತಕ್ಕಂಥ ಮಾತನ್ನು ಹಿಂದಿನ ಮುಖ್ಯಮಂತ್ರಿಗಳು, ಮಾಜಿ ಪ್ರಧಾನ ಮಂತ್ರಿಗಳೂ ಕೂಡ ಹೇಳಿದ್ದನ್ನು ಕೇಳಿದ್ದೇವೆ. ಮತ್ತು ಇಂದಿನ ಮುಖ್ಯಮಂತ್ರಿಗಳೂ ಕೂಡ ಅನೇಕ ಸಲ ಅದನ್ನು ಪ್ರತಿಪಾದನೆ ಮಾಡಿದ್ದಾರೆ. ಈ ಸದನದಲ್ಲಿ ಯಾರೂ ಕೂಡ ಬಡವರ ಭೂಮಿಯನ್ನು ತೆಗೆದುಕೊಂಡು ಈ ನೈಸ್ ಕಂಪನಿಗೆ ಕೊಡಿ ಎಂದು ವಾದ ಮಾಡಿಲ್ಲ. ಈ ಕಡೆಯವರೂ ಮಾಡಿಲ್ಲ. ಆ ಕಡೆಯವರೂ ಮಾಡಿಲ್ಲ. ಹೊರಗಡೆ ಕೂಡ ಇದರ ಬಗ್ಗೆ ಯಾವುದೇ ರಾಜಕೀಯ ಪಕ್ಷ ಒಂದು ದಿಟ್ಟವಾದ ನಿಲುವನ್ನು ತೆಗೆದುಕೊಂಡು ಇದರ ಬಗ್ಗೆ ಹೋರಾಟ ಮಾಡಲಿಲ್ಲ. ಅಂದಾಗ ಈ ಸಂಶಯ ಯಾರ ಹತ್ತಿರ ಮೂಡಿತು? ಏಕೆ ಈ ವಿಷಯ ಇಷ್ಟೊಂದು ಗೊಂದಲಮಯವಾಯಿತು?

ಸುಮಾರು 7–8 ದಿವಸ ನಾವು ಇಲ್ಲಿ ಚರ್ಚೆ ಮಾಡುತ್ತಲೇ ಇದ್ದೇವೆ. ಆದರೂ ಕೂಡ ಅನೇಕ ಮುಖಂಡರು ಮಾತನಾಡಿದರೂ ಕೂಡ ನಿರ್ದಿಷ್ಟವಾದಂಥ ಗುರಿ ನಾನೇನೂ ಕಂಡಿಲ್ಲ. ಆ ಕಡೆ ಇರತಕ್ಕವರು ಏನು ಹೇಳಬೇಕೆನ್ನುತ್ತಾರೋ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತಿಲ್ಲ. ಅನೇಕ ಮುಖಂಡರು ಪ್ರಸ್ತಾಪ ಮಾಡಿದಾಗ ಅವರ ಗುರಿ ಏನು ಎಂಬುದು ನನಗೆ ಗೊತ್ತಾಗುತ್ತಿಲ್ಲ. ಆದರೂ ಕೂಡ ನನಗೆ ಈವತ್ತು ಏನು ಸಂಶಯ ಬರುತ್ತಿದೆ ಎಂದರೆ, ಯಾವ ಕಾನೂನುಗಳಿಗೆ ನಾವು ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷವಾಗಿ ಬೆಂಬಲ ಕೊಡುತ್ತೇವೆ ಆ ಕಾನೂನಿನ ದುಷ್ಪರಿಣಾಮ ಹೇಗೆ ಆಗುತ್ತದೆ ಎನ್ನುವುದಕ್ಕೆ ಈ ಒಂದು ಬೆಂಗಳೂರು–ಮೈಸೂರು ಕಾರಿಡಾರ್ ಉದಾಹರಣೆ. ಮಾನ್ಯ ಪ್ರಕಾಶ್‌ರವರು ಇಲ್ಲಿದ್ದಾರೆ. ಆಗ ಕೂಡ ಅವರು ಇದ್ದರು. 1994–95ರಲ್ಲಿ ಭೂಸುಧಾರಣೆಗೆ ತಿದ್ದುಪಡಿ ಕಾನೂನನ್ನು ತರುವಾಗ ನಾನು ವಿರೋಧ ಪಕ್ಷದ ನಾಯಕನಾಗಿ ಇದೇ ಜಾಗದಲ್ಲಿ ನಿಂತು ಅವರಿಗೆ ಸ್ಪಷ್ಟವಾಗಿ ಹೇಳಿದೆ. ನೀವು ಭೂಸುಧಾರಣೆ ಕಾನೂನಿಗೆ ತಿದ್ದುಪಡಿ ತಂದರೆ ಇದು ಒಂದು ದೊಡ್ಡ ಅನಾಹುತವಾಗುತ್ತದೆ, ಯಾವ ಉದ್ದೇಶದಿಂದ ಇಡೀ ಸದನ ಒಮ್ಮತದಿಂದ ಒಪ್ಪಿದಂಥ ಕಾನೂನಿಗೆ ನಾವು ತಿರುಚಿ ಮುರುಚಿ ಮಾಡಿದರೆ ಅದು ಈವತ್ತಲ್ಲ ನಾಳೆ ನಮ್ಮ ರೈತರಿಗೆ ಅಪಾಯಕಾರಿ ಎಂದು ನಾನು ಆಗ ಹೇಳಿದ್ದೆ. ಅಲ್ಲದೆ ಇಲ್ಲಿ ರೈತರ ಕೈಯಿಂದ ಶ್ರೀಮಂತರು ಜಮೀನನ್ನು ಕಸಿದುಕೊಳ್ಳುತ್ತಾರೆ ಎನ್ನತಕ್ಕದ್ದರ ಬಗ್ಗೆ ಎರಡು ದಿವಸ ಧರಣೆ ಮಾಡಿದ್ದೇವೆ. ಮಾನ್ಯ ಅಧ್ಯಕ್ಷರೆ, ತಮಗೂ ಕೂಡ ಗೊತ್ತಿದೆ. ತಾವು ವಕೀಲರು ಆಗಿದ್ದೀರಿ. One man one profession ಎನ್ನತಕ್ಕಂಥ ಫಿಲಾಸಫಿ ಕೂಡ ಅಡಗಿದೆ. ಅಂದರೆ ಯಾರದೇ ಆದಾಯ, ಒಂದು ಇನ್‌ಕಂ ಲಿಮಿಟ್ ಅನ್ನು ಆಗ 12,000 ರೂಪಾಯಿಗಳು ಇತ್ತು. ಈಗ ಅದನ್ನು ಎರಡು ಲಕ್ಷ ರೂಪಾಯಿಗಳವರೆಗೆ ಎಂದು ಮಾಡಿದ್ದಾರೆ. ಅದಕ್ಕಿಂತಲೂ ನಾನೆ ಅಗ್ರಿಕಲ್ಚರ್ ಇನ್‌ಕಂ, ಅವರದ್ದು ಇದ್ದರೆ, ಅವರಿಗೆ ಭೂಮಿಯನ್ನು ಖರೀದಿ ಮಾಡುವಂತಹ ಹಕ್ಕು, ಸೊಮೊಟೊ ಕಾನೂನಿನಲ್ಲಿ ಇರಲಿಲ್ಲ. ಅದನ್ನು ಸರಳಗೊಳಿಸಿದಂಥವರು ಯಾರು? liberalisation ಪಾಲಿಸಿ ಬಂತು, ಅದಕ್ಕಾಗಿ ನಾವು ಮಾಡಿದ್ದೇವೆಂಬ ವಾದವನ್ನು ಆಗಲೂ ಇಟ್ಟಿದ್ದರು. ಈಗಲೂ ಅದೇ ವಾದವನ್ನು ಇಡುತ್ತಾರೆ, ಅದು ನನಗೆ ಗೊತ್ತು. ನನಗೆ ಅಂದಿನ ಕಾಲದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳಾಗಿದ್ದ ನರಸಿಂಹ ರಾವ್‌ರವರು ಫೋನ್ ಮಾಡಿ ಹೇಳಿದರು. ಇದು ಭೂಸುಧಾರಣೆ ಕಾನೂನಿಗೆ ತಿದ್ದುಪಡಿಯನ್ನು ತಂದರೆ liberalisation ಪಾಲಿಸಿಯನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಆಗುತ್ತದೆಂದು, ಮಾನ್ಯ ಹೆಚ್.ಡಿ. ದೇವೇಗೌಡರು ನನಗೆ ಫೋನ್ ಮಾಡುತ್ತಿದ್ದಾರೆ. ಅದು ಏನು ಇದೆ, ನೋಡಿ ಎಂದು, ಅವರು ಒಂದಲ್ಲ ಮೂರು ಸಲ ಹೇಳಿದರು.

ಮಾನ್ಯ ರಾಜ್ಯಪಾಲರೂ ಸಹ ನನ್ನನ್ನು ಕರೆದು ಹೇಳಿದರು. ಅದಕ್ಕೆ ನಾನು ಹೇಳಿದೆ, ಸಾರ್, ಈ ಕಾನೂನು ಇಡೀ ರಾಜ್ಯದಲ್ಲಿ, ಒಂದು ಹೋರಾಟ ಸ್ವರೂಪದಲ್ಲಿ ಬಂದಂಥ ಕಾನೂನು ಆಗಿದೆ. ಇದಕ್ಕೆ ಒಂದು ಬ್ಯಾಕ್ ಗ್ರೌಂಡೆ ಇದೆ. ದಯವಿಟ್ಟು, ಯಾರಿಗಾದರೂ ನಾವು ಇವತ್ತು ಜಮೀನನ್ನು ಕೊಡಬೇಕಾದರೂ, ಇವತ್ತು ನಮ್ಮಲ್ಲಿ ಕಾನೂನುಗಳು ಇವೆ. ಲ್ಯಾಂಡ್ ಅಕ್ವಿಜೇಷನ್ ಆ್ಯಕ್ಟ್ ಇದೆ. ಕರ್ನಾಟಕ ಇಂಡಸ್ಟ್ರಿಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಮುಖಾಂತರ ಅಕ್ವಾಯರ್ ಮಾಡತಕ್ಕಂಥಾದ್ದು ಇದೆ. ಹೀಗೆ ಬೇರೆ ಬೇರೆ ಕಾನೂನುಗಳು ಇದ್ದಾಗ, ಆ ಉದ್ದೇಶವನ್ನು ಪೂರ್ತಿ ಮಾಡುವುದಕ್ಕೆ ನಾವು ಅದನ್ನು ಉಪಯೋಗಿಸಿಕೊಳ್ಳಬಹುದು. ಇದನ್ನು ತಿದ್ದುಪಡಿ ಮಾಡುವಂಥಾದ್ದು ಬೇಕಾಗಿಲ್ಲ ಎಂದು ಇವತ್ತೂ ಕೂಡ ತಾವು ಇಂಡಸ್ಟ್ರೀಗಳಿಗೆ ಜಮೀನನ್ನು ಕೊಡುತ್ತೀರಿ. ಅದನ್ನು ಯಾವುದರ ಮುಖಾಂತರ ಕೊಡುತ್ತೀರಿ. ಕೆ.ಐ.ಎ.ಡಿ.ಬಿ. ಮುಖಾಂತರವೇ ಕೊಡುತ್ತಿದ್ದೀರಿ. ಅದಕ್ಕಾಗಿ, ನಾವು ಹೇಳಿದಾಗ ಕೇಳಲಿಲ್ಲ, ಇಲ್ಲಿ ರೈತರಿಗೆ ಅನ್ಯಾಯವಾಗುತ್ತದೆಂದು ಹೇಳದರೂ ಕೇಳಲಿಲ್ಲ, ಇಲ್ಲಿ ರೈತರಿಗೆ ಅನ್ಯಾಯವಾಗುತ್ತದೆಂದು ಹೇಳಿದರೂ ಕೇಳಲಿಲ್ಲ, ಬಡ ರೈತರ ಜಮೀನುಗಳು ಹೋಗುತ್ತವೆಂದು ಹೇಳಿದರೂ ಕೇಳಲಿಲ್ಲ. One man, one profession ರೀತಿಯಲ್ಲಿ ನಮ್ಮ ರಾಜ್ಯದಲ್ಲಿ ಅನುಕೂಲವಾಗುತ್ತದೆ. ನಮ್ಮ ರಾಜ್ಯದಲ್ಲಿರುವಂತಹ ಪ್ರಗತಿಪರ ಕಾನೂನು ಇಡೀ ದೇಶದಲ್ಲಿ ಇಲ್ಲ. ಅಂತಹ ಕಮುನಿಸ್ಟ್ ರಾಜ್ಯವಾಗಿರುವಂತಹ ವೆಸ್ಟ್ ಬಂಗಾಳ್ ಮತ್ತು ಕೇರಳದಲ್ಲೂ ಕೂಡ ಇಂತಹ ಒಂದು ಕಾನೂನನ್ನು ತರುವುದಕ್ಕೆ ಸಾಧ್ಯವಾಗಲಿಲ್ಲ. ಅಷ್ಟೊಂದು ಬಿಗಿಯಾದಂಥ ಕಾನೂನಿಗೆ ರೈತ ಕುಟುಂಬದಿಂದ ಬಂದಂಥ ಮುಖಂಡರು ಇದನ್ನು ಸರಳಗೊಳಿಸಿ, ಇವತ್ತು ರೈತರ ಪರಕಣ್ಣೀರು ಹಾಕುವಂಥಾದ್ದು ಹೇಗೆ? ಎಷ್ಟರಮಟ್ಟಿಗೆ ಸಮಂಜಸ? ನಾವು ಅರ್ಥ ಮಾಡಿಕೊಳ್ಳಬೇಕು. ಈ ಕಂಪನಿಯ ಬಗ್ಗೆ, ಯಾವಾಗ ಹೆಚ್ಚಿನ ಭೂಮಿಯನ್ನು ಕೊಡುತ್ತಾರೆಂದಾಗ, ನಾವು ಇಲ್ಲೇ ನಿಂತು ಹೇಳಿದ್ದೇವೆ. ಹೆಚ್ಚಿನ ಭೂಮಿಯನ್ನು ಕೊಡಬೇಡಿ, ಎಕ್ಸ್‌ಪ್ರೆಸ್ ಹೈವೇಗೆ ಎಷ್ಟು ಬೇಕೋ ಅಷ್ಟನ್ನು ಕೊಡಿ, ಸ್ಯಟಲೈಟ್ ಟೌನ್ ಮಾಡಬೇಕೆಂದರೆ, ಅದು ಎಸ್ಟೇಟ್ ಏಜೆನ್ಸಿ ಬಿಸಿನೆಸ್ ಆಗುತ್ತದೆ. ಅದಕ್ಕಾಗಿ ದಯವಿಟ್ಟು ಇದನ್ನು ಮಾಡಬೇಡಿ ಎಂದು ಹೇಳಿದೆವು. ಆಗ ನಮ್ಮ ಮಾತಿಗೆ ಗಮನವನ್ನು ಕೊಡಲಿಲ್ಲ. ಈಗ ಕೋಟ್ ಮಾಡುತ್ತಾರೆ, ಆ ಕಾಲದಲ್ಲಿ ಇದೇ ಮಲ್ಲಿಕಾರ್ಜುನ ಖರ್ಗೆ ಏನು ಹೇಳಿದರು ? ಇದೇ ಶ್ರೀ ಹೆಚ್.ಕೆ. ಪಾಟೀಲ್‌ರವರು ಏನು ಹೇಳಿದರು ? ಇದು ನೋಡಿ ಎಂದು, ಟೇಬಲ್ ಮೇಲೆ ನಮ್ಮ ಸ್ಟೇಟ್‌ಮೆಂಟ್ ಅನ್ನು ಬಿಸಾಕುವಂಥಾದ್ದು ಆಯಿತು. ಆಗ ಏಕೆ ನೆನಪು ಬರಲಿಲ್ಲ ? ಯಾವ ಸಂದರ್ಭದಲ್ಲಿ ನಾವು

ಎಚ್ಚರಗೊಳಿಸಬೇಕೆಂದು ಹೇಳಿದ್ದೇವೆ. ಸದುದ್ದೇಶದಿಂದ ಹೇಳಿದ್ದೇವೆ. ಒಂದು ಕಮಿಟ್‌ಮೆಂಟ್ ಅನ್ನು ಇಟ್ಟುಕೊಂಡು ಹೇಳಿದ್ದೇವೆ. ಆಗ ನೀವು ಕೇಳಲಿಲ್ಲ. ಆದರೆ ಇವತ್ತು ತಿರುಗಿ ಅದೇ ಸ್ಟೇಟ್‌ಮೆಂಟ್ ಅನ್ನು ನಿಮ್ಮ ಬಾಯಲ್ಲಿ ತೆಗೆದುಕೊಂಡು, ಎಲ್ಲರಿಗೂ, ಬಡವರ ಬಗ್ಗೆ ಈ ಸರ್ಕಾರ ಹೇಳುತ್ತಿದೆ ಬಡವರಿಗೆ ಅನ್ಯಾಯವನ್ನು ಮಾಡಿ ಎಂದು ಯಾವ ಪಕ್ಷದವರೂ ಹೇಳುವುದಿಲ್ಲ, ಯಾವ ಶಾಸಕರೂ ಹೇಳುವುದಿಲ್ಲ, ನಾವಂತೂ ಹೇಳುವುದಕ್ಕೆ ಸಾಧ್ಯವೇ ಇಲ್ಲ. ನೋಡೋಣ, ಆ ಬಡವರಿಗೆ ರಕ್ಷಣೆಯನ್ನು ಮಾಡುವುದಕ್ಕೋಸ್ಕರ, ಬೇಕಾದರೆ ನೀವು ಒಂದು ಕಾನೂನನ್ನು ತೆಗೆದುಕೊಂಡು ಬನ್ನಿ. ಅದು ಎಂತಹ ಬಿಲ್ ತರುತ್ತಿರೋ ತನ್ನಿ, ಅದರಲ್ಲಿ ಏನು ಇದೆ? ಆದರೆ ಹೇಗೆ ನಿಮ್ಮ ತತ್ವದಲ್ಲೇ contradiction ಇದೆಯೆನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಕೇವಲ 8–10 ವರ್ಷಗಳಲ್ಲೇ ನಿಮ್ಮ ಕಮಿಟ್‌ಮೆಂಟ್, ನಿಮ್ಮ ಐಡಿಯಾಲಜಿಗಳು ಬದಲಾವಣೆಯಾಗುತ್ತವೆ. ಅದು ಇಂತಹ ವಿಶೇಷವಾಗಿ ಮಹತ್ವವಾದಂಥ ಕಾನೂನುಗಳಲ್ಲಿ ಆಗುತ್ತವೆ. ಒಬ್ಬ ವ್ಯಕ್ತಿ ಮಹತ್ವ ಅಲ್ಲ, ಒಬ್ಬ ಇಂಡಸ್ಟ್ರಿಯಲಿಸ್ಟ್ ಬರುತ್ತಾನೆ, ಹೋಗುತ್ತಾನೆ. ಆದರೆ ಇವೆಲ್ಲಾ ಬೇಸಿಕ್ ಆ್ಯಕ್ಟ್ಸ್ ಇವು ನೇರವಾಗಿ ಜಮೀನುಗಳಿಗೆ ಸಂಬಂಧಪಟ್ಟಂತಹ ಕಾನೂನುಗಳು ಆಗಿವೆ. ಅದು ಲ್ಯಾಂಡ್ ರೆವಿನ್ಯೂ ಆ್ಯಕ್ಟ್ ಇರಬಹುದು, ಭೂಸುಧಾರಣೆ ಕಾನೂನು ಇರಬಹುದು, ಇವು ನೇರವಾಗಿ ಮನುಷ್ಯನ ಅದರಲ್ಲೂ ವಿಶೇಷವಾಗಿ ರೈತರ ಜೀವನಕ್ಕೆ ಸಂಬಂಧಪಟ್ಟಂಥ ಕಾನೂನು. ಯಾವ ರೀತಿಯಾಗಿ ಇಡೀ ನಾಗರೀಕರಿಗೆ ಭಾರತೀಯ ಸಂವಿಧಾನ ಅಥವಾ ನಮ್ಮ fundamental rights ರೈಟ್ಸ್‌ಗೆ ಬೇಕಾದಂಥ ಒಂದು ಭಾರತೀಯ ಸಂವಿಧಾನ ಎಷ್ಟು ಅವಶ್ಯವೋ, ಅಷ್ಟೇ ನಮ್ಮ ರೈತರ ಹಿತರಕ್ಷಣೆಯನ್ನು ಮಾಡುವುದಕ್ಕೆ ಈ ಎರಡೂ ಕಾನೂನು ಇವತ್ತು ಬಹಳ ಮುಖ್ಯ. ಅದಕ್ಕಾಗಿ ನಿಮಗೆ discretion ಕೊಟ್ಟಿದ್ದು. ಆ ಕಾಲದಲ್ಲಿ ನಾವು ಹೇಳಿದಂಥಾದ್ದು, ನೀವು ಇದನ್ನು ರಿಲ್ಯಾಕ್ಸ್ ಮಾಡಬೇಡಿಯೆಂದು ಹೇಳಿ, ಈಗ ಏನು ಆಗುತ್ತಿದೆ? ಅನೇಕ ಅಪ್ಲಿಕೇಷನ್ಸ್ ನೇರವಾಗಿ ಗೌರ್ವನ್‌ಮೆಂಟ್‌ನಲ್ಲೇ ಬರುತ್ತವೆ. ಎಕ್ಸ್‌ಂಪಷನ್‌ಗೋಸ್ಕರ ಅವರಿಗೆ ಎಕ್ಸ್‌ಂಪಷನ್ ಕೊಟ್ಟೇಕೊಡುತ್ತೀರಿ. ಮಠ ಇರಬಹುದು, ಮಂದಿರ ಇರಬಹುದು ಅಥವಾ ಇನ್‌ಸ್ಟಿಟ್ಯೂಷನ್ ಇರಬಹುದು, ಟ್ರಸ್ಟ್ ಇರಬಹುದು, ಅಸೋಸಿಯೇಷನ್ ಇರಬಹುದು. ಅಥವಾ ಯಾವುದೇ ಒಂದು ಹಾರ್ಟಿಕಲ್ಚರ್ ಮಾಡತಕ್ಕಂಥದ್ದಕ್ಕೆಲ್ಲಾ ಒಂದಲ್ಲೊಂದು ರೂಪದಲ್ಲಿ ಎಗ್ಜಮ್‌ಶನ್ ತೆಗೆದುಕೊಂಡು ಖರೀದಿ ಮಾಡುತ್ತಾರೆ. ಈರೀತಿಯಾದಾಗ ಸ್ಲೋಲಿ ಯಾರ ಭೂಮಿ ಹೋಗುತ್ತದೆ? ಇದರಿಂದ ಬಡವರ ಮತ್ತು ರೈತರ ಭೂಮಿಗಳು ಉಳ್ಳವರ ಹತ್ತಿರ ಅಂದರೆ ಹಣ ಇದ್ದವರ ಹತ್ತಿರ ಹೋಗುತ್ತಿದೆ. ಇದರ ಒಂದು ಚಿಂತನೆ ನಾನು 10–11

ವರ್ಷಗಳ ಹಿಂದೆಯೇ ಮಾಡಿದ್ದೆ ಆದರೆ, ಅದಕ್ಕೆ ಗೌರವ ಸಿಗಲಿಲ್ಲ. ಆದರೆ, ಈಗ ಅದಕ್ಕೆ ಗೌರವ ಸಿಗುತ್ತಿದೆ. ಎಕ್ಸ್‌ಪ್ರೆಸ್ ಹೈವೇ ಹೋಗುತ್ತಿದೆ ಮತ್ತೆ ಅಲ್ಲಿ 7 ಸೆಟಲೈಟ್ ಟೌನ್‌ಗಳು ಬರುತ್ತಿವೆ. ಈ 7 ಸೆಟಲೈಟ್ ಟೌನ್‌ಗಳಿಗೋಸ್ಕರ ಅನೇಕ ಭೂಮಿಗಳು ಇವತ್ತಿನದಿವಸ ಹೋಗುತ್ತಿವೆ. ಅದಕ್ಕಾಗಿ ಅವರಿಗೆ ಎಷ್ಟು ಬೇಕೋ ಅಷ್ಟನ್ನು ಕೊಟ್ಟು ಬಾಕಿ ಜಮೀನನ್ನು ಉಳಿಸಿಕೊಳ್ಳಬೇಕಾಗಿದೆ ಎನ್ನತಕ್ಕಂಥದ್ದು ಈಗ ಬಂದಿದೆ. ಇಂಥ ಅನೇಕ ಪ್ರಾಜೆಕ್ಟ್‌ಗಳು ಬೇರೆ ಕಡೆ ಕೂಡ ಬಂದಿವೆ. ಅಂದರೆ ಈ ರೀತಿಯಾಗಿ ಮೈಸೂರಿನಲ್ಲಿರಬಹುದು ಅಥವಾ ಬೆಂಗಳೂರಿನ ಅಕ್ಕಪಕ್ಕದಲ್ಲಿ ಮತ್ತು ಬೇರೆ ಕಡೆ ಕೂಡ ಇರಬಹುದು. ಇದಕ್ಕೋಸ್ಕರ ಸಾವಿರಾರು ಎಕರೆ ಜಮೀನುಗಳನ್ನು ಕೊಡುತ್ತಲೇ ಬರುತ್ತಿದ್ದೇವೆ. ಎಲ್ಲದಕ್ಕೂ ಒಂದು ಚಿಂತನೆ ಮಾಡಿ, ಎಲ್ಲದಕ್ಕೂ ಒಂದು ಕಾನೂನು ಮಾಡಿ ಅಂದರೆ ಕಾನೂನು ಮಾಡಿ ಅವುಗಳನ್ನು ಉಳಿಸತಕ್ಕಂಥ ಒಂದು ಪ್ರಯತ್ನ ಮಾಡಿ. ಆದರೆ, ಪಿಕ್ ಅಂಡ್ ಚೂಸ್ ಏಕೆ? ಮೊನ್ನೆದಿವಸ ಮಾನ್ಯ ದೇಶಪಾಂಡೆಯವರು ಮತ್ತು ಮಾನ್ಯ ವಾಟಾಳ್‌ನಾಗರಾಜ್‌ರವರು ಹಾಗೂ ಎಲ್ಲರೂ ಕೂಡ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದೇನೆಂದರೆ ಹೆಚ್ಚುವರಿ ಭೂಮಿ ಇದ್ದರೆ ಅದಕ್ಕೆ ಅಕ್ವಿಜಿಷನ್ ಇನ್ನೂ ಫೈನಲೈಸ್ ಆಗದೇ ಇದ್ದರೆ ಅಂದರೆ ಅದಕ್ಕೆ ಫೈನಲ್ ನೋಟಿಫಿಕೇಷನ್ ಆಗದೇ ಹೋಗಿದ್ದರೆ, ತಾವು ದಯವಿಟ್ಟು ಅದನ್ನು ಡ್ರಾಪ್ ಮಾಡಿ ಪೊಸಿಷನ್ ತೆಗೆದುಕೊಳ್ಳಿ ಎಂದು ಎಲ್ಲರೂ ಕೂಡ ಹೇಳಿದ್ದಾರೆ. ಈ ಕೆಲಸವನ್ನೂ ತಾವು ಮಾಡಬಹುದಾಗಿತ್ತಲ್ಲಾ. ನಮ್ಮ ಸರ್ಕಾರ 5 ವರ್ಷ ಇತ್ತು. ಆನಂತರ ಮಾನ್ಯ ಕೃಷ್ಣರವರ ಸರ್ಕಾರ ಬಂತು ಎಂದು ತಾವು ಹೇಳಬಹುದು. ಸಮ್ಮಿಶ್ರ ಸರ್ಕಾರದಲ್ಲಿ ನಾವು ನೀವು ಕೂಡಿಯೇ ಇದ್ದೆವು. ಮಾನ್ಯ ಧರ್ಮಸಿಂಗ್‌ರವರ ನೇತೃತ್ವದಲ್ಲಿ ನಡೆಯುತ್ತಿದ್ದಂಥ ಸರ್ಕಾರದಲ್ಲಿಯೂ ಕೂಡ ನಿಮ್ಮ ಆಡಳಿತಕ್ಕೆ ಯಾವುದೇ ರೀತಿಯ ದಿಕ್ಕು ಕೂಡ ಇರಲಿಲ್ಲ. ಮಾನ್ಯ ಧರ್ಮಸಿಂಗ್‌ರವರು ನೆನ್ನೆದಿವಸ ಮಾತನಾಡತಕ್ಕಂಥ ಸಂದರ್ಭದಲ್ಲಿ ಒಂದು ಮಾತನ್ನು ಸ್ಪಷ್ಟಪಡಿಸಿದರು. ಅದೇನೆಂದರೆ, ಕೆ.ಸಿ.ರೆಡ್ಡಿ ಕಮಿಟಿಯನ್ನು ಯಾರೋ ಒತ್ತಾಯದ ಮೇರೆಗೆ ಮಾಡಬೇಕಾಗಿತ್ತು. ನಾನು ಒಂದು ಸಮ್ಮಿಶ್ರ ಸರ್ಕಾರದಲ್ಲಿ ಭಾಗಿಯಾಗಿದ್ದಾಗ ಸರ್ಕಾರವನ್ನು ನಡೆಸಬೇಕಾದರೆ ನಾವು ಸಮ್ಮಿಶ್ರ ಸರ್ಕಾರದ ಬೇರೆ ಅಂಗಪಕ್ಷದವರ ಮಾತುಗಳನ್ನು ಅನೇಕ ಸಲ ಕೇಳಬೇಕಾಗಿರತಕ್ಕಂಥ ಪರಿಸ್ಥಿತಿ ಬಂದಾಗ ನಾವು ಕೇಳಿದ್ದೇವೆ ಎನ್ನತಕ್ಕಂಥ ಮಾತನ್ನು ನೆನ್ನೆದಿವಸ ಕೂಡ ಅವರು ಹೇಳಿದ್ದಾರೆ. ಅಂದರೆ, ಆ ಒಂದು ಕಮಿಟಿ ಮಾಡುವುದಕ್ಕೆ ಒತ್ತಡ ಇರಬಹುದು ಅದೇ ರೀತಿಯಾಗಿ ಲ್ಯಾಂಡ್ ಅಕ್ವಿಸಿಶನ್ ಡ್ರಾಪ್ ಮಾಡಿ ಆ ಜಮೀನನ್ನು ಸಂಬಂಧಪಟ್ಟಂಥ ರೈತರಿಗೆ ಕೊಡುವುದಕ್ಕೆ ಸಾಧ್ಯವಿದ್ದರೆ ಕೊಡಬಹುದಾಗಿತ್ತಲ್ಲಾ? ಸಮ್ಮಿಶ್ರ ಸರ್ಕಾರ ಇದ್ದಂಥ ಈ ಎರಡು ವರ್ಷದಲ್ಲಿ

ಇದನ್ನು ಮಾಡಬಹುದಾಗಿತ್ತಲ್ಲಾ? ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಗೌವರ್ನರ್‌ಗೆ ಬರೆದಿರತಕ್ಕಂಥ ಪತ್ರದಲ್ಲಿ ಈ ಮಾತನ್ನು ಹೇಳಿದ್ದಾರೆ. ಏನೆಂದು ಹೇಳಿದ್ದಾರೆಂದರೆ, ಚುನಾವಣೆ ಸಂದರ್ಭದಲ್ಲಿ ಕೆಲವು ಜಮೀನುಗಳು ನೋಟಿಫಿಕೇಷನ್ ಮಾಡಿದಾಗ, ಇದು ಸರಿಯಲ್ಲ ಎನ್ನತಕ್ಕಂಥದನ್ನು ಹೇಳಿದ್ದಾರೆ. ಅಂದರೆ ಈ ವಿಷಯಗಳು ಯಾವಾಗ ಪ್ರಸ್ತಾಪವಾಗಿವೆ ಎಂದರೆ ಯಾವಾಗ ಚುನಾವಣೆಗಳು ಬಂದಿವೆ ಎನ್ನತಕ್ಕಂಥ ದೃಷ್ಟಿಯಿಂದ 1–4–2004ರಲ್ಲಿ ರಾಜ್ಯಪಾಲರಿಗೆ ನೇರವಾಗಿ ಬರೆದಂಥ ಪತ್ರಗಳಲ್ಲಿ ರಾಜಕೀಯ ಉದ್ದೇಶ ಇದೆ ಎನ್ನತಕ್ಕಂಥದ್ದನ್ನು ಕೇಳಿದ್ದರಿಂದ ನಾನು ಈ ಸಂದರ್ಭದಲ್ಲಿ ಈ ಮಾತನ್ನು ಹೇಳಬೇಕಾಗಿದೆ. ಅಂದರೆ ಎಲ್ಲವೂ ಕೂಡ ರಾಜಕೀಯ ದೃಷ್ಟಿಯಿಂದ ನಾವೆಲ್ಲರೂ ಈ ಪ್ರಾಜಕ್ಟ್‌ನ್ನು ನೋಡಿಕೊಂಡು ಬಂದಿದ್ದೇವೆಯೋ ಹೊರತಾಗಿ ರೈತರಿಗೆ ನೇರವಾಗಿ ಸಹಾಯ ಮಾಡಬೇಕೆಂಬ ದೃಷ್ಟಿಯಿಂದ ಇದು ಬಂದಿಲ್ಲ. ಇದರ ಬಗ್ಗೆ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ಆದೇಶ ಕೂಡ ಬಂತು. ಅದರಲ್ಲಿ ಏನೇನಿದೆ ಎಂದು ಈಗಾಗಲೇ ಇಲ್ಲಿ ಪ್ರಸ್ತಾಪ ಆಗಿದೆ. ಮಾನ್ಯ ಮಾಧುಸ್ವಾಮಿಯವರು ಪೆಟಿಷನ್ ಹಾಕಿದ ಮೇಲೆ ಅದರ ಮೇಲೆ ಏನು ಕಾಮೆಂಟ್ ಆಯಿತ್ತೆಂಬುದು ಮತ್ತು ಮಾನ್ಯ ಶ್ರೀ ರಾಮರೆಡ್ಡಿಯವರು ಹಾಕಿದ ಮೇಲೆ ಏನು ಕಾಮೆಂಟ್ ಆಯಿತ್ತೆಂಬುದು ಮತ್ತು ಹೈ ಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನ ಆದೇಶವನ್ನು ನಾನು ಪದೇಪದೇ ಕೋಟ್ ಮಾಡಿ ಹೇಳುವುದಕ್ಕೆ ಹೋಗುವುದಿಲ್ಲ. ಅಂದರೆ ಅದು ಯಾವರೀತಿಯಾಯಿತೆಂಬುದು ಮತ್ತು ಯಾವರೀತಿಯಾಗಿ ಅದು ಡಿಸ್‌ಪೋಸ್ ಆಯಿತೆಂಬುದರ ಬಗ್ಗೆ ಹೇಳುವುದಿಲ್ಲ. ಈ ಸದನಕ್ಕೆ ಹೊಸ ಕಾನೂನು ಮಾಡುವುದಕ್ಕೆ ಏನೂ ಅಭ್ಯಂತರ ಇಲ್ಲ. ಆದರೆ, ನಿಮ್ಮ ಉದ್ದೇಶ ಏನು ಎನ್ನತಕ್ಕಂಥದ್ದು ಬಹಳ ಮುಖ್ಯವೇ ಹೊರತು ಕಾನೂನು ಮಾಡುವುದಕ್ಕೆ ಯಾರೂ ಕೂಡ ಅಡ್ಡಿ ಬರುತ್ತಿಲ್ಲ. ನೀವು ಕಾನೂನನ್ನು ಮಾಡಬೇಕೆಂದು ಇದ್ದರೆ, ಇದನ್ನು ಮೊದಲೇ ಮಾಡಬೇಕಾಗಿತ್ತು. ಆದರೆ, ಈಗ ತಾವು ಏನು ಮಾಡಿದ್ದೀರೆಂದರೆ, ನಿಮ್ಮ ಪಕ್ಷದ ಉದ್ದೇಶ ಏನೆಂಬುದರ ಬಗ್ಗೆ ಈಗಾಗಲೇ ಹೊರಗಡೆ ಜಾಹೀರು ಮಾಡಿದ್ದೀರಿ. ಅಂದರೆ ಈ ವಿಷಯವನ್ನು ಪತ್ರಿಕೆ ಮತ್ತು ಜಾಹಿರಾತಿನ ಮುಖಾಂತರ ಹಾಗೂ ಟಿ.ವಿ. ಮುಖಾಂತರ ಹಾಗೆಯೇ ಒಂದಲ್ಲ, 10 ಕಡೆ ಈ ವಿಷಯವನ್ನು ಹೇಳಿಕೊಂಡು ಬಂದಿದ್ದೀರಿ. ಏನು ಹೇಳಿಕೊಂಡು ಬಂದಿದ್ದೀರೆಂದರೆ, ಬಡ ಜನರ ಜಮೀನನ್ನು ಉಳಿಸಬೇಕೆಂಬ ದೃಷ್ಟಿಯಿಂದ ನಾವು ಹೊರಟಿದ್ದೇವೆಂದು ಹೇಳಿದ್ದೀರಿ. ಇವತ್ತಿನ ದಿವಸ ಜೆಡಿಎಸ್ ಪಕ್ಷ ಒಂದು ಪ್ರಮುಖ ಅಂಗವಾಗಿದೆ. ಮತ್ತೆ ಮುಖ್ಯಮಂತ್ರಿಗಳೂ ಕೂಡ ಜೆಡಿಎಸ್ ಪಕ್ಷದವರೇ ಆಗಿದ್ದಾರೆ. ಎಲ್ಲಾ ಪತ್ರಿಕೆಗಳಲ್ಲಿ ಕೂಡ ಜಾಹಿರಾತು ಕೊಟ್ಟಿದ್ದಾರೆ.

ಅಂದರೆ, ಜನರಿಗೆ ಇದರ ಬಗ್ಗೆ ಅರ್ಥವಾಗಲಿ ಮತ್ತು ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ನಲ್ಲಿ ಹೇಳಿತರಕ್ಕಂಥದ್ದನ್ನು ಸುಮ್ಮನೆ ತಿರುಚಿ-ಮುರುಚಿ ಎಲ್ಲರೂ ಕೂಡ ಹೇಳುವುದು ಬೇಡ ಎಂದು ಅವರದೇ ಆದಂಥ ವ್ಯಾಖ್ಯಾನಗಳನ್ನು ಮಾಡಿ ಒಂದು ದೊಡ್ಡ ಪೇಜ್‌ನಲ್ಲಿ ಸಂಪೂರ್ಣವಾಗಿ ಜಾಹಿರಾತು ಕೊಟ್ಟಿದ್ದಾರೆ. ಮತ್ತೆ ಇದಕ್ಕೆ ಲಕ್ಷಾಂತಾರ ರೂಪಾಯಿಯನ್ನು ಪಕ್ಷದ ವತಿಯಿಂದ ಖರ್ಚು ಮಾಡಿ ಇದನ್ನು ಮಾಡಿದ್ದಾರೆ. ಇದರ ಉದ್ದೇಶ ಏನಿರಬಹುದು ? ಪಕ್ಷದ ವತಿಯಿಂದ ಈ ಜಾಹಿರಾತು ಕೊಡಬೇಕೆಂದರೆ ಅವರ ಪಾಲಿಸಿ ಇದರಲ್ಲಿ ಇದೆ. ಅವರ ಧೋರಣೆ ಕೂಡ ಇದೆ. ಆದ್ದರಿಂದ ಈ ಒಂದು ಧೋರಣೆ ಮತ್ತು ಪಾಲಿಸಿಯನ್ನು ಅನುಷ್ಠಾನ ಮಾಡಬೇಕೆಂದರೆ ಅದನ್ನು ಬಿಲ್ ಮುಖಾಂತರ ಮಾಡಬೇಕು ಇಲ್ಲದಿದ್ದರೆ ಎಲ್ಲಾ ಕಾನ್ಸೆನ್ಸಸ್‌ಗೆ ಬಂದಿವೆ ಮತ್ತೆ ಹೊರಗಡೆ ಕೂಡ ಈರೀತಿಯಾಗಿಯೇ ಬಂದಿದೆ ಹಾಗೆಯೇ ಸದನದಲ್ಲಿ ಕೂಡ ಈ ರೀತಿಯಾಗಿ ಮಾತನಾಡಿದ್ದಾರೆ. ಅದಕ್ಕಾಗಿ ನಾವು ಇದನ್ನು ಮಾಡುತ್ತೇವೆ ಎಂದು ಹೇಳಿದ್ದೀರಿ. ಆದರೆ ನೀವು ಮೊದಲೇ ಜಾಹಿರಾತಿನಲ್ಲಿ ಹೇಳಿಕೊಂಡಿದ್ದೀರಿ. ಅದೇನೆಂದರೆ, ಮಾನ್ಯ ಪ್ರಕಾಶ್‌ರವರೂ ಕೂಡ ಇದರ ಬಗ್ಗೆ ಗಮನ ಕೊಡಬೇಕು. ಏಕೆಂದರೆ, ಇದು ನಿಮ್ಮ ನೇತೃತ್ವದಲ್ಲಿಯೇ ನಡೆದಿದೆ ಮತ್ತೆ ಇದು ವ್ಯಾಕರಣಬದ್ಧವಾಗಿದ್ದು ಇದನ್ನು ನೀವು ಮತ್ತು ಮಾನ್ಯ ದತ್ತಾರವರು ಕುಳಿತುಕೊಂಡು ಚೆನ್ನಾಗಿ ಮಾಡಿದ್ದೀರಿ. ನಾನು ಇಲ್ಲವೆಂದು ಹೇಳುವುದಿಲ್ಲ. ಏಕೆಂದರೆ ನನಗೆ ಆ ಭಾಷೆ ಬರುವುದಿಲ್ಲ. ದುರ್ದೈವದಿಂದ ನಾವು ಹೈದರಾಬಾದ್ ಕರ್ನಾಟಕದ ಭಾಗದಲ್ಲಿ ಹುಟ್ಟಿದ್ದು, ಭಾಷೆಯ ಮೇಲೆ ಅಷ್ಟೊಂದು ಪ್ರಭುತ್ವ ಇಲ್ಲ. ಸುಮ್ಮನೆ ಸಹಜವಾಗಿ ವಾಡಿಕೆ ಮಾತೇ ಜಾಸ್ತಿಯಾಡುತ್ತೇವೆ, ಪ್ರಕಾಶ್‌ರವರು ಬಳ್ಳಾರಿಯವರು ಅವರಿಗೆ ಬಹಳ ಅಥಾರಿಟಿ ಆನ್ ಲಾಂಗ್ವೇಜ್ ಇದೆ.

ಶ್ರೀ ಎಂ.ಪಿ. ಪ್ರಕಾಶ್ : ನಿಮ್ಮ ಅನುಭವದ ಮುಂದೆ ನಾವೇನೂ ಸಾಟಿಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಪ್ರಕಾಶ್‌ರವರು ನನ್ನ ಬಗ್ಗೆ ಸಮಾಧಾನದ ಮಾತನ್ನು ಹೇಳಿದ್ದಾರೆ. ಥ್ಯಾಂಕ್ಯು ವೆರಿಮಚ್. ಜನತಾದಳ-(ಎಸ್) ಬಯಸುವುದೇನು ಎಂಬುದನ್ನು ಅವರೇ ಹೇಳಿಕೊಂಡಿದ್ದಾರೆ. ಇದನ್ನು ನಾವು ಹೇಳಿರತಕ್ಕಂಥದ್ದಲ್ಲ. ಅವರು ಬಯಸುವುದೇನೆಂದರೆ, ಜಾಗತಿಕಮಟ್ಟದ ಗುತ್ತಿಗೆದಾರರಿಂದ 333 ಕೋಟಿ ರೂಪಾಯಿಗಳ ವೆಚ್ಚದಲ್ಲಿ ರಸ್ತೆ ನಿರ್ಮಿಸಿ, ನೈಸ್ ಕಂಪನಿ ಮಾಡಲು ಉದ್ದೇಶಿಸಿರುವ ರಸ್ತೆ ನಿರ್ಮಾಣಕ್ಕೆ ಹೊರತು ಪಡಿಸಿದ್ದ ಭೂಮಿಯನ್ನು ಸರ್ಕಾರವೇ ಸಾರ್ವಜನಿಕವಾಗಿ ಹರಾಜು ಮಾಡಿ ಆ ಮೂಲಕ ಬರುವ ಅಪಾರ ಮೊತ್ತದ ಹಣದಲ್ಲಿ ಒಂದು ಭಾಗವನ್ನು ಮತ್ತಷ್ಟು ಮೂಲಭೂತ ಅಭಿವೃದ್ಧಿ

ಸೌಲಭ್ಯಗಳಿಗೆ ವಿನಿಯೋಗಿಸಬಹುದಾಗಿದೆ. ಮತ್ತೊಂದು ಭಾಗವನ್ನು ಆ ಪ್ರದೇಶದಲ್ಲಿ ಬರುವ ಬಡವರ ಸಾಮಾಜಿಕ ಆರ್ಥಿಕ ಉನ್ನತೀಕರಣಕ್ಕೆ ಬಳಸಬಹುದಾಗಿದೆ. ಭೂಮಿಯನ್ನು ಕಳೆದುಕೊಳ್ಳುವ ರೈತರಿಗೆ ಹೆಚ್ಚಿನ ಪರಿಹಾರವನ್ನು ಮತ್ತು ಪ್ರತಿಫಲವನ್ನು ನೀಡಬಹುದಾಗಿದೆ. ಈರೀತಿಯಾಗಿ ಮೊದಲ ಹಂತದ ಯೋಜನೆಯಲ್ಲಿ ಸರ್ಕಾರ ಸುಮಾರು 4 ಸಾವಿರ ಕೋಟಿ ರೂಪಾಯಿಗಳನ್ನು ಕ್ರೋಢೀಕರಿಸಬಹುದಾಗಿದೆ. ಇದೇ ರೀತಿಯಾಗಿ ಜಾಗತಿಕ ಮಟ್ಟದ ಗುತ್ತಿಗೆದಾರರಿಂದ ಇಡೀ ಕಾಮಗಾರಿಯನ್ನು ಮಾಡಿಸಿದ್ದಲ್ಲಿ ಸರ್ಕಾರ ಕನಿಷ್ಠ ಸಾವಿರ ಕೋಟಿ ರೂಪಾಯಿಗಳಷ್ಟು ಆರ್ಥಿಕ ಸಂಪನ್ಮೂಲವನ್ನು ಕ್ರೋಢೀಕರಣ ಮಾಡಬಹುದಾಗಿದೆ. ಇದು ಅವರ ಉದ್ದೇಶ. ಈ ಉದ್ದೇಶವನ್ನು ಪೂರ್ತಿ ಮಾಡುವುದಕ್ಕೆ ನಿಮಗೆ ಯಾರು ಬೇಡವೆಂದರು ? ಮತ್ತೆ ಇದನ್ನು ಯಾರು ನಿಲ್ಲಿಸಿದರು ಅಥವಾ ಈ ಸದನದಲ್ಲಿ ಏನಾದರೂ ಆತಂಕವನ್ನು ವ್ಯಕ್ತಪಡಿಸಿದರಾ ? 10 ಸಾವಿರ ಕೋಟಿ ರೂಪಾಯಿಗಳನ್ನು ನೀವು ಅಲ್ಲಿ ಗಳಿಸಿ ಆ ರೈತರಿಗೆ ಹೆಚ್ಚಿನ ಪರಿಹಾರ ಕೊಟ್ಟು ಮತ್ತೆ ಅಲ್ಲಿ ಮೂಲಭೂತ ಸೌಕರ್ಯ ಕೊಟ್ಟು ಇಷ್ಟೆಲ್ಲಾ ಮಾಡುತ್ತಿರೆಂದರೆ ಖಂಡಿತವಾಗಿ ನೀವು ಧನ್ಯರು. ಆದರೆ, ಒಂದು ಸಾರಿ award ಆದಮೇಲೆ, ಒಂದು ಸಾರಿ possession ತೆಗೆದುಕೊಂಡಮೇಲೆ no objection ಇಲ್ಲದಿದ್ದಾಗ consent ಮೇಲೆ ಕೊಟ್ಟಂಥ ಭೂಮಿಗೆ ಪುನಃ ಹೆಚ್ಚಿನ ಹಣವನ್ನು compensation ರೂಪದಲ್ಲಿ ಕೊಡುವುದಕ್ಕೆ ಸಾಧ್ಯವೇ? ಕಾನೂನು ಪ್ರಕಾರ ಬರುತ್ತದೆಯೇ? ಇದನ್ನು ಮಾನ್ಯ ಮಾಧುಸ್ವಾಮಿಯವರು ಹೇಳಬೇಕು. ಏಕೆಂದರೆ ಅವರು ಒಳ್ಳೆಯ ವಕೀಲರು ಮತ್ತು argument ಅನ್ನು ಚೆನ್ನಾಗಿ ಮಾಡುತ್ತಾರೆ, consent ನಲ್ಲಿ ಒಂದು ಸಾರಿ ನಿಮ್ಮ ಜಮೀನನ್ನು ಕೊಟ್ಟ ಮೇಲೆ compensation without protest ತೆಗೆದುಕೊಂಡ ಮೇಲೆ, appeal file ಮಾಡದಿದ್ದಾಗ, ಎಲ್ಲೂ ಕೂಡ protest ಮಾಡದಿದ್ದಾಗ, ಅಂಥವರಿಗೆ ನೀವು ಪುನಃ ಕೊಡುವುದಕ್ಕಾಗುತ್ತದೆಯೇ? ಮತ್ತ್ಯಾಕೆ ಇಂಥ ಸುಳ್ಳು ಮಾತುಗಳನ್ನು ಪ್ರಕಟ ಮಾಡಿ ಜನಗಳಿಗೆ ಮೋಸ ಮಾಡುತ್ತೀರಿ ?

ಶ್ರೀ ಜೆ.ಸಿ. ಮಾಧುಸ್ವಾಮಿ : ಬೇರೆ ರೀತಿಯಲ್ಲಿ ಅನುಕೂಲ ಮಾಡಬಹುದಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರೀ ಮಾಧುಸ್ವಾಮಿಯವರೆ, ಈ ರೀತಿಯಾಗಿ ಹೇಳಿದರೆ ನಾನು ಏನು ಹೇಳಲಿ? ಅದನ್ನು ನೀವು ಕೊಡಬೇಡಿ ಎಂದು ಯಾರು ಹೇಳಿದರು? ಇನ್ನು ಎರಡನೆಯದು, ವಾಸ್ತವಾಂಶ ಎಂದರೇನು? 'NICE

company ಯ ಬಾಕಿ ತಃಖ್ತೆ ತಿಳಿಸುವಂತೆ NICE companyಯ ಬಳಿ ಯಾವುದೇ ನಿರ್ಮಾಣ ಸಾಧನಗಳಿಲ್ಲ, ಯಂತ್ರೋಪಕರಣಗಳಿಲ್ಲ,' ಹಾಗಾದರೆ, ಇವೆಲ್ಲಾ ಗೊತ್ತಿದ್ದರೂ ಕೂಡ ಎರಡು ವರ್ಷಗಳಿಂದ ಸುಮ್ಮನಿದ್ದಿರಿ ಏಕೆ? ಮಾನ್ಯ ಕೃಷ್ಣರವರು ನಿಮ್ಮ ಮಾತು ಕೇಳುತ್ತಿರಲಿಲ್ಲ ಎಂದು ತಿಳಿದುಕೊಳ್ಳಿ. ಸಮ್ಮಿಶ್ರ ಸರ್ಕಾರದಲ್ಲಿ ನೀವು ನಾವು ಕೂಡಿಯೇ ಇದ್ದೆವು. ಇಂಥ ಸಲಹೆಯನ್ನು ಕೊಟ್ಟು ಮಾಡಬಹುದಾಗಿತ್ತಲ್ಲವೇ? ಬೇಡ ಎಂದು ಯಾರು ಹೇಳಿದ್ದರು? ಇದಕ್ಕೆ ಯಾರಾದರೂ ಅಡ್ಡ ಬಂದಿದ್ದರಾ? ಅಥವಾ ಅಪಸ್ವರ ತೆಗೆದಿದ್ದರಾ? ಅಂದರೆ ಇದು ಆನೆಯ ಹಲ್ಲಿನ ಹಾಗೆ, ತೋರಿಸುವುದಕ್ಕೆ ಒಂದು ತಿನ್ನುವುದಕ್ಕೆ ಒಂದು ಇರುತ್ತದೆಯಲ್ಲಾ, ಹಾಗೆ, ಹಾಗಾಗಿ ನೀವು ಏನು ಮಾಡಬೇಕೆನ್ನುವ commitment ಇದ್ದರೆ ಆರಂಭದಿಂದಲೇ ಇದನ್ನು ಮಾಡಿ ತೋರಿಸಬೇಕಾಗಿತ್ತು. ಆದರೆ, ಸಂಕಟ ಬಂದಾಗ ವೆಂಕಟರಮಣ ಎಂದು ಹೇಳಿ, ಈಗ ಮಾತ್ರ ನಿಮಗೇನೋ ಅನ್ನಿಸಿತು, ಒಂದು ಬರೆದಿದ್ದೇವೆ, ಪುನಃ ಅದನ್ನು ಯಾವ ರೀತಿಯಾಗಿ ಆಚರಣೆಗೆ ತರಬೇಕೆಂದು ಹೇಳಿ ಹೊರಟರೆ ಇದು ಸರಿ ಕಾಣುವುದಿಲ್ಲ. ನಿಮ್ಮ ಉದ್ದೇಶ ರೈತರಿಗೆ ನ್ಯಾಯವಾಗಿ ಮಾಡತಕ್ಕಂಥದ್ದು ಇದ್ದರೂ ಕೂಡ, ನಿಮ್ಮ ಹೇಳಿಕೆಗಳು, ಅನಿಸಿಕೆಗಳನ್ನು ಇದರಲ್ಲಿ ಪ್ರಕಟ ಮಾಡಿರುವುದು ನೋಡಿದರೆ ನಿಮ್ಮ ಉದ್ದೇಶ ಬೇರೆ ಇದೆಯೆಂದು ತೋರುತ್ತದೆ. ನೀವು ಬಹಿರಂಗಪಡಿಸಿಕೊಂಡಿದ್ದನ್ನು ಇಲ್ಲಿ ಹೇಳುತ್ತಿದ್ದೇನೆಯೇ ಹೊರತು, ನಾನು ಹುಟ್ಟಿಸಿಕೊಂಡು ಹೇಳುತ್ತಿಲ್ಲ. 'ಜನತಾದಳ (ಎಸ್) ಬಯಸುವುದೇನು?' ಇದು ಬಯಸುತ್ತಾ ಇದೆ. ಕಾನೂನು ಪ್ರಕಾರ ಇದು ಆಗಬಹುದೇ ಅಥವಾ ಇಲ್ಲವೇ ಎನ್ನುವುದು ಅವರಿಗೂ ಗೊತ್ತಿದೆ, ಹೇಗೆಂದರೆ, 'ಈ ಭಾಗವನ್ನು ಮತ್ತಷ್ಟು ಮೂಲಭೂತ ಅಭಿವೃದ್ಧಿ ಸೌಲಭ್ಯಗಳಿಗೆ...' ಇದು ಆಗಬಹುದು. ಆದರೆ, '...ಅಪಾರ ಮೊತ್ತದ ಹಣದಲ್ಲಿ ಒಂದು ಭಾಗವನ್ನು.....' ಆಮೇಲೆ, 'ಮತ್ತೊಂದು ಭಾಗವನ್ನು ಆ ಪರಿಹಾರ ಮತ್ತು ಪ್ರತಿಫಲವನ್ನು ನೀಡಬಹುದಾಗಿದೆ.' ಇವೆಲ್ಲವನ್ನೂ ಕೂಡ ಅದರ ಸಾಧಕಬಾಧಕ ಯೋಚನೆ ಮಾಡಿ, ಇದು ಸಾಧ್ಯವೇ ಅಥವಾ ಇಲ್ಲವೇ ಎನ್ನುವುದನ್ನು ನೋಡಿ advertisement ಕೊಡಬೇಕೇ ವಿನಃ ಜನರ attraction ಗೋಸ್ಕರ, ನೋಡಿ, ಎಷ್ಟು ಚೆನ್ನಾಗಿ ಕೊಟ್ಟಿದ್ದಾರೆ, ಅವರ ಉದ್ದೇಶ ಚೆನ್ನಾಗಿದೆ, ಸದನದಲ್ಲಿ ಬೇರೆ ಎಂಎಲ್‌ಎ ಗಳು ಇದಕ್ಕೆ ವಿರೋಧ ಕಾಣುತ್ತಾರೆ, ಅಥವಾ ಕಾಂಗ್ರೆಸ್ ಪಕ್ಷದವರು ಇದಕ್ಕೆ ವಿರುದ್ಧ ಇರಬಹುದು, ಅಥವಾ ಬೇರೆ ಪಕ್ಷದವರು ವಿರೋಧ ಇರಬಹುದು, ಜೆ.ಡಿ.ಎಸ್.ನವರು ಮಾತ್ರ ಬಹಳ ಒಳ್ಳೆಯವರು, ರೈತರ ಪರ, ಬಡವರ ಪರ, ದಲಿತರ ಪರ, ಏಕೆಂದರೆ ಅವರು Governor ರವರಿಗೆ ಬರೆದಂಥ ಪತ್ರದಲ್ಲಿ ಕೂಡ ಈ ಶಬ್ದಗಳು ಇವೆ.

ಅದಕ್ಕೆ ಆ ಪದಗಳನ್ನು ನಾನು ಇಲ್ಲಿ ಬಳಸುತ್ತಿದ್ದೇನೆ. So, ಇವರೆಲ್ಲರ ಪರ ಇವರಿದ್ದರೆ ಬೇರೆ ಪಕ್ಷದವರು, ವಿರೋಧ ಪಕ್ಷದವರು ಅವರಿಗೆ ಮಾಡಲು ಬಿಡುತ್ತಿಲ್ಲ, ಪಾಪ, ಇವರು ಒಳ್ಳೆಯವರು ಎನ್ನುವ ಭಾವನೆಗಳನ್ನು ಮೂಡಿಸುವುದಕ್ಕೋಸ್ಕರ ಮಾಡಿದ್ದರೆ, ಕಾನೂನು ಪ್ರಕಾರ ಇದು ಸರಿಯೋ ಇಲ್ಲವೋ ಎಂದು ಯೋಚನೆ ಮಾಡದೆ ಈ ರೀತಿಯಾಗಿ ಮಾಡಿದ್ದರೆ, ಇದು ಎಷ್ಟರಮಟ್ಟಿಗೆ ಸರಿ ಎಂದು ಕೇಳಬಯಸುತ್ತೇನೆ. ಇನ್ನೊಂದು 'ಪಟ್ಟಭದ್ರಹಿತಾಸಕ್ತಿಗಳು ಎಬ್ಬಿಸಿರುವ ಹುಯಿಲು.' ಯಾರು ಪಟ್ಟಭದ್ರು ? ಕಂಪನಿಗೆ ಹೇಳಿದರೆ ಅಡ್ಡಿ ಇಲ್ಲ. Political parties ನಲ್ಲಿ ನಿಮಗೆ ಆಗದಿರತಕ್ಕಂಥವರು ಅಥವಾ ವಿರೋಧ ಪಕ್ಷದವರ ಮೇಲೆ ಏನಾದರೂ ಗೂಬೆ ಕೂರಿಸುವುದು indirectly, ಇದರಲ್ಲಿ ತೇಲಿಸಿಬಿಡುವುದು. ಏಕೆಂದರೆ High Court, Supreme Court ನಲ್ಲಿ ನಿಮಗೆ remarks ಮಾಡಿದ ಮೇಲೆ ಆ ಒಂದು judgment ನಲ್ಲಿ condemn ಮಾಡಿದ ಮೇಲೆ ಅದಕ್ಕೆ ಒಂದು ಸ್ಪಷ್ಟೀಕರಣ ಕೊಡುವುದಕ್ಕೋಸ್ಕರ ಇವೆಲ್ಲಾ ಮಾತುಗಳು. "ವಾಸ್ತವಾಂಶ ಎಂದರೆ ನ್ಯಾಯಾಲಯ ತೀರ್ಪಿನ ಪ್ರಕಾರ peripheral ರಸ್ತೆ ಮತ್ತು link ರಸ್ತೆಗೆ company ಕೇಳಬೇಕಾಗಿರುವ ಭೂಮಿಯ ಪ್ರಮಾಣ 2471 ಎಕರೆ, ಸರ್ಕಾರ ಈಗಾಗಲೇ 2894 ಎಕರೆ ಜಮೀನನ್ನು ನೀಡಿದೆ. ಆದರೆ NICE Company ಕೇಳುತ್ತಿರುವುದು 3685 ಎಕರೆ, ಈ ಬೆಂಗಳೂರಿನ ಸುತ್ತಮುತ್ತಲಿರುವ ಭೂಮಿ ಅತ್ಯಂತ ಪ್ರಶಸ್ತವಾದ ಭೂಮಿಗಳು. ಆದ್ದರಿಂದ, ಮೂಲ ಒಪ್ಪಂದಕ್ಕೆ ವಿರುದ್ಧವಾಗಿ ಮತ್ತು ನ್ಯಾಯಾಲಯದ ತೀರ್ಪಿಗೆ ವ್ಯತಿರಿಕ್ತವಾಗಿ ತನಿಖೆ ಮಾಡಬೇಕಾಗಿದೆ. ಆ ಮಾತನ್ನೂ ಕೂಡ ಅವರೇ ಪ್ರಸ್ತಾಪ ಮಾಡಿರುವಂಥದ್ದು. ತನಿಖೆ ಮಾಡಿ. ಯಾರು ಬೇಡವೆಂದರು? ಅಂದರೆ, ಹೆಚ್ಚಿಗೆ ಭೂಮಿಯನ್ನು ತೆಗೆದುಕೊಂಡಿದ್ದಾರೆಂದು ನಿಮಗೆ ಮನವರಿಕೆಯಾಗಿದ್ದರೆ, ಸರ್ಕಾರ ನಿಮ್ಮದೇ ಇದೆ. ಅಧಿಕಾರಿಗಳು ನಿಮ್ಮ ಹತೋಟಿಯಲ್ಲಿಯೇ ಇದ್ದಾರೆ. ಅದಕ್ಕೆ advertisement ಏಕೆ ಬೇಕು? Inquiry ಮಾಡಿ ಇಷ್ಟು excess ಭೂಮಿ ಇದೆ, ನಾವು ಕಾನೂನು ಪ್ರಕಾರ ತೆಗೆದುಕೊಳ್ಳುತ್ತೇವೆಂದು ನೇರವಾಗಿ order ಮಾಡಿ ಅಥವಾ ಕಾನೂನಿನಲ್ಲಿ ನಿಮಗೆ ಅವಕಾಶವಿಲ್ಲವೆಂದರೆ, Special Bill ನಾವು ತರುತ್ತೇವೆಂದು ಮೊದಲೇ ಹೇಳಿದ್ದಿರಲ್ಲವೇ ? ಈ ಇಂಗಿತವನ್ನಂತೂ ತೋರಿಸಿದ್ದೀರಿ. ನಿಮ್ಮ ಪಕ್ಷ ಈ ಇಂಗಿತವನ್ನು ತೋರಿಸಿದ ಮೇಲೆ ಖಂಡಿತವಾಗಿ ಅದನ್ನು ನೀವು ಇಲ್ಲಿ ಆಚರಣೆಯಲ್ಲಿ

ತರುವುದಕ್ಕೋಸ್ಕರ ಕಾನೂನು ಮುಖಾಂತರ ತರಬಹುದು. ಕಾನೂನು ಮುಖಾಂತರ ತರುವುದಕ್ಕೆ ತೊಂದರೆ ಏಕಾಗಿದೆಯೆಂಬುದನ್ನೂ ನಾನು ಸ್ಪಷ್ಟವಾಗಿ ಹೇಳುತ್ತೇನೆ. ನೀವು ಒಪ್ಪಿ ಅಥವಾ ಒಪ್ಪದೇ ಇರಿ. ನಿಮಗೆ ತೊಂದರೆ ಏಕಾಗಿದೆಯೆಂದರೆ, ನೀವು Bill ತಂದು ಇದನ್ನು ಸರಿಪಡಿಸಿಕೊಳ್ಳಬೇಕೆಂಬುದು ನಿಮ್ಮ ಇಚ್ಛೆ ಇರಬಹುದು. ಆದರೆ, ನಿಮ್ಮ ಜೊತೆಗಾರರ ಇಚ್ಛೆ ಇಲ್ಲ. Project ನಡೆಯಲಿ, ಏನು excess ಇದೆ ಅದನ್ನು ನೋಡೋಣ ಎನ್ನುವ ಮಾತು ಅವರದ್ದು. ಅದಕ್ಕೆ Bill ನ ಪರ ಮತ್ತು ವಿರೋಧವಾಗಿರತಕ್ಕಂಥವರು ನಿಮ್ಮಲ್ಲಿಯೇ ಇದ್ದ ಮೇಲೆ, ನೀವು Bill ಹೇಗೆ ತರುತ್ತೀರಿ? ತರುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ಈ advertisement! ಅಂದರೆ, ನಾಳೆ ಇದು ಬಿಜೆಪಿಯವರ ಮೇಲೂ ಗೂಬೆ ಕೂರಿಸುವುದಕ್ಕೆ, 'ಈ Bill ತರತಕ್ಕಂಥದ್ದು ಸರಿಯಲ್ಲ ಅಥವಾ ತೆಗೆದುಕೊಳ್ಳುವುದು ಸರಿಯಲ್ಲ. ನೋಡಿ, ನೀವು ಹೇಳುತ್ತಿದ್ದೀರಿ, ಇಡೀ ದೇಶದ ಜನ ಹೀಗೆ ಹೇಳುತ್ತಾರೆ. Assemblyಯಲ್ಲಿ ಎಲ್ಲಾ ಸದಸ್ಯರು ಹೀಗೆ ಮಾತನಾಡಿದರು, ಅದಕ್ಕಾಗಿ ನಾವಿದನ್ನು ತರುತ್ತಿದ್ದೇವೆ. ನೀವೂ ಸುಮ್ಮನಿರಿ ಎಂದು ಹೇಳಿ ಅವರು ಬಾಯಿ ಮುಚ್ಚಿಸುವುದಕ್ಕೆ ಕೂಡ ಇದನ್ನು ಮಾಡಿದಂಥ ತಂತ್ರವಿದು. ಅನೇಕ ತಂತ್ರಗಳನ್ನು ಉಪಯೋಗ ಮಾಡಿದ್ದಾರೆ. ಅದರಲ್ಲಿ ಇದೂ ಒಂದು. ಇಲ್ಲವೆಂದರೆ ಒಂದು ruling partyಗೆ session ಕರೆದಾಗ ಇಂಥವೆಲ್ಲಾ ಕೊಡುವ ಅವಶ್ಯಕತೆಯೇ ಇರಲಿಲ್ಲ. ನಿಮಗೆ ಬೇಕಾದಂಥ ಉದ್ದೇಶವನ್ನು ಸಾಧಿಸಬೇಕೆಂದರೆ, Bill introduce ಮಾಡಿ ಸಾಧಿಸಿಕೊಳ್ಳುತ್ತಾರೆ. ಯಾರಾದರೂ ಇದನ್ನು ಪ್ರಚಾರ ಕೊಟ್ಟು ಮಾಡುತ್ತಾರೆಯೇ? ಅದೂ ಒಂದೇ project? ಇಂಥ ಹತ್ತಾರು project ಬಗ್ಗೆ ನೀವೇನಾದರೂ ಜನರ opinion ಕೇಳಿಕೊಂಡು ಇಂಥ project ಬಂದರೆ, ಇಂಥ ಸನ್ನಿವೇಶ ಬಂದರೆ, ಈ ರೀತಿಯಾಗಿ excess ಜಮೀನು ಅವರ project ಗಿಂತ ಹೆಚ್ಚಿಗೆ ಇದ್ದರೆ, ಅದು Infosys ಇರಬಹುದು, WIPRO ಇರಬಹುದು, NICE ಇರಬಹುದು, BPL ಇರಬಹುದು, ಇನ್ನೊಂದು ಇರಬಹುದು, ಯಾವುದೇ ಕಂಪನಿ ಇರಬಹುದು, ಅಂತಹ ಕಂಪನಿಗಳಿಗೆ ಜಮೀನುಗಳನ್ನು ಜಾಸ್ತಿ ನಾವು ತೆಗೆದುಕೊಳ್ಳಬೇಕಾದರೆ ನಾವು ಏನು ಮಾಡಬೇಕೆಂದು ಹೇಳಿ ಯೋಚನೆ ಮಾಡಬೇಕಾಗಿತ್ತು. ಅದೂ ಇಲ್ಲ. ಅಂದರೆ ಆ ಚಿಂತನೆಯೂ ಇಲ್ಲ ಮತ್ತು ನಿಜವಾದಂಥ commitment ಕೂಡ ಇಲ್ಲ. ನಾನು ಈಗಾಗಲೇ ಹೇಳಿದ್ದೇನೆ. ಯಾವ ರೀತಿಯಾಗಿ ಭೂಸುಧಾರಣಾ ಕಾನೂನು ತಿರುಚುಮುರುಚು ಮಾಡಲಾಗಿದೆ ಎಂದು

ಅದು ನಮ್ಮ party ಯವರು ಮಾಡಿದರೂ ಕೂಡ – ಇದು ಅನ್ಯಾಯವಾಗುತ್ತದೆ, ಸರಿಯಿಲ್ಲ ಎಂದು ಹೇಳಿದ್ದೇನೆ. ಇಲ್ಲಿ ನಾವು ಸಾಕಷ್ಟು ಅದರ ಬಗ್ಗೆ ಗಲಾಟೆ ಕೂಡ ಮಾಡಿದ್ದೇವೆ. ತಮಗೆ ಗೊತ್ತಿದೆ. ಪುನಃ ಪುನಃ ಅದನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ಇಂಥ ಒಂದು ಧೋರಣೆಯನ್ನು ಇಟ್ಟುಕೊಂಡು ಇವತ್ತು ಇದರ ಬಗ್ಗೆ ಚರ್ಚೆ ನಡೆದಿದೆ. ಇದಲ್ಲದೆ ಇನ್ನೊಂದು issue close ಆಯಿತು. ಇಲ್ಲಿ ಮುಖ್ಯಮಂತ್ರಿಗಳು ಹೇಳಿದರು ನಾನು ಆ ರೀತಿಯಾಗಿ ಹೇಳಲಿಲ್ಲ, ಯಾವ journalist ನನ್ನ ಹತ್ತಿರ ಬಂದಿಲ್ಲ, ಯಾವ Ex-Minister ಕೂಡ ನನ್ನ ಹತ್ತಿರ ಬಂದಿಲ್ಲ. ಅದಕ್ಕಾಗಿ ಈ ಮಾತನ್ನು ಯಾರಿಗೂ ಕೂಡ ಲಂಚದ ಬಗ್ಗೆ ಅವರು ಹೇಳಿಲಿಲ್ಲ, ನಾನು ಕೇಳಲಿಲ್ಲ ಎಂದು ಸ್ಪಷ್ಟೀಕರಣ ಕೊಟ್ಟರು. ಅದು ಅಲ್ಲಿಗೆ ನಿಂತಿತು. ಅಂದರೆ ಇದಕ್ಕೆ ಸಂಬಂಧಪಟ್ಟಂತೆ ಒಂದಲ್ಲೊಂದು ರೂಪದಲ್ಲಿ controversy ಮತ್ತು ನಾವು ಚೆನ್ನಾಗಿದ್ದೇವೆ, ಇನ್ನೊಬ್ಬರೇ ಇದನ್ನು ಕೆಡಿಸುತ್ತಿದ್ದಾರೆ ಎನ್ನುವ ವಾತಾವರಣವನ್ನು ಸೃಷ್ಟಿಮಾಡತಕ್ಕಂಥದ್ದು. ಇದು ಸರಿಯಲ್ಲ. ನಿಮಗೆ ಮಾಡಬೇಕಾದಂತಹ ಏನೇ ಒಂದು ಒಳ್ಳೆಯ ಉದ್ದೇಶವಿದ್ದರೆ ನೀವು ಮಾಡಿ. ಸರಿ ಇತ್ತು ಎಂದರೆ ಸದನ ಒಪ್ಪುತ್ತದೆ. ಸರಿ ಇಲ್ಲವೆಂದರೆ ವಿರೋಧ ಮಾಡುತ್ತದೆ. ಅಂದರೆ, ಅದು ಸದನಕ್ಕೆ ಬಿಟ್ಟಿದ್ದು. House is supreme. ಆ ಕಡೆ ಸದಸ್ಯರಿಗೂ ಸಂಪೂರ್ಣವಾದ ಸ್ವಾತಂತ್ರ್ಯವಿದೆ. ಈ ಕಡೆ ಸದಸ್ಯರಿಗೂ ಕೂಡ ಸಂಪೂರ್ಣವಾದಂಥ ಸ್ವಾತಂತ್ರ್ಯವಿದೆ. ಅದಕ್ಕೆ ಈ ನಿಯತ್ತು ಚೆನ್ನಾಗಿಲ್ಲ. ಅದೇನಾಗಿದೆ ಎಂದರೆ, ನಾನು ಹೇಳುವುದಕ್ಕೆ ಬರುವುದಿಲ್ಲ. ನಿನ್ನೆಯೇ ಹೇಳಿದೆ. ನಾನು ಸೂಕ್ಷ್ಮವಾಗಿ ಹೇಳಿದೆ. ಈ project ಏನು ಪ್ರಾರಂಭವಾಗಿದೆ 95ರಿಂದ ನೀವೇ ಹುಟ್ಟಿಸಿದವರು. ಬ್ರಹ್ಮನೂ ನೀವೇ, ಇದರ ಪಾಲನೆ ಕರ್ತರೂ ನೀವೇ, ನೀವೇ ಈಗ ಕೊನೆಗೆ ಸಂಹಾರ ಮಾಡುವುದಕ್ಕೆ ನೀವೇ ಹೊರಟಿದ್ದೀರಿ. ಬ್ರಹ್ಮ, ವಿಷ್ಣು, ಮಹೇಶ್ವರನ ರೂಪವನ್ನು ತಾಳಿದಂಥವರೂ ತಾವೇ. ಏಕೆಂದರೆ, ಇದು ಪ್ರಥಮವಾಗಿ 1995ರಲ್ಲಿ ಪ್ರಾರಂಭವಾಗಿದ್ದು. MOUಗೆ sign ಮಾಡಿದ್ದು ಆವಾಗಲೇ. ಆವಾಗಲೇ High Power Committee ಯಲ್ಲಿ ಅನೇಕ ಬದಲಾವಣೆ ಮಾಡಿದ್ದು. ಇವೆಲ್ಲವೂ ಕೂಡ ಮುಂದೆ ಬಂದು ಬಂದೂ ಪ್ರೋತ್ಸಾಹ ಸಿಕ್ಕಿ ಎಲ್ಲಾ ಸರ್ಕಾರಗಳೂ ಒಂದಿಲ್ಲೊಂದು ರೂಪದಲ್ಲಿ ಒಂದು ಹಂತಕ್ಕೆ ತಂದು ಇವತ್ತು ನಡೆದಿದೆ. ಆದರೆ, ಇದು ಸರಿ ಇಲ್ಲ ಎನ್ನತಕ್ಕಂಥದ್ದನ್ನೂ ತಾವೇ ಹೇಳುತ್ತೀರಿ. ಇದೊಂದು ಕಡೆ. ಎರಡನೆಯದು, ನಾನೇಕೆ ಹೇಳುತ್ತೇನೆಂದರೆ, ಯಾವುದೇ ಹೊರ ದೇಶದ investors ಅಥವಾ ಹೊರ ರಾಜ್ಯದ ಅನೇಕ ಬಂಡವಾಳದಾರರಿಗೂ ಕೂಡ ಇದು ಸಂಶಯ ಬರತಕ್ಕಂಥ ರೀತಿಯಲ್ಲಿ ಇದರ ಚರ್ಚೆ ನಡೆದಿದೆ. ಏನೋ, ಕರ್ನಾಟಕಕ್ಕೆ

ಹೋದರೆ ವಾತಾವರಣ ಸರಿ ಇಲ್ಲ ಎಂಬ ಭಾವನೆ ಬರುತ್ತದೆ. ನೋಡಿ, 11 ವರ್ಷಗಳ ಹಿಂದೆ ನಡೆದಂಥ project ಗೆ ಇವತ್ತಿನ ದಿವಸ ಕೆಣಕುತ್ತಿದ್ದಾರೆ. ಅದರಲ್ಲಿ excess land ಬಗ್ಗೆ ನಾವು ಮೊದಲಿನಿಂದಲೇ ಮಾತನಾಡುತ್ತಾ ಬಂದಿದ್ದರೆ, ಆ ಪ್ರಶ್ನೆ ಇರುತ್ತಿರಲಿಲ್ಲ. ಇದು ಪ್ರಾರಂಭವಾಗಿದ್ದು ಇತ್ತೀಚೆಗೆ, ಇದನ್ನು ಬಹಿರಂಗಪಡಿಸಿದ್ದು ಇತ್ತೀಚೆಗೆ : ಇದನ್ನು advertise ಮಾಡಿದ್ದು ಇತ್ತೀಚೆಗೆ. ಈ ಹಿಂದೆ single window agency ಯಲ್ಲಿ, High Power Committee ಗಳಲ್ಲಿ Chief Minister preside ಮಾಡುವಾಗ, Chief Secretary preside ಮಾಡುವಾಗ ಪ್ರತ್ಯಕ್ಷ ಅಪ್ರತ್ಯಕ್ಷವಾಗಿ ಎಲ್ಲರೂ ಕೂಡ ಇದಕ್ಕೆ ಒತ್ತನ್ನು ಕೊಟ್ಟುಕೊಂಡು ಬಂದಿದ್ದೀರಿ. ಅದಕ್ಕೆ ಹೊರಗಡೆಯವರಿಗೆ ಏನನ್ನಿಸುತ್ತದೆ, 11 ವರ್ಷ ಈ project ಆಯಿತು, 11 ವರ್ಷವಾದರೂ ಕೂಡ ಅಲ್ಲೇನೋ ಇದಕ್ಕೆ approval ಕೊಡುತ್ತಿಲ್ಲವೆಂದರೆ, ವಾತಾವರಣ ಕರ್ನಾಟಕದಲ್ಲಿ ಸರಿ ಇಲ್ಲ ಎನ್ನುತಕ್ಕಂಥ ಭಾವನೆ ಬರುತ್ತದೆ. ಆ ಭಾವನೆಯನ್ನು ನಾವು ತೆಗೆದು ಹಾಕತಕ್ಕಂಥ ಅವಶ್ಯಕತೆ ಇದೆ. ಯಾರೇ ಇರಲಿ. ನೀವು, ನಾವು ಎಲ್ಲರೂ ಸೇರಿ ಏಕೆಂದರೆ, investment ಇದ್ದರೆ ಮಾತ್ರ employment generate ಆಗಲಿಕ್ಕೆ ಸಾಧ್ಯ. ಅದರ ಅರ್ಥ ನಾವು ಕಾನೂನು ಸಡಿಲಗೊಳಿಸಿ, ಕಾನೂನು ಬಾಹಿರವಾಗಿ ಲೂಟಿ ಮಾಡುವವರಿಗೆ ಕೊಡಬೇಕೆಂದು ಹೇಳಿ ನಾವೆಂದೂ ಕೂಡ ಹೇಳಿಲ್ಲ, ಹೇಳುವುದೂ ಇಲ್ಲ. ಆದರೆ, ಲೂಟಿ ಮಾಡುತ್ತಿದ್ದಾನೆಂಬುದು ಈಗ ನಿಮಗೆ ನೆನಪು ಬಂದಿದೆ ಎಂದು ನಾನು ಹೇಳುವುದು ಇಷ್ಟೆ. ಏಕೆಂದರೆ, ಬ್ಯಾಂಕಿಗೆ ಕಾಗದಪತ್ರಗಳನ್ನು submit ಮಾಡುವುದೂ ನಿಮಗೆ ಗೊತ್ತು, ಯಾವ್ಯಾವುದು, ಎಷ್ಟೆಷ್ಟು ಎಕರೆ ಇವತ್ತು ಅವನು mortgage ಮಾಡಿ ದುಡ್ಡು ಕೇಳುತ್ತಿದ್ದಾನೆಂದು ಹೇಳಿ, ನಿಮಗೆ ಗೊತ್ತು. ಇದೇನೂ ಒಂದು ದಿವಸದ ಕೆಲಸವಲ್ಲ ಅಥವಾ ಪೇಪರ್ ಏನೆಂದರೆ, ಒಂದು ದಿವಸದಲ್ಲಿ agreement ಆಗಿ ಎಲ್ಲವೂ ಕೂಡ ready ಆದಂಥ scheme ಏನೂ ಇದಲ್ಲ. ಇದು ಹತ್ತಾರು ವರ್ಷ ನಡೆದಿದೆ. ಆದರೂ ಕೂಡ ನಿಮ್ಮ notice ಗೆ ಅದು ಬರಲಿಲ್ಲವೆಂದರೆ, ನನಗೇನು ಅನ್ನಿಸುತ್ತದೆ, ಬೇಕಾದಾಗ ಕಣ್ಣುಮುಚ್ಚಿ ಕೂಡುವುದು, ಬೇಡವಾದಾಗ ಅದರ ಬಗ್ಗೆ ಕೆಣಕಿ ಜನರಿಗೆ ಹೇಳಿಕೊಟ್ಟು ನಾವು ಮಾತ್ರ ಜನಪರ ಇದ್ದೇವೆ, ಬೇರೆಯವರು ಜನ ವಿರೋಧಿಗಳಿದ್ದಾರೆ ಎನ್ನುತಕ್ಕಂಥದ್ದನ್ನು ತೋರಿಸುವುದಕ್ಕೆ ಚುಚ್ಚಿ ಚುಚ್ಚಿ ಮಾತನಾಡುವುದಕ್ಕೆ ಇದು ಪ್ರಾರಂಭವಾಗಿದೆ. ಬಾಕಿ ಎಲ್ಲವನ್ನೂ ಕೂಡ ಸ್ಪಷ್ಟವಾಗಿ ನಮ್ಮ ದೇಶಪಾಂಡೆಯವರು ಹೇಳಿದ್ದಾರೆ ಮತ್ತು ನಿನ್ನೆ ಧರ್ಮಸಿಂಗ್‌ರವರೂ ಕೂಡ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ.

ನಾನೊಂದು ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ. ನಮ್ಮ ಯಡಿಯೂರಪ್ಪನವರು ಈ ಕಡೆಯೇ ಇದ್ದರು. ಅವರು ಇದ್ದಾಗ ಏನು ಜೋರಾಗಿ ಮಾತನಾಡಿದರೆಂದರೆ, "ಇನ್ನೊಂದು ದುಃಖ ತರುವ ಸಂಗತಿ ಎಂದರೆ, ಯಾರು ಹಣ ಪಡೆಯುವುದಕ್ಕೆ ಹೊರಟಿದ್ದಾರೆ, ಅದಕ್ಕೆ ನೀವು guarantee ಕೊಡುವುದಕ್ಕೆ ಹೊರಟಿದ್ದೀರಿ, ಜಗತ್ತಿನ ಇತಿಹಾಸದಲ್ಲಿ ಒಂದು ಖಾಸಗಿ companyಗೆ ಸರ್ಕಾರ guarantee ನೀಡುವುದನ್ನು ನಾನೆಂದೂ ಕೇಳಿಲ್ಲ. ಇದೆಲ್ಲಾ ಗುಟ್ಟಿನಲ್ಲೇ ಇದೆ. ನಾನು ಪ್ರಾರಂಭದಲ್ಲೇ ಆರೋಪ ಮಾಡಿದ್ದೆ, ಜನರು ಏನು ಮಾತನಾಡುತ್ತಿದ್ದಾರೆ ಅಂದರೆ ಇವತ್ತು ಸರ್ಕಾರದಲ್ಲಿರುವ ಕೆಲವು ಸಚಿವರು ಮತ್ತು ಉನ್ನತ ಅಧಿಕಾರಿಗಳು ಈ ಹಿನ್ನೆಲೆಯಲ್ಲಿ ನಿಂತುಕೊಂಡು ಅವರ ದುಡಿದ ಹಣವನ್ನು ಇದಕ್ಕೆ ಹಾಕಿ ವ್ಯವಹಾರ ಕುದುರಿಸುವ ಕೆಲಸ ನಡೆದಿದೆ" ಎಂದು ಹೇಳಿ, ಅಷ್ಟೇ ಅಲ್ಲ, ಇದೊಂದು ಲೂಟಿ ಇದೆ, estate agency ಇದೆ, ಆಮೇಲೆ, ಇಂಥ project ಗೆ ನೀವು ಸಮ್ಮತಿ ಕೊಡಬಾರದು ಅನ್ನತಕ್ಕಂಥದ್ದನ್ನು ಕೂಡ ಅಂದಿನ ಕಾಲದಲ್ಲಿ 1997ರಲ್ಲಿ ಕೂಡ ವಿರೋಧ ಪಕ್ಷದ ನಾಯಕರಾಗಿ ಶ್ರೀಮಾನ್ ಯಡಿಯೂರಪ್ಪನವರು ಹೇಳಿದರು. ಅಂದಾಗ, ಇದಕ್ಕೆ ವ್ಯತಿರಿಕ್ತವಾಗಿ ಅವರು ಕಾನೂನು ಮಾಡುವುದಕ್ಕೆ ಒಪ್ಪುತ್ತಾರೋ, ಇಲ್ಲವೋ? ಗೊತ್ತಿಲ್ಲ. ಅಥವಾ ನೀವು ಅವರ ಮನ ಒಲಿಸಿಕೊಂಡಿರೋ, ಹೇಗೆ? ಏಕೆಂದರೆ, ನಾವಂತೂ ಹೇಳಿದ್ದೇವೆ. ಇವತ್ತೂ ಹೇಳುತ್ತೇವೆ. ಅವತ್ತೂ ಹೇಳಿದ್ದೇವೆ ಮತ್ತು ಭೂಸುಧಾರಣೆ ಕಾನೂನು ತರುವಾಗಲೂ ಹೇಳಿದ್ದೇವೆ. ಆದರೆ, ಇವತ್ತು ಇದನ್ನು ಪ್ರಸ್ತಾಪ ಮಾಡಿದಂಥವರು ಉಪ ಮುಖ್ಯಮಂತ್ರಿಗಳಾಗಿದ್ದಾರೆ. ಇದಕ್ಕೆ ಸವಾಲು ಒಡ್ಡಿದವರು ಮುಖ್ಯಮಂತ್ರಿಗಳಾಗಿದ್ದಾರೆ. ಈಗ ಇವರ ಮಧ್ಯದಲ್ಲಿ ನಾವು ನೋಡಬೇಕು ಎಷ್ಟರಮಟ್ಟಿಗೆ ಜನಪರವಾದಂಥ ಕಾಳಜಿ ಇಟ್ಟುಕೊಂಡು ಕೆಲಸ ಮಾಡುತ್ತಾರೆ ಮತ್ತು ರಾಜ್ಯದ ಹಿತದೃಷ್ಟಿಯಿಂದ, ಅಭಿವೃದ್ಧಿ ದೃಷ್ಟಿಯಿಂದಲೂ ಕೂಡ ಯಾವ ರೀತಿಯಾಗಿ ಇಬ್ಬರೂ ನಿಲುವನ್ನು ತಾಳುತ್ತಾರೆ ಎನ್ನುವುದು ಬಹಳ ಮುಖ್ಯ. ಇದು ಬರೇ debate ಮಾಡಿ ಹೋಗತಕ್ಕಂಥದ್ದಲ್ಲ. ಈ ಸಮಸ್ಯೆಯನ್ನೂ ಕೂಡ ಬಗೆಹರಿಸಬೇಕಲ್ಲವೇ? ಈ ಸಮಸ್ಯೆ ಬಗೆಹರಿಯದೇ ಹೋದರೆ, ಮುಂದಿನವರಿಗೂ ಕೂಡ ಅನಾನುಕೂ ವಾಗುತ್ತದೆ. ಅದಕ್ಕಾಗಿ ಇದರ ಬಗ್ಗೆಯೂ ಕೂಡ ಅವರು ಸ್ಪಷ್ಟೀಕರಣ ಕೊಡತಕ್ಕಂಥದ್ದು ಬಹಳ ಮುಖ್ಯ ಎನ್ನತಕ್ಕಂಥ ಮಾತನ್ನೂ ಕೂಡ ನಾನೂ ತಮ್ಮ ಮುಂದೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನೊಂದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಇದು ಯಾರಿಗೂ ಟೀಕೆ ಮಾಡುತ್ತಿಲ್ಲ. ಇರತಕ್ಕಂಥ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ಏನೆಂದರೆ, "No opposition to BMIC on BOOT. But, will not allow to turn BOOT into open Loot." ಎಂದು ಹೇಳಿ

ದೇವೇಗೌಡ ಸಾಹೇಬರು ಒಂದು ಪತ್ರವನ್ನು Governor ರವರಿಗೆ 1.04.2004ರಲ್ಲಿ ಪತ್ರವನ್ನು ಬರೆದಿದ್ದಾರೆ. ಅವರು ಅದರಲ್ಲೇನು ಹೇಳುತ್ತಾರೆ, "I am in lime light because I am a fighter and I don't compromise and I will never compromise on the rights of the poor, daliths, down trodden, farmers, weaker section whom I represent and it is not anti development to be pro-poor." ಅದು ಸತ್ಯ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಈಗ ಇದೆಲ್ಲಾ ಸೃಷ್ಟಿಯಾಗಿದೆ, ಈ ಚರ್ಚೆಯಾಗುವಾಗ ಸೃಷ್ಟಿಯಾಗಿದೆ ಅನ್ನುವಂಥ ಮಾತನ್ನು ತಾವು ಇದುವರೆಗೆ ಹೇಳಿದಿರಿ. ಆದರೆ, 2004ರಲ್ಲಿ ಚುನಾಯಿತ ಪ್ರತಿನಿಧಿಗಳಾಗಿ ಲೋಕಸಭೆಗೆ ಆಯ್ಕೆಯಾದ ಸಂದರ್ಭದಲ್ಲಿ ರೈತರು ತಮ್ಮ ಸಂಕಷ್ಟಗಳನ್ನು ಹೇಳಿಕೊಂಡಾಗ ಅವರ ಪರವಾಗಿ ಒಬ್ಬ ಚುನಾಯಿತ ಲೋಕಸಭಾ ಸದಸ್ಯರಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸಿದ್ದು 2004ರಲ್ಲಿ. ಆದ್ದರಿಂದ ಇದು ಈಗ ಹುಟ್ಟಿದಂಥ ವಿವಾದವಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು election time ನಲ್ಲಿ ಎಂದು ನಾನು ಮೊದಲೇ ಹೇಳಿದೆ. Election time ನಲ್ಲಿ ಇಂಥ ಪತ್ರಗಳನ್ನು ಬರೆದು ಬಹಳ ಜನ hero ಆಗುತ್ತಾರೆನ್ನತಕ್ಕಂಥ ಮಾತನ್ನು ನಾನು ಮೊದಲೇ ಹೇಳಿದೆ. ಬಹುಶಃ ನೀವು ಕೇಳಿದಿರೋ, ಇಲ್ಲವೋ ಗೊತ್ತಿಲ್ಲ. ನಾನು ಈ ಮಾತನ್ನು ನಿಮಗೆ ಹೇಳಿದೆ. ಚುನಾವಣೆ ಸಂದರ್ಭದಲ್ಲಿ Governor ರವರಿಗೆ ಇಂತಹ ಒಂದು ಪತ್ರವನ್ನು ಬರೆದು pro-poor, pro-dalits, pro-farmers ಅನ್ನತಕ್ಕಂಥ ಪದಗಳನ್ನು ಉಪಯೋಗ ಮಾಡಿಕೊಂಡು ಬರೆದಿದ್ದಾರೆಂದು ನಾನು ಹೇಳಿದೆ ಸಾರ್. ನಿಮಗಿಂತ ಮುಂಚೆಯೇ ಹೇಳಿದೆ. ಅದಕ್ಕೆ ಇದು ಹೇಳಿದೆ. ಹೇಳಿದರು, ಸಂತೋಷ. ನನಗೇನು ಸಾರ್? ನೀವು ಯಾವಾಗಲಾದರೂ ಬರೆಯಿರಿ, ನನಗೇನೆಂದರೆ, ಈ 10 ವರ್ಷಗಳಲ್ಲಿ ನಿಮಗೆ ಸಾಕಷ್ಟು opportunity ಗಳಿದ್ದವು. Prime Minister ಆಗಿ opportunity, Chief Minister ಆಗಿ opportunity, ಸಮ್ಮಿಶ್ರ ಸರ್ಕಾರದಲ್ಲಿ ಪ್ರಭುತ್ವವನ್ನು ಹೊಂದಿದಂಥ ಒಂದು ವಿಶೇಷವಾದಂಥ ಸ್ಥಾನ ಕೂಡ ನಿಮಗಿತ್ತು. ಇದೆಲ್ಲವೂ ಕೂಡ ಇದ್ದಾಗ ಇದನ್ನು ಬಗೆಹರಿಸತಕ್ಕಂಥದ್ದಾಗಲಿ, ಇದಕ್ಕೆ ನಿಲ್ಲಿಸತಕ್ಕಂಥದ್ದಾಗಲಿ ಅಥವಾ ಅವರಿಗೆ ನ್ಯಾಯ ಕೊಡಿಸತಕ್ಕಂಥ ಕೆಲಸ ಆಗ ಬೇಕಾಗಿತ್ತು. ಈ advertisement ಮುಖಾಂತರ ಜನರ ಮನಸ್ಸನ್ನು

ಸೆಳೆಯತಕ್ಕಂಥದ್ದು ಬೇಕಾಗಿರಲಿಲ್ಲ ಅನ್ನತಕ್ಕಂಥ ಮಾತನ್ನು ಹೇಳುತ್ತಿದ್ದೇನೆ. ಅದರ ಜೊತೆಯಲ್ಲಿ ಇನ್ನೊಂದು ಮಾತನ್ನೂ ಕೂಡ ಹೇಳಿದ್ದಾರೆ. "I reiterate that I will slit my throat if it is found that I am doing this to protect even an inch of land belonging to me and members of my family." ಎಂದು ಹೇಳಿದ್ದರೆ ಸಂತೋಷ. ಆ ಭಾಗದಲ್ಲಿ ಆ ಏರಿಯಾದಲ್ಲಿ ನನ್ನದು ಒಂದು ಇಂಚು ಭೂಮಿಯೂ ಇಲ್ಲ. ಇದ್ದಿದ್ದರೆ ನಾನು ನನ್ನ ಕತ್ತು ಕುಯ್ದುಕೊಡುತ್ತೇವೆ ಎನ್ನತಕ್ಕಂಥ ಮಾತನ್ನೂ ಕೂಡ ಹೇಳಿದ್ದಾರೆ. ಅವರು ಹೇಳಿರುವ ಮಾತಿನ ಟ್ರಾನ್ಸ್‌ಲೇಷನ್ ಕನ್ನಡದಲ್ಲಿ ಅದೇ ಅಲ್ಲವೇ? ಭೂಸುಧಾರಣೆಯನ್ನು ಏಕೆ ನಾನು ಉದಾಹರಣೆಗೆ ಹೇಳುವುದೆಂದರೆ, ಎಕ್ಸ್‌ಪ್ರೆಸ್ ಹೈವೇ ಅಕ್ಕಪಕ್ಕದಲ್ಲಿ ಭೂಮಿಯನ್ನು ಇಂಡಸ್ಟ್ರಿಯಲಿಸ್ಟ್‌ಗಳು ತೆಗೆದುಕೊಂಡಿದ್ದಾರೆ. ನಿಮ್ಮ ಮುಖಾಂತರ ಇರಬಹುದು ಅಥವಾ ಸರ್ಕಾರದ ಮುಖಾಂತರ ಇರಬಹುದು ಅಥವಾ ನಮ್ಮ ಮುಖಾಂತರ ಇರಬಹುದು ; ಅದನ್ನು ಬಿಟ್ಟು ಬಡವರ ಭೂಮಿಗಳನ್ನು ಎಸ್ಟೇಟ್ ಏಜೆನ್ಸಿ ಮಾಡುವುದಕ್ಕೆ ಅನೇಕ ರಾಜಕಾರಣಿಗಳು, ಶ್ರೀಮಂತರು 2 ಲಕ್ಷ, 3 ಲಕ್ಷ, 4 ಲಕ್ಷ ರೂಪಾಯಿಗಳನ್ನು ಕೊಟ್ಟು ತೆಗೆದುಕೊಂಡಿದ್ದಾರೆ. ಅಂಥಾದ್ದನ್ನಾದರೂ ಕೆಐಎಡಿಬಿಯವರು ಲ್ಯಾಂಡ್ ಅಕ್ವಿಸಿಷನ್ ಮಾಡಬೇಕು ಅಥವಾ ಹೈಕೋರ್ಟಿಗಾದರೂ ಹೋಗಿ ಒಂದು ಅಪೀಲ್ ಮಾಡಿ ಅವರನ್ನು ಕೆಣಕತಕ್ಕಂಥಾದ್ದಕ್ಕೆ ಸಾಧ್ಯತೆ ಇದೆ. ಅದರ ಅಕ್ಕಪಕ್ಕದಲ್ಲೇ ಸಾವಿರಾರು ಎಕರೆ ಜಮೀನುಗಳನ್ನು in the name of farm, ಇಂಡಸ್ಟ್ರಿಯಲಿಸ್ಟ್‌ಗಳು ಫಾರ್ಮ್ ಹೌಸ್ ಮಾಡಿದ್ದಾರೆ, ಅನೇಕ ರಾಜಕಾರಣಿಗಳು ಅಲ್ಲಿ ಜಮೀನುಗಳನ್ನು ತೆಗೆದುಕೊಂಡಿದ್ದಾರೆ. ಅವರು ಅಲ್ಲಿ ಏಕೆ ಜಮೀನನ್ನು ತೆಗೆದುಕೊಂಡರು? ಅವರವರ ಊರಿನಲ್ಲಿ ತೆಗೆದುಕೊಳ್ಳಲು ಆಗುತ್ತಿರಲಿಲ್ಲವೇ? ಅಂದರೆ, ಅಲ್ಲಿ ಜಮೀನಿನ ಕಿಮ್ಮತ್ತು ಜಾಸ್ತಿಯಾಗುತ್ತದೆ, ಅದರಿಂದ ನಾಳೆ ಅನುಕೂಲವಾಗುತ್ತದೆ ಎಂದು ತೆಗೆದುಕೊಂಡಿದ್ದಾರೆ. ಬೆಂಗಳೂರು ಸುತ್ತಮುತ್ತ ನೀವು ಎಲ್ಲಿ ಹೋಗಿ ಜಮೀನನ್ನು ತೆಗೆದುಕೊಳ್ಳುತ್ತೀರೋ, ಅಲ್ಲಂತೂ ಬೆಲೆ ಹೆಚ್ಚಿಗೆ ಆಗಿದೆ. ದೇವನಹಳ್ಳಿಯಲ್ಲಿ ಏರ್‌ಪೋರ್ಟ್ ಆಗುತ್ತದೆ ಎಂದರೆ, ಆ ಭಾಗದಲ್ಲಿ ತೆಗೆದುಕೊಳ್ಳುವುದು, ಮೈಸೂರು – ಬೆಂಗಳೂರು ಕಾರಿಡಾರ್ ರಸ್ತೆಯಾಗುತ್ತದೆ ಎಂದರೆ ಅದರ ಪಕ್ಕದಲ್ಲಿ ತೆಗೆದುಕೊಳ್ಳುವುದು ಅಥವಾ ಈ ಕಡೆ ಐ.ಟಿ. ಇಂಡಸ್ಟ್ರೀ ಡೆವಲಪ್ ಆಗುತ್ತದೆ ಎಂದರೆ ಆ ಭಾಗದಲ್ಲಿ ತೆಗೆದುಕೊಳ್ಳುವುದು. ಯಾರ ಭೂಮಿ ಅದು ? ಅದು ರೈತರದ್ದು ತಾನೇ? ಅದು ಬಡವರದ್ದು ತಾನೇ? ಅಂಥ ಲ್ಯಾಂಡ್‌ಗಳ ಅಕ್ವಿಸಿಷನ್ ಆಗಿರುವುದಕ್ಕೆ ಹೆಚ್ಚಿನ ಹಣ ಕೊಡುತ್ತಾರೆಯೇ ಅಥವಾ ನಿಗದಿ ಮಾಡಿರುವ

ಮಾರ್ಕೆಟ್ ವ್ಯಾಲ್ಯುಅನ್ನು ಕೊಡುತ್ತಾರೆಯೆ? ಅನೇಕ ಸಾರಿ, ತೊಂದರೆಯಲ್ಲಿದ್ದವರೂ ಕೂಡ ಕಡಿಮೆ ಬೆಲೆಗೆ ಕೊಡುತ್ತಾರೆ. ಜಗಳ (ಲಿಟಿಗೇಷನ್) ದಲ್ಲಿರತಕ್ಕಂಥವರು ಕಡಿಮೆ ಬೆಲೆಗೆ ಕೊಡುತ್ತಾರೆ. ನೀವು ಬಯಸಿದರೆ ಅನೇಕ ಜನ ಒತ್ತಾಯದಿಂದಲೂ ಸಾಕಷ್ಟು ಭೂಮಿಯನ್ನು ಕೊಡುತ್ತಾರೆ. ನಿಮಗೆ ಗೊತ್ತಿದೆ, ಲ್ಯಾಂಡ್ ಮಾಫಿಯಾನೇ ಬೇರೆ ಗ್ಯಾಂಗ್ ಇದೆ. ಅವರು ಮಾಡಿದ್ದು ಇದನ್ನು ಇದೆಲ್ಲವೂ ನಿಮಗೆ ಗೊತ್ತಿದೆ. ಒಂದು ಕೆಲಸ ಮಾಡಿ. ಹಿಂದೆ ನಾವು ಲ್ಯಾಂಡ್ ಗ್ರ್ಯಾಂಟ್‌ನಲ್ಲಿ ಒಂದು ಕಾನೂನನ್ನು ತಂದಿದ್ದೇವೆ. ಬೆಂಗಳೂರಿನ ಸುತ್ತಮುತ್ತ 15 ಕಿ.ಮೀ. ಒಳಗಾಗಿ ಗೌರ್ವರ್ನಮೆಂಟ್ ಲ್ಯಾಂಡನ್ನೂ ಕೂಡ ಗ್ರ್ಯಾಂಟ್ ಮಾಡಬಾರದು, ಪಟ್ಟಣ ಪ್ರದೇಶವಿದ್ದಲ್ಲಿ 3 ಕಿ.ಮೀ., 5 ಕಿ.ಮೀ. ಹೀಗೆ ಲಿಮಿಟ್ ಹಾಕಿದ್ದೇವೆ.

ಶ್ರೀ ಎಂ.ಪಿ. ಪ್ರಕಾಶ್ : ಬೆಂಗಳೂರಿನಲ್ಲಿ 18 ಕಿ.ಮೀ. ಒಳಗೆ, ಮಹಾನಗರ ಪಾಲಿಕೆಯಲ್ಲಿ 10 ಕಿ.ಮೀ. ಒಳಗೆ ಮತ್ತು ಉಳಿದ ಕಡೆಗಳಲ್ಲಿ 3 ಕಿ.ಮೀ. ಎಂದು ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಲ್ಯಾಂಡ್ ರೆವಿನ್ಯೂ ಆ್ಯಕ್ಟ್‌ನಲ್ಲಿ ಅಮೆಂಡ್‌ಮೆಂಟ್ ಮಾಡಿ ಇದನ್ನು ಮಾಡಿದ್ದು. ಅದರ ಉದ್ದೇಶವೆಂದರೆ, ಅಲ್ಲಿ ವ್ಯಾಲ್ಯುಬಲ್ ಲ್ಯಾಂಡನ್ನು ಕೆಲವೇ ಶ್ರೀಮಂತರು, ಹಣವಂತರು in the name of farm house, in the name of horticulture, garden ಕಬಳಿಸುತ್ತಾರೆ ಎನ್ನುವ ಉದ್ದೇಶದಿಂದ ಅದನ್ನು ಮಾಡಲಾಗಿತ್ತು. ಅದಲ್ಲದೇ, ರೈತರು ಜಮೀನುಗಳನ್ನು ಬೇಕಾಬಿಟ್ಟಿಯಾಗಿ ಮಾರಿಕೊಳ್ಳುತ್ತಾರೆ, ಅವರಿಗೆ ಯಾವಾಗ ಅವಶ್ಯಕತೆ ಇರುತ್ತದೋ ಆಗ ಅಥವಾ ಫ್ರಸ್ಟ್ರೇಷನ್ ಆದ ತಕ್ಷಣ ಮಾರುತ್ತಾರೆ, ಆ ರೀತಿ ಮಾರಬಾರದು ಎಂದು ಒಂದಲ್ಲ ಒಂದು ರೀತಿಯಲ್ಲಿ ಬಂಧನಗಳನ್ನು ಹೇರಿ ಮಾರುವುದಕ್ಕೆ ಪ್ರಾಹಿಬಿಟ್ ಮಾಡತಕ್ಕಂಥ ಕಾನೂನುಗಳನ್ನು ಮಾಡಿದ್ದೇವೆ. ಅದೇ ರೀತಿ ನೀವು ತನ್ನಿ, within the radius of 30 Kms., 40 Kms. or 50 Kms. ಯಾರ್‍ಯಾರು ಭೂಮಿಯನ್ನು ತೆಗೆದುಕೊಂಡಿದ್ದಾರೆ, ಅದೆಲ್ಲವನ್ನೂ ವಾಪಸ್ಸು ತೆಗೆದುಕೊಂಡು ಬಡವರಿಗೆ ವಾಪಸ್ಸು ಕೊಟ್ಟುಬಿಡೋಣ. ಏಕೆಂದರೆ, ನೀವು ಅವರಿಂದ ತೆಗೆದುಕೊಂಡದ್ದು 3 ಲಕ್ಷ, 5 ಲಕ್ಷ ರೂ.ಗಳಿಗೆ. ಆದರೆ ಅದಕ್ಕೆ ಈಗ ಇರುವ ಬೆಲೆ 1 ಕೋಟಿ, 2 ಕೋಟಿ ರೂಪಾಯಿಗಳು. ನೀವೇ ಹೇಳಿದ ಹಾಗೆ 10 ಕೋಟಿ ರೂಪಾಯಿ ಬರುತ್ತಿದೆ. ಇದೆಲ್ಲವನ್ನೂ ನೀವು ವಾಪಸ್ಸು ತೆಗೆದುಕೊಂಡರೆ ಒಂದು ಲಕ್ಷ ಸಾವಿರ ಕೋಟಿ ರೂಪಾಯಿಗಳು ಬರಬಹುದು. ಇದು ಸ್ವಲ್ಪ ಹೆಚ್ಚು ಕಡಿಮೆಯಾಗಬಹುದು. ಅದಕ್ಕೆ ಒಂದು ಸ್ಪೆಷಲ್ ಆ್ಯಕ್ಟ್ ಮಾಡಿ, ಅದನ್ನು ಎಲ್ಲರೂ ಯುನಾನಿಮಸ್ಲಿ ಪಾಸ್ ಮಾಡೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ : ಆದಲ್ಲದೇ, ಗ್ಲೋಬಲ್ ಇನ್‌ವೆಸ್ಟರ್ಸ್ ಮೀಟ್, ಫಾರಿನ್ ಡೈರೆಕ್ಟ್ ಇನ್‌ವೆಸ್ಟ್‌ಮೆಂಟ್ ಎಂದು ಹೇಳಿ ಸಭೆಗಳನ್ನು ಕರೆದು, ಈ ರಾಜ್ಯದವರಿಗೆ, ಈ ದೇಶದವರಿಗೆ ಏನೇನು ಲ್ಯಾಂಡ್ ಕೊಟ್ಟಿದ್ದಾರೋ, ಅದನ್ನೂ ಸೇರಿಸಿ ಒಂದು ಇನ್‌ವೆಸ್ಟಿಗೇಷನ್ ಮಾಡಿಸಬೇಕು. ಇದರಲ್ಲಿ ಬಹಳ ಅನ್ಯಾಯ ನಡೆದುಬಿಟ್ಟಿದೆ. ಹೆಸರಿಗೆ ಮಾತ್ರ ಅದು ಗ್ಲೋಬಲ್ ಇನ್‌ವೆಸ್ಟರ್ಸ್. ಆದರೆ, ಲೋಕಲ್‌ನವರೇ ಅದನ್ನು ತೆಗೆದುಕೊಂಡು, ಲೋಕಲ್‌ನವರೇ ರಿಯಲ್ ಎಸ್ಟೇಟ್‌ಗೆ ಮಾಡಿರುವುದನ್ನೂ ಕೂಡ ತನಿಖೆಗೆ ಒಳಪಡಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾವುದನ್ನಾದರೂ ಒಳಪಡಿಸಿ. ನಮ್ಮದೂ ಒಳಪಡಿಸಿ, ನಿಮ್ಮದೂ ಒಳಪಡಿಸಿ, ಎಲ್ಲವನ್ನೂ ಒಳಪಡಿಸಿ. ಏಕೆಂದರೆ, ಉದ್ದೇಶ ಚೆನ್ನಾಗಿರಬೇಕಲ್ಲವೇ ? ಇವತ್ತು ಮಾರ್ಕೆಟ್ ಪ್ರೈಸ್ ಜಾಸ್ತಿಯಾಗಿ ಒಂದು ಎಕರೆ 1 ಕೋಟಿ, 2 ಕೋಟಿ ರೂಪಾಯಿಗಳಿಗೆ ಹೋಗುವಾಗ, ನಮ್ಮ ರೈತ ಬಾಯಿಬಾಯಿ ಬಡಿದುಕೊಳ್ಳುವಾಗ, ಅವನಿಗೆ ಜಮೀನನ್ನು ವಾಪಸ್ಸು ಕೊಡಬೇಕು ಎನ್ನತಕ್ಕಂಥ ಅಂತಃಕರಣ ನಮಗೆಲ್ಲರಿಗೂ ಬಂದಿದೆ. ಹೀಗಿರುವಾಗ, ಇಂತಹ ಕಾನೂನು ಮಾಡಿ ವಾಪಸ್ಸು ಕೊಡಬಹುದಲ್ಲವೇ ? ಗ್ಲೋಬಲ್ ಇನ್‌ವೆಸ್ಟರ್ಸ್‌ಗೆ ಕೊಡಬಾರದು ಎನ್ನುವ ದೃಷ್ಟಿಯಿಂದಲೇ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಬಹಳ ಬಿಗಿ ಇತ್ತು. ಅದನ್ನು ಸಡಿಲಗೊಳಿಸಲೂ ನಾವೆಲ್ಲರೂ ಕಾರಣಕರ್ತರಲ್ಲವೇ ?

ಅಧ್ಯಕ್ಷರು : ಈಗ ಅಂಥ ಒಂದು ಕಾನೂನನ್ನು ಮಾಡಿದರೆ, ಅದು ಜ್ಯುಡಿಷಿಯಲ್ ಸ್ಕ್ರೂಟಿನಿಯಿಂದ ಪಾರಾಗುತ್ತದೆಯೇ ?

Sri M. Mallikarjuna Kharge : Government is sovereign and all lands belong to government. ಯಾರಿಗೆ ಲೀಸ್‌ಗೆ ಕೊಡುತ್ತೀರಿ, ಯಾರಿಗೆ ಗ್ರ್ಯಾಂಟ್ ಕೊಡುತ್ತೀರಿ, ಯಾರು ಓನರ್ ಇರುತ್ತಾರೆ. ಉದಾಹರಣೆಗೆ, ಲ್ಯಾಂಡ್ ರಿಫಾರ್ಮ್ಸ್ ಆ್ಯಕ್ಟ್‌ನಲ್ಲಿ 200 ಎಕರೆ, ಸಾವಿರ ಎಕರೆ, 10 ಸಾವಿರ ಎಕರೆ ಇದ್ದಂಥವರ ಜಮೀನನ್ನೂ ತೆಗೆದುಕೊಂಡು ಟೆನೆಂಟ್‌ಗೆ ಕೊಟ್ಟಿದ್ದೇವೆ. ಸರ್ಪ್ಲಸ್ ಲ್ಯಾಂಡ್ ತೆಗೆದುಕೊಂಡು ಡಿಸ್ಟ್ರಿಬ್ಯೂಟ್ ಮಾಡಿದ್ದೇವೆ. ಹಾಗೆ, ವಿಶೇಷವಾದಂಥ ಒಂದು ಕಾನೂನು ತಂದು ಜಮೀನನ್ನು ವಾಪಸ್ಸು ತೆಗೆದುಕೊಳ್ಳಬೇಕು. ಅದಕ್ಕೆ, of course, Government of India ಕೂಡ ಒಪ್ಪಬೇಕಾಗುತ್ತದೆ.

ಅಧ್ಯಕ್ಷರು : 9ನೇ ಶೆಡ್ಯೂಲ್‌ಗೆ ಸೇರಿಸಿದರೆ, of course, it is 9ನೇ ಶೆಡ್ಯೂಲ್‌ಗೆ ಸೇರಿಸದಿದ್ದರೆ ಹೇಗಾಗುತ್ತದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಷ್ಟು ಕಷ್ಟ ಪಟ್ಟು ತಾವು ನೈಸ್, ಬೆಂಗಳೂರು– ಮೈಸೂರು ಕಾರಿಡಾರ್ ಯೋಜನೆಯ ಬಗ್ಗೆ ಆಸಕ್ತಿ ವಹಿಸಿದಿರಲ್ಲಾ, ಹಾಗೆಯೇ ಅದನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಎಗ್ಸಾಮಿನೇಷನ್ ಮಾಡಿ. ಇದು ಒಂದೇ ಒಂದು ಪ್ರಾಜೆಕ್ಟ್‌ಗೆ ನಾವು ಹೋಗಿ ಲಂಡನ್‌ನಲ್ಲಿ ಕೂರಬೇಕು. ಲೀಗಲ್ ಎಕ್ಸ್‌ಪರ್ಟ್ಸ್ ಸಾಕಷ್ಟು ಜನ ಇದ್ದಾರೆ. ಇಲ್ಲೇ ಬೆಂಗಳೂರಿನಲ್ಲಿ ಕುಳಿತು ಅಥವಾ ದೆಹಲಿಯಲ್ಲಿ ಕುಳಿತು, ಅವರನ್ನು ಕನ್ಸಲ್ಟ್ ಮಾಡಿ, ಒಂದು ಹೊಸ ಕಾನೂನು ತನ್ನಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಕೊಟ್ಟಿರುವ ಪರ್ಪಸ್‌ಗೆ ಯೂಟಿಲೈಸ್ ಮಾಡಲಿಲ್ಲವೆಂದರೆ, anytime it can be taken back. ಪರ್ಪಸ್‌ಗೆ ಅದನ್ನು ಬಳಸಲಿಲ್ಲ ಎಂದರೆ ಏಕೆ ವಾಪಸ್ಸು ತೆಗೆದುಕೊಳ್ಳಬಾರದು ?

Sri K. Jayaprakash Hegde : The purpose for which the land was granted, within that time, ಉಪಯೋಗ ಮಾಡದಿದ್ದರೆ ವಾಪಸ್ಸು ತೆಗೆದುಕೊಳ್ಳಬಹುದು.

ಶ್ರೀ ವಾಟಾಳ್ ನಾಗರಾಜ್ : ಉದ್ದೇಶ ಈಡೇರದಿದ್ದರೆ, ಆ ಉದ್ದೇಶಕ್ಕಾಗಿ ಕೊಟ್ಟಿರತಕ್ಕಂಥ ಭೂಮಿಯನ್ನು ಸರ್ಕಾರ ಹಿಂದಕ್ಕೆ ಪಡೆಯಬಹುದು.

ಶ್ರೀ ಆರ್.ವಿ. ದೇಶಪಾಂಡೆ : ಖರ್ಗೆಯವರು ಅದನ್ನು ಹೇಳುತ್ತಿಲ್ಲ. ನೀವು ಹೇಳಿದಂತೆ ಪರ್ಪಸ್ ಯಾವಾಗ ಬರುತ್ತದೆ ? ಗವರ್ನಮೆಂಟ್ ಯಾವ ಉದ್ದೇಶಕ್ಕೆ ಕೊಡುತ್ತದೆ, ಕೆಐಎಡಿಬಿ ಯವರು ಕೊಟ್ಟಾಗ ನೀವು ಹೇಳಿದುದು ಸರಿ. ಎರಡು ವರ್ಷ ಟೈಂ ಇರುತ್ತದೆ, ನಂತರ ಎಕ್ಸ್‌ಟೆನ್ಷನ್ ತೆಗೆದುಕೊಳ್ಳಬಹುದು. ಆದರೆ ಖರ್ಗೆಯವರು ಇನ್ನೂ ಒಂದು ಸ್ಟೆಪ್ ಮುಂದೆ ಹೋಗುತ್ತಿದ್ದಾರೆ. ಒಂದು ವೇಳೆ ನಮ್ಮಂಥವರು ಅದರ ಸುತ್ತಮುತ್ತ ಜಮೀನನ್ನು ತೆಗೆದುಕೊಂಡಿದ್ದರೆ, ಅದನ್ನೂ ಟೇಕ್ ಓವರ್ ಮಾಡಿ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅದಕ್ಕೆ ನಮ್ಮ ಬೆಂಬಲ ಇದೆ. ಅದನ್ನೂ ಮಾಡಿ. ನೀವು ಅದನ್ನು ಮಾಡಿದರೂ ಸಹ ನಾವು ಸಪೋರ್ಟ್ ಮಾಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಬೆಂಗಳೂರು ಸುತ್ತಮುತ್ತ ಯಾರ್‍ಯಾರು ಜಮೀನನ್ನು ತೆಗೆದುಕೊಂಡಿದ್ದಾರೋ, ಅದನ್ನೂ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇನ್ನೊಂದು ದುರ್ದೈವದ ಸಂಗತಿ ಎಂದರೆ, ಅದನ್ನು ಹೇಳಿದರೆ ನಮಗೆ ನಾಚಿಕೆಯಾಗುತ್ತದೆ ; ಏನಪ್ಪಾ ಇವರು ಹೀಗೆ ಮಾತನಾಡುತ್ತಾರೆ ಅಥವಾ ಇಂಥ ಸ್ವಭಾವ ಬೆಳೆಸಿಕೊಂಡಿದ್ದಾರೆ ಎನ್ನತಕ್ಕಂಥ ಅಪಪ್ರಚಾರ ಮಾಡುವವರು ಕೆಲವು ಜನರಿದ್ದಾರೆ. ಅದಕ್ಕೆ ನಾವು ಹೆದರುವುದಿಲ್ಲ.

ಏಕೆಂದರೆ, ಸರ್ಕಮ್‌ಸ್ಟ್ಯಾನ್ಸಸ್ ಹಾಗೆ ಇದೆ. ನಾನು ಮಾತನಾಡದಿದ್ದರೆ ಇನ್ನೊಬ್ಬರ್ಯಾರೂ ಮಾತನಾಡುವುದಿಲ್ಲ. ಅದನ್ನು ನಾವು ಇವತ್ತು ಹೇಳದೇ ಹೋದರೆ, ಇನ್ನೊಬ್ಬರಿಗೆ ಅರ್ಥವೂ ಆಗುವುದಿಲ್ಲ. ಹಾಗಾಗಿ, ಅದನ್ನು ಹೇಳಲೇಬೇಕಾಗುತ್ತದೆ. ಇವತ್ತು ಏನಾಗಿದೆ ಎಂದರೆ, ತಾವು ಯಾರೂ ಕೂಡ ತಪ್ಪು ತಿಳಿದುಕೊಳ್ಳಬಾರದು, ಈ ಪ್ರಾಜೆಕ್ಟ್ ಒಂದು ಕಡೆ ಉಳಿಯಿತು. ಈ ಪ್ರಾಜೆಕ್ಟ್‌ನ ಪರ, ವಿರುದ್ಧ ಹೇಗಾಗಿದೆ ಎಂದರೆ, ಇದು ಜಾತಿ ಮೇಲೆ ನಡೆದಿದೆ. ಅದನ್ನು ಯಾರೂ ಇಂಟೆನ್‌ಷನಲಿ ಮಾಡುತ್ತಿಲ್ಲ. ಆದರೆ ಹೊರಗಡೆ ಪ್ರಚಾರವಾಗತಕ್ಕಂಥದ್ದು ಹೇಗಿದೆ ಎಂದರೆ, ಭೂಮಿ ಕಳೆದುಕೊಳ್ಳುತ್ತಿರತಕ್ಕಂಥವರು ಒಕ್ಕಲಿಗರು, ಪ್ರಾಜೆಕ್ಟ್ ಇರತಕ್ಕಂಥಾದ್ದು ಲಿಂಗಾಯಿತರದ್ದು ಎಂದು ಅಪಪ್ರಚಾರ ನಡೆದಿದೆ. ಅದಕ್ಕೆ ಅಲ್ಲಿ ಮೀಟಿಂಗ್‌ಗಳಾದವು. ಇಲ್ಲಿ ಮೀಟಿಂಗ್‌ಗಳಾದದವು, ಅಲ್ಲಿ ಆದಾಯಿತು, ಇಲ್ಲಿ ಇದಾಯಿತು ಎಂದು ಕೆಲವು ಸುದ್ಧಿಗಳು ಬಂದವು.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾವೂ ಲಿಂಗಾಯಿತರೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಲಿಂಗಾಯಿತರಿದ್ದರೆ, ನಿಮ್ಮನ್ನು ಬಿಟ್ಟು ಬೇರೆಯವರನ್ನು ಕರೆಸುತ್ತಾರೆ. ಅಸೋಸಿಯೇಷನ್ ಎಂದರೆ ಅಲ್ಲಿ ನೀವೇ ಇರಬೇಕು ಎಂದೇನೂ ಅಲ್ಲ, ಅವರಿಗೆ ಅನುಕೂಲ ಇದ್ದವರನ್ನು ಕರೆಸುತ್ತಾರೆ. ಆ ಅಸೋಸಿಯೇಷನ್ನಿನ ಏಮ್ಸ್ ಅಂಡ್ ಆಬ್ಜಕ್ಟ್ ್ಗೆ ಸೀಮಿತವಾಗಿ ಯಾರು ಮೆಂಬರ್‌ಶಿಪ್ ಮಾಡಿಕೊಳ್ಳುತ್ತಾರೆ, ಅಂಥವರನ್ನು ಕರೆಸುತ್ತಾರೆ. ಹೀಗೆ ಜಾತಿ ಪ್ರಚಾರವೂ ನಡೆದಿದೆ. ನಮ್ಮ ಭೂಮಿ ಹೋಗುತ್ತದೆ. ಯಾರಿಗೆ ಹೋಗುತ್ತದೆ ? ಖೇಣಿಗೆ ಹೋಗುತ್ತದೆ, ಬೀದರ್‌ನವರಿಗೆ ಹೋಗುತ್ತದೆ ಎಂದು ಪ್ರಚಾರವಾಗುತ್ತಿದೆ. ಹೀಗೆ ಪ್ರಚಾರ ಮಾಡುವುದು ಆಗುತ್ತಿದೆ. ಇನ್ನೊಬ್ಬರು ಪ್ರಚಾರ ಮಾಡುವುದು ಹೇಗೆಂದರೆ, ಇಲ್ಲಿಯವರೆಗೆ ಮಾಡಿದಂಥ ಯಾವುದಕ್ಕೂ ವಿರೋಧ ಬಂದಿಲ್ಲ, ಇನ್ಫೋಸಿಸ್‌ಗೆ ಮಾಡಿದವನಿಗೆ ಇಲ್ಲ, ವಿಪ್ರೋ ಮಾಡಿದವನಿಗೆ ಇಲ್ಲ, ಬಿಪಿಎಲ್ ಮಾಡಿದವನಿಗೆ ಇಲ್ಲ, ಐಟಿಸಿ ಮಾಡಿದವನಿಗೆ ಇಲ್ಲ, ಎಂಥಂಥವರು ಮಾಡಿದರು, ಅವರ್ಯಾರಿಗೂ ವಿರುದ್ಧವಿಲ್ಲ, ಇವನಿಗೆ ಮಾತ್ರ ಏಕೆ ಗಂಟು ಬಿದ್ದಿದ್ದಾರೆ? ಈ ರೀತಿಯ ಒಂದು ಪ್ರಚಾರ ನಡೆಯುತ್ತಿದೆ. ಅಂದರೆ, ಈ whispering campaign ನಡೆಯುತ್ತಿದೆ, ಇದು ಕೇವಲ ಇದೊಂದು ಪ್ರಾಜೆಕ್ಟ್‌ದ್ದು. ಇದರ ಬಗ್ಗೆ ನೀವು ಏನು ನಿರ್ಣಯ ತೆಗೆದುಕೊಳ್ಳುತ್ತೀರಿ? ನೀವು ಇದರ ಬಗ್ಗೆ ಒಂದು ಬಿಲ್ ತನ್ನಿ. ಅದರ ಕಂಟೆಂಟ್ಸ್ ಏನಿದೆ ನೋಡೋಣ. ಯಾವ ಉದ್ದೇಶದಿಂದ ಅದನ್ನು ತರುತ್ತೀರಿ ಎಂದು ನೋಡೋಣ. ಅದನ್ನು ಸರಿ ಮಾಡುವುದಕ್ಕೆ ನೀವು ಬಿಲ್ ತನ್ನಿ. ಆದರೆ, ಈ ರೀತಿಯಾದ ಪ್ರಚಾರ ಕೂಡ ನಡೆದಿದೆ, ಇದು ಸುಳ್ಳಲ್ಲ, ಸತ್ಯಕ್ಕೆ ಸಮೀಪವಾದಂಥ ಮಾತನ್ನು ನಾನು ಹೇಳುತ್ತಿದ್ದೇನೆ. ಮತ್ತೆ ಅನೇಕ ಕಡೆ

ಚರ್ಚೆಯಾಗಿದ್ದೂ ಕೂಡ ನಿಮಗೆ ಗೊತ್ತಿರಬಹುದು, ಇಂತಹ ಮಾತುಗಳಿಗೆ ನಿಜವಾಗಲೂ ಕೂಡ ಸರ್ಕಾರದಲ್ಲಿ ಅವಕಾಶವನ್ನು ಮಾಡಿ ಕೊಡಬಾರದು. ಇದನ್ನು ಏನಾದರೂ ಮಾಡಿ ತಿಳಿ ಮಾಡಬೇಕು. ಈ ವಾತಾವರಣವನ್ನು ತಿಳಿ ಮಾಡಿ ಇಡೀ ಪ್ರಪಂಚಕ್ಕೆ ಮತ್ತು ದೇಶದ ಜನರಿಗೆ ಗೊತ್ತಾಗಬೇಕು. ಇಲ್ಲಿ ಸರ್ಕಾರ ನಿಷ್ಪಕ್ಷಪಾತವಾಗಿ ಒಂದು ಪ್ರಾಜೆಕ್ಟ್‌ಗಳಿಗೆ based on merit support ಮಾಡುತ್ತಾರೆ ಎನ್ನತಕ್ಕಂಥದ್ದು ಬರಬೇಕು. ಅದೇ ರೀತಿಯಾಗಿ ಯಾರೇ ತಮ್ಮ ವೈಯಕ್ತಿಕ ಲಾಭಕ್ಕಾಗಿ ಜಾತಿ ಹೆಸರನ್ನು ಉಪಯೋಗ ಮಾಡಿಕೊಂಡು ಅವರು ಹೇಳಿಕೆ ಕೊಟ್ಟರೆ ಅದು ಸರಿಯಲ್ಲ. ಕೆಲವು ಇಂಡಸ್ಟ್ರಿಯಲಿಸ್ಟ್‌ಗಳ ನಾಲಿಗೆ ಸ್ವಲ್ಪ ಬಹಳ ಉದ್ದ, ಎಲ್ಲಿ ಏನು ಮಾತನಾಡಬೇಕು ಅದನ್ನು ಬಿಡುತ್ತಾರೆ. ಎಲ್ಲಾ ರಾಜಕಾರಣಿಗಳಿಗೂ ಟೀಕೆ, ಎಲ್ಲಾ ಮಂತ್ರಿಗಳಿಗೂ ಟೀಕೆ, ಈಗ ಏನಾಗಿದೆ ಎಂದರೆ, ನಾವು ಒಳ್ಳೆಯವರು ಕೆಟ್ಟವರು ಎಂದು ನಾವು ಅವರ ಸರ್ಟಿಫಿಕೇಟ್‌ನ್ನು ತೆಗೆದುಕೊಳ್ಳಬೇಕಾಗಿದೆ. ನಮ್ಮ ಕ್ಯಾರೆಕ್ಟರ್ ಸರ್ಟಿಫಿಕೇಟ್ ಕೊಡುವವರು ಯಾರು ಎಂದರೆ ಈ ಖೇಣಿಯಂಥವರು! ಅದಕ್ಕೆ ಕಡಿವಾಣ ಹಾಕಬೇಕೆಂದರೆ, ಏನು ಮಾಡಬೇಕು? ನೀವು ಸರಿ ಇರಬೇಕು. ನೀವು ಸರಿ ಇದ್ದಾಗ ಮಾತ್ರ ನಾವೂ ಕೂಡ ಆ ನೈತಿಕ ಧೈರ್ಯದಿಂದ ಮಾತನಾಡಬಹುದು. ನಿಮ್ಮ ಉದ್ದೇಶ ಮೇ ಒಂದು, ಕಾನೂನು ತರುವುದು ಒಂದು, ಪ್ರಚಾರ ಮಾಡುವುದು ಒಂದು, ಒಳಗೊಂದು ಹೊರಗೊಂದು ಮಾಡಿದರೆ, ಅದರಿಂದ ಖಂಡಿತವಾಗಿ ಯಾರಿಗೂ ಪ್ರಯೋಜನವಾಗುವುದಿಲ್ಲ. ಈ whispering campaign ನಡೆಯುತ್ತಿರುತ್ತವೆ. ಅದರಿಂದ ರಾಜ್ಯಕ್ಕೆ ಹಾನಿಯಾಗುತ್ತದೆ. ಅದರಿಂದ ರಾಜ್ಯಕ್ಕೆ ಬರತಕ್ಕಂಥ ಬಂಡವಾಳ ನಿಂತು ಹೋಗುತ್ತದೆ. ಅದರಿಂದ ನಮ್ಮ ಎಂಪ್ಲಾಯ್‌ಮೆಂಟ್ ಕುಂಟಿತವಾಗುತ್ತದೆ. ಅದರಲ್ಲಿಯೂ ಕೂಡ ಕೆಲವು ಜನರು ಮಾತನಾಡುವವರು ಇದ್ದಾರೆ. ಎಂಪ್ಲಾಯ್‌ಮೆಂಟ್ ಎಂದರೆ ಯಾರಿಗೆ ಸಿಗುತ್ತದೆ? ಬಿಇ ಕಂಪ್ಯೂಟರ್ ಮಾಡಿದವರು ಡಾಕ್ಟರ್ ಮುಗಿಸಿದವರೆ ಎಂಪ್ಲಾಯ್‌ಮೆಂಟ್ ತೆಗೆದುಕೊಳ್ಳುತ್ತಾರೆ, ಅದರಿಂದ ನಮಗೇನು ಸಿಗುತ್ತದೆ? ಪ್ರತಿಯೊಂದಕ್ಕೂ ಕೂಡ ನೀವು ಅದೇ ದೃಷ್ಟಿಯಿಂದ ನೋಡಿದರೆ ಹೇಗೆ ಸಾಧ್ಯ ಇದರಲ್ಲಿ? ಲಕ್ಷಾಂತರ ಹುಡುಗರು ಹಳ್ಳಿಯಿಂದ ಬಂದವರು ಮಾಡುತ್ತಾರೆ, ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲದಿರಬಹುದು. ಆದರೆ ನಾವು ಅದನ್ನು ಹೆಚ್ಚಿನ ಸಂಖ್ಯೆಯಲ್ಲಿ ತರುವುದಕ್ಕೆ ಪ್ರಯತ್ನ ಮಾಡಬೇಕು. ಆ ಲೆವಲ್ ಫೀಲ್ಡ್‌ಗೆ ನಾವು ಮಾಡಿಕೊಟ್ಟಾಗ ಮಾತ್ರ ಅವರು ಹೋಗುವುದಕ್ಕೆ ಸಾಧ್ಯವಾಗುತ್ತದೆ. ನಾವು ಅದನ್ನು ಏನೂ ಮಾಡುವುದಿಲ್ಲ. ನೀವು ಕಾಂಪಟ್ ಮಾಡಿ ಮಾಡಿ ಎಂದರೆ ಹೇಗಾಗುತ್ತದೆ? ಇದನ್ನು ಸಿಇಟಿ ತರಹ ಮಾಡಿದಂತಾಗುತ್ತದೆ. ಅದಕ್ಕಾಗಿ ನಾವು ಹೇಳುವುದು, ಪಿಯುಸಿ

ಮಾರ್ಕ್ಸ್ ಮತ್ತು ಸಿಇಟಿ ಮಾರ್ಕ್ಸ್‌ಗಳನ್ನು ತೆಗೆದುಕೊಂಡು ಎರಡು ಕಂಬೈಂಡ್ ಮಾಡಿದರೆ ಹಳ್ಳಿಯ ಮಕ್ಕಳಿಗೆ ಅನುಕೂಲವಾಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ಪದೇ ಪದೇ ಹೇಳುತ್ತೇನೆ. ಅದಕ್ಕಾಗಿ ನಾನು ಮಾನ್ಯ ಶಂಕರಮೂರ್ತಿಯವರನ್ನು ಕೇಳಿಕೊಂಡೆ, ಅವರು ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ಅಜೆಂಡಾ ಏನು ಇರುತ್ತದೆ ಅದನ್ನು ಮಾತ್ರ ಹೇಳುತ್ತಾರೆಯೇ ಹೊರತಾಗಿ ಈ ಸದನದ ಸದಸ್ಯರ ಮಾತಿಗೆ ಬೆಲೆಯೇ ಇಲ್ಲ.

ಅಧ್ಯಕ್ಷರು : ಅವರ ವಿರುದ್ಧ ಕೂಡ ಚಳುವಳಿ ನಡೆಯುತ್ತಿದೆ ಅಲ್ಲವೇ ಸ್ವಾಮಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದು ಫೀಸ್ ಸಲುವಾಗಿ, ಮತ್ತು ರಿಸರ್ವೇಶನ್ ಸಲುವಾಗಿ ಚಳುವಳಿ ನಡೆಯುತ್ತಿದೆ. ಅಂದರೆ ನಿಮಗೆ ಗೊತ್ತಾಯಿತು ಅಲ್ಲವೆ? ಯಾರಿಗೂ ಕೂಡ ಬಡವರ ಮಕ್ಕಳಿಗೆ ರಿಸರ್ವೇಶನ್ ಕೊಡಬಾರದು. ಇದಲ್ಲದೆ ಮೆರಿಟ್ ಒಂದು. ಆದರೆ ಆ ಮೆರಿಟ್ ಒಂದು ಇದೆ ಎಂದು ತಿಳಿದುಕೊಂಡು ಎಲ್ಲಾ ಕಡೆ ನೀವು ಮೆರಿಟ್ ಬೇಡ ಎನ್ನುವುದು ಆಗಬಾರದಲ್ಲವೆ? ಸಂದರ್ಭ ನೋಡಿ ಎಲ್ಲೆಲ್ಲಿ ಡಿಸೇಬಲ್ಡ್ ಇರುತ್ತಾರೆ ಅವರಿಗೆ ನೀವು ಸಹಾಯ ಮಾಡಬೇಕಾಗುತ್ತದೆ. ಯಾರು ವೀಕ್ ಇರುತ್ತಾರೆ ಅವರಿಗೆ ನೀವು ಸಹಾಯ ಮಾಡಬೇಕಲ್ಲವೆ?

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಮತ್ತು ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೆ, ಎಂಸಿಐ ದವರು ಮಾಡಿದ್ದು ಇದೊಂದು ಅವೈಜ್ಞಾನಿಕ. ನಾವೂ ಕೂಡ ಅನೇಕ ಸಂದರ್ಭದಲ್ಲಿ ಹಿಂದಿನ ಸರ್ಕಾರದಲ್ಲಿ ತಾವು ಮತ್ತು ನಾವೂ ಕೂಡ ಅದಕ್ಕೆ ಪ್ರತಿಪಾದನೆ ಮಾಡಿದ್ದೇವೆ. ಆ ಒಂದು ವರ್ಷಕ್ಕೆ ಎಂದು ನಾವು ನಿರ್ಣಯವನ್ನು ತೆಗೆದುಕೊಂಡೆವು. ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದವರು ಸಿಇಟಿ ಅಂಕಗಳನ್ನು ಮಾತ್ರ ಪರಿಗಣಿಸಬೇಕು. ಪಿಯುಸಿ ಅಂಕಗಳನ್ನು ಪರಿಗಣಿಸಬಾರದು ಎಂದು ಒಂದು ಕಾನೂನನ್ನು ಮಾಡಿದರು. ಅದು ಸರಿಯಾದದ್ದು ಅಲ್ಲ. ಬೆಸಿಕ್ ಸೈನ್ಸ್ ಯಾರೂ ಓದುವುದಿಲ್ಲ. ಕೇವಲ ಕ್ವಾಲಿಫೈ ಮಾರ್ಕ್ಸ್‌ಗಾಗಿ ಪಿಯುಸಿಯನ್ನು ಓದಿಕೊಂಡು ಸಿಇಟಿ ಕಡೆ ಹೆಚ್ಚು ಗಮನವನ್ನು ಕೊಟ್ಟು ಉರು ಹೊಡೆದು ಅದೆಲ್ಲವನ್ನೂ ಇವರೇ ಪಡೆಯುತ್ತಾರೆಂದು ಹೇಳಿ ಕಳೆದ ಸಲ ನಮ್ಮ ಸಮ್ಮಿಶ್ರ ಸರ್ಕಾರ ಮಾನ್ಯ ಧರ್ಮಸಿಂಗ್‌ರವರ ನೇತೃತ್ವದಲ್ಲಿದ್ದಾಗ ನಾವು ನೀವು ಎಲ್ಲರೂ ಪ್ರತಿಪಾದಿಸಿರುತ್ತೇವೆ. ಆದರೆ ಎಂಸಿಐ ದವರದದ್ದು ಈ ರೀತಿ ನಿಯಮ ಇದೆ. ಅದನ್ನು ಕನಿಷ್ಠಪಕ್ಷ ಒಂದು ವರ್ಷಕ್ಕೆ ನಾವು ರಿಯಾಯಿತಿಯನ್ನು ತೆಗೆದುಕೊಂಡೆವು. ನಿಮ್ಮ ಮಾತನ್ನು ನಾವು ಸಂಪೂರ್ಣವಾಗಿ ಒಪ್ಪುತ್ತೇವೆ. ನಾವು ಎಲ್ಲರೂ ಕಲಿತು ಮಾನ್ಯ ಅರ್ಜುನ್‌ಸಿಂಗ್‌ರವರಿಗೆ

ಕೇಂದ್ರ ಮತ್ತು ನಮ್ಮ ಸರ್ಕಾರ ಕಲೆತು ಎಂಸಿಐ ದವರು ಮಾಡಿದತಕ್ಕಂಥ ಈ ನೀತಿಯನ್ನು ಸರಿಪಡಿಸುವುದಕ್ಕೆ ಒತ್ತಡವನ್ನು ತರಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹಾಗಾದರೆ ತಮಿಳುನಾಡಿನಲ್ಲಿ ಈ ಎಂಸಿಐ ಏಕೆ ಅಪ್ಲೈ ಆಗುವುದಿಲ್ಲವೇ?

ಶ್ರೀ ಜೆ.ಸಿ. ಮಾಧುಸ್ವಾಮಿ : ಕೋರ್ಟ್ ಆರ್ಡ್‌ರ್ ಆದ ಮೇಲೆ ಸರ್. ಚೆನ್ನೈ ಕೋರ್ಟ್ ಸಿಇಟಿ ಎಗ್‌ಜಾಮ್ ಮಾಡದಿರುವುದಕ್ಕೆ ತಕರಾರು ಮಾಡಿದ್ದನ್ನು ಬಿಟ್ಟರೆ ಪಿಯುಸಿ ಮತ್ತು ಸಿಇಟಿ ಅಗ್ರಿಗೇಟ್‌ಗೆ ವಿರೋಧವನ್ನು ಮಾಡಿರಲಿಲ್ಲ. 200 marks from PUC and 100 marks from CET, ಈಗ ಅಡ್ಮಿಷನ್ ಮಾಡಿಕೊಳ್ಳುತ್ತಿದ್ದಾರೆ ತಮಿಳುನಾಡಿನಲ್ಲಿ, ಎಂಸಿಐ ಅಲ್ಲಿ ಏಕೆ ತಕರಾರು ಮಾಡಿಲ್ಲ? ಆಲ್ ಪಾರ್ಟಿ ಮೀಟಿಂಗ್‌ನಲ್ಲಿ ಸಿಎಂ ಇದ್ದರು ನಾವು ಒಂದು ಗಂಟೆ ಹೇಳಿದೆವು. ಅಡ್ವೋಕೇಟ್ ಜನರಲ್‌ರವರನ್ನು ಕೂಡಿಸಿಕೊಂಡು ಹೇಳಿದೆವು. ಇದು ಅವರ ತಲೆಗೆ ಹೋಗುವುದಿಲ್ಲವಲ್ಲಾ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ನಿಜ ಸರ್. ಏಕೆಂದರೆ ತಮಿಳುನಾಡಿನಲ್ಲಿ ಪಿಯುಸಿ ಮತ್ತು ಸಿಇಟಿ ಎರಡನ್ನೂ ಅವರು ತೆಗೆದುಕೊಳ್ಳುತ್ತಾರೆ. ಬೇರೆ ರಾಜ್ಯದಲ್ಲಿಯೂ ಕೂಡ ಇದೆ. ಅದನ್ನು ನಾವು ಮಾಡಿದರೆ ತೊಂದರೆಯಾಗುವುದಿಲ್ಲ. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಒಂದು ಕಡೆ ನಮ್ಮ ಮಕ್ಕಳಿಗೂ ತೊಂದರೆಯಾಗುತ್ತದೆ. ಅನೇಕ ಕಡೆ ಸೈನ್ಸ್ ಟೀಚರ್ ಇರುವುದಿಲ್ಲ. ಇಂಗ್ಲೀಷ್ ಟೀಚರ್ ಇರುವುದಿಲ್ಲ. ಕೆಮೆಸ್ಟ್ರಿ ಟೀಚರ್ ಇರುವುದಿಲ್ಲ. ಅದು ತೊಂದರೆ, ಆದರೂ ಕೂಡ ಕನಿಷ್ಠ ಅವನು ಒಂದು ವರ್ಷ ಓದುತ್ತಾನೆ. ಪಾಪ ಅವನು ಕಷ್ಟ ಪಟ್ಟು ಅದಕ್ಕೆ ಏನೂ ಬೆಲೆ ಇಲ್ಲವೆಂದರೆ ಬಹಳ ಕಷ್ಟವಾಗುತ್ತದೆ. ಕೇವಲ ಮೂರು ಅಥವಾ ಆರು ತಿಂಗಳ ಟ್ಯೂಷನ್ ತೆಗೆದುಕೊಂಡು ಸಿಇಟಿ ಗೆ ಏನು ಪ್ರಶ್ನೆ ಬರುತ್ತವೆ ಅಬ್ಜೆಕ್ಟೀವ್ ಟೈಪ್ಸ್ ಮಾತ್ರ ಬಾಯಿಪಾಠ ಮಾಡಿಕೊಂಡು ಹೋಗಿ ಅವನು 90–95 ಪರ್ಸೆಂಟ್ ತೆಗೆದುಕೊಳ್ಳುವುದು. ಪಾಪ ಹಳ್ಳಿಯಿಂದ ಬಂದವನು ಟಿವಿ ಎಂದರೇನು ಕಂಪ್ಯೂಟರ್ ಎಂದರೇನು ತಿಳಿದುಕೊಳ್ಳಬೇಕೆಂದರೆ ಅವನಿಗೆ ಒಂದು ವರ್ಷ ಬೇಕು. ಪಿಯುಸಿ ಹಾಗೂ ಸಿಇಟಿಯ ಎರಡೂ ಮಾರ್ಕ್ಸ್‌ಗಳು ಸೇರಿದರೆ ಅಲ್ಲಿ 50–50ರಲ್ಲಿ ಅನುಕೂಲವಾಗುತ್ತದೆ. ಅದನ್ನು ನಾವೆಲ್ಲರೂ ಕೂಡ ಮಾಡಬೇಕು. ಕೆಲವು ಸಲ ಏನಾಗುತ್ತದೆ, ನಿಮಗೆ ನಮಗೆ ಬೇಕಾಗಿದ್ದು ಕಾಮನ್ ಇರುತ್ತವೆ. ಆದರೆ ದುರ್ದೈವದಿಂದ ಪೊಲಿಟಿಕಲಿ ಏನು ಮಾಡುತ್ತೇವೆಂದರೆ, ನಾವು ತೆಗೆದುಕೊಂಡರೆ ನೀವು ವಿರುದ್ಧ ಮಾಡುವುದು. ನೀವು ತೆಗೆದುಕೊಂಡರೆ ನಾವು ವಿರುದ್ಧ ಮಾಡುವುದು. ಇದು

ಏಕೆಂದರೆ, ನಮ್ಮ ತಲೆಯಲ್ಲಿ ಆಗ ಕಮಿಟ್‌ಮೆಂಟ್ ಮತ್ತು ಸೋಷಿಯಲ್ ಜಸ್ಟಿಸ್ ಬರುವುದಿಲ್ಲ. ನನಗೆ ಸಧ್ಯಕ್ಕೆ ಯಾವುದು ಅನುಕೂಲ ಇದೆ ಅದನ್ನು ಮಾಡುವುದು ಉಳಿದದ್ದು ಆಮೇಲೆ ನೋಡೋಣ. ನಮಗೆ ಎಲ್ಲರಿಗೂ ರಿಸರ್ವೇಶನ್ ಕೊಡಿಸಿ ಕೊಡುವುದು ಅದು ನಮಗೆ ಅನುಕೂಲ ಅದನ್ನು ಮಾಡುವುದು. ಇಲ್ಲದಿದ್ದರೆ ಒಳಮೀಸಲಾತಿ ಹೇಳಿ ಬಿಡುವುದು. ಅನಾನುಕೂಲವಾದಾಗ, ಹೀಗೆ ನಮ್ಮ ಅನುಕೂಲ ಪ್ರಕಾರವಾಗಿ ನಾವು ನೋಡುತ್ತಿದ್ದೇವೆಯೇ ಹೊರತಾಗಿ, ಬೇರೆ ಏನೂ ಇಲ್ಲ. ಸಮಗ್ರವಾಗಿ ಸಾಮಾಜಿಕವಾದ ನ್ಯಾಯ ಸಿಗಬೇಕು, ಅದರಲ್ಲಿ ಒಬ್ಬರೋ ಇಬ್ಬರೋ ಇರುತ್ತಾರೆ. ನಾನು ಇಲ್ಲವೆಂದು ಹೇಳುವುದಿಲ್ಲ. ಅವರಿಗೆ ನೀವು ಯಾವ ರೀತಿಯಾದ ಪ್ರೋತ್ಸಾಹ ನೀಡಬೇಕು ಅದು ಬೇರೆ ಪ್ರಶ್ನೆ. ಆದರೆ ಸಾರಾಗಟಾಗಿ ತತ್ವವನ್ನೇ ಬುಡಮೇಲು ಮಾಡತಕ್ಕಂಥದ್ದು ಎಂದೂ ಕೂಡ ಆಗಬಾರದು. ಆ ದೃಷ್ಟಿಯಿಂದ ನಾನು ಆ ಮಾತನ್ನು ಹೇಳಿದೆ. ನೀವು ಸರಿಪಡಿಸುತ್ತೇನೆಂದು ಹೇಳಿದಿರಿ; ಅದನ್ನು ಮಾಡಬೇಕು. ಕೊನೆಯದಾಗಿ ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಇದರ ಬಗ್ಗೆ ದೀರ್ಘವಾಗಿ ಆಲೋಚನೆ ಮಾಡಿ ಒಂದು ಬಿಲ್ ತರಬೇಕು. ಏನು ಟೇಕ್-ಓವರ್ ಮಾಡುತ್ತೀರೋ ಅಥವಾ ಸರ್‌ಪ್ಲಸ್ ಜಮೀನನ್ನು ಮಾತ್ರ ತೆಗೆದುಕೊಳ್ಳುತ್ತೀರೋ ಅಥವಾ ಇಡೀ ಈ ಬೆಂಗಳೂರಿನಲ್ಲಿರತಕ್ಕಂಥ ಜಮೀನಿನ ಕಿಮ್ಮತ್ತು ಹೆಚ್ಚಿಗೆ ಆದ ಕಾರಣ ಅಂತಹ ಜಮೀನುಗಳನ್ನು ತೆಗೆದುಕೊಳ್ಳುತ್ತೀರೋ ಎನ್ನತಕ್ಕಂಥದ್ದು ಮತ್ತು ಇಂಡಿಸ್ಟ್ರಿಯಲಿಸ್ಟ್ ಖೇಣಿ ಒಬ್ಬರೇ ಅಲ್ಲ. ಅನೇಕ ಇಂಡಸ್ಟ್ರಿಯಲಿಸ್ಟ್‌ಗಳಿಗೆ ತಾವೇನು ಜಮೀನುಗಳನ್ನು ಕೊಟ್ಟಿದ್ದಿರೊ, ಎಲ್ಲೆಲ್ಲಿ ಸರ್‌ಪ್ಲಸ್ ಇದೆ ಅದೂ ಕೂಡ ತೆಗೆದುಕೊಳ್ಳುತ್ತೀರೊ ಹೇಗೆ ಎನ್ನುವುದರ ಬಗ್ಗೆ ಗೊತ್ತಾಗಬೇಕಾಗುತ್ತದೆ. ಯಾರ್‍ಯಾರು ಸಪೋರ್ಟ್ ಮಾಡುತ್ತಾರೆ ಯಾರು ಇಲ್ಲ ಯಾರು ಏನು ಎನ್ನುವುದರ ಬಗ್ಗೆ ಗೊತ್ತಾಗಬೇಕಾಗುತ್ತದೆ. ಯಾವುದೇ ಬಿಲ್ ತರಬೇಕಾದರೂ ಕೂಡ ಸದುದ್ದೇಶದಿಂದ ತರಬೇಕು. ನಾನು ಮೊದಲೇ ಹೇಳಿದೆ. ಸಿಇಟಿ ಬಿಲ್ ಸಲುವಾಗಿ ಒಂದು ಜಾಯಿಂಟ್ ಸೆಲೆಕ್ಟ್ ಕಮಿಟಿ ಮಾಡಿ 8 ದಿವಸ ವಿಚಾರ ಮಾಡಿ ತರೋಣವೆಂದರೆ ತರಾತುರಿಯಲ್ಲಿ ತಂದುಬಿಟ್ಟಿರಿ. ಮತ್ತೆ ಇನ್ನೊಂದು ಬಿಲ್ ತರಬೇಕಾಗುತ್ತದೋ ಏನೋ; ಏಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆಂದರೆ, ಒಂದಲ್ಲ ಹತ್ತು ಸಲ ಕನ್ಸಲ್ಟ್ ಮಾಡುವುದು ಯಾರ್‍ಯಾರಿಗೆ ಹೊಸ ಹೊಸ ವಿಚಾರಗಳು ಬರುತ್ತವೆ ಮತ್ತು ಅದು ರಾಜ್ಯದ ಹಿತದೃಷ್ಟಿಯಿಂದ ಮತ್ತು ಜನರ ಹಿತದೃಷ್ಟಿಯಿಂದ ಅಂತಹ ವಿಚಾರಗಳು ಬರುವಾಗ ನಾವು ತೆಗೆದುಕೊಳ್ಳಬೇಕೇ ಹೊರತಾಗಿ ನಾವು ಹೇಳಿದ್ದೆಲ್ಲವೂ ಕೂಡ ಸರಿಯಲ್ಲ ನೀವು ಮಾಡುವುದೇ ಸರಿಯಾದುದು ಎನ್ನುವುದು ನಿಮ್ಮ ತಲೆಯಲ್ಲಿದ್ದರೆ ಅದಕ್ಕೆ ಏನೂ ಮಾಡುವುದಕ್ಕಾಗುವುದಿಲ್ಲ. ಇಷ್ಟು ಮಾತುಗಳನ್ನು

ಹೇಳಿ, ದಯವಿಟ್ಟು ಒಂದು ಬಿಲ್ ತೆಗೆದುಕೊಂಡು ಬನ್ನಿ ಮತ್ತು ಇದರೊಳಗೆ ಅವ್ಯವಹಾರವಾಗಿದೆ, ಅವರು ಇದ್ದಾರೆ ಇವರು ಇದ್ದಾರೆ ಎಂಬುದಕ್ಕೆಲ್ಲಾ ಸೆಪರೇಟ್ ಎನ್‌ಕ್ವಯರಿ ಮಾಡಲು ಸಿಬಿಐಗೆ ಕಳುಹಿಸಿ ಬಿಡಿ. ಇಲ್ಲಿ ಒಂದು ಬಿಲ್ ಇಂಟ್ರಡ್ಯೂಸ್ ಮಾಡಿ ಅದರೊಳಗೆ ನಿಮಗೆ ಏನೇನು ಬೇಕು ಎನ್ನುವುದು ಗೊತ್ತಾಗಲಿ ಅದನ್ನು ನಿಮ್ಮ ಬಿಜೆಪಿ ಫ್ರೆಂಡ್ಸ್ ಎಷ್ಟರಮಟ್ಟಿಗೆ ಅಕ್ಸೆಪ್ಟ್ ಮಾಡುತ್ತಾರೆ ಎಂಬುದನ್ನು ನೋಡೋಣ. ಏಕೆಂದರೆ ನಿಮಗೂ ಸರ್ಕಾರ ನಡೆಸಬೇಕಲ್ಲವೆ? ಸರ್ಕಾರ ನಡೆಸಬೇಕೆಂದು ಹೇಳಿ ನೀವು ಆ ಬಿಲ್‌ನ್ನು ರೆಡಿ ಮಾಡಿ ಇಟ್ಟಿದ್ದೀರಲ್ಲಾ, ಅದನ್ನು ನಾವು ಟಿವಿ ಯಲ್ಲಿ ನೋಡಿದೆ. ಫಾರ್ಮರ್ ಪ್ರೈಮ್ ಮಿನಿಸ್ಟರ್‌ವರು ಹೇಳುತ್ತಾ ಇದ್ದರು. ಆ ಬಿಲ್ ಮೇಲೆ ಇಂತಿಂಥ ಕಂಟೆಂಟ್ಸ್ ಇದೆ. ಮಾನ್ಯ ರಾಮಜೊಯಿಸ್ ರವರಿಗೆ ನಾನು ಕನ್ಸಲ್ಟ್ ಮಾಡಿದ್ದೇನೆ. ಆ ಮಾತುಗಳನ್ನೂ ಕೂಡ ಅವರು ಹೇಳಿದ್ದಾರೆ. ಅಂದರೆ ಎಲ್ಲಾ ಇದೆ, ಬಿಜೆಪಿ ಯವರು ಒಪ್ಪುತ್ತಿಲ್ಲ. ಅದಕ್ಕಾಗಿ ಅದನ್ನು ಅವರು ಹಿಡಿದಿಟ್ಟುಕೊಂಡಿದ್ದಾರೆ. ಈಗ ಅದನ್ನು ಚರ್ಚೆಗೆ ಬಿಟ್ಟು ಬಿಟ್ಟಿದ್ದಾರೆ. ಈ ಚರ್ಚೆಯಿಂದ ಏನು ಹೊರಹೊಮ್ಮುತ್ತದೋ, ಅದರ ಆಧಾರದ ಮೇಲೆ ಬಹುಶಃ ಬಿಲ್ ತರಬೇಕು ಎನ್ನುವ ಯೋಚನೆ ಚಿಂತನೆ ಅವರದ್ದು ಇರಬೇಕು. ಇಲ್ಲವೆಂದರೆ ಆ ಮಾತು 10 ದಿವಸಗಳ ಹಿಂದೆ ನಾನು ಟಿವಿಯಲ್ಲಿ ಕೇಳಿದೆ ಅದು ಬರುತ್ತದೆ ಎಂದು ಅದನ್ನು ನಾನು ಅಥೆಂಟಿಕ್ಕಾಗಿ ತಿಳಿದು ಕೊಳ್ಳಬೇಕಾಗುತ್ತದೆ. ರಾಷ್ಟ್ರೀಯ ಪಕ್ಷದ ಅಧ್ಯಕ್ಷರು ಈ ಮಾತು ಹೇಳಿದಾಗ ಅದು ಅಥೆಂಟಿಕ್ ಮತ್ತು ರಾಜ್ಯ ಪಕ್ಷದ ಅಧ್ಯಕ್ಷರು ಅದರ ಜಾಹೀರಾತು ಕೊಟ್ಟಾಗ, ಇದೇ ಅವರ ಅನಿಸಿಕೆ ಎನ್ನುವುದು ಕೂಡ ಸ್ಪಷ್ಟವಾಗುತ್ತದೆ. ಇದಕ್ಕೆ ಏನೂ ಬೇರೆ ಕಡೆ ನಾವು ಹುಡುಕಬೇಕಾಗಿಲ್ಲ. ಬೇರೆ ಇನ್‌ವೆಸ್ಟಿಗೇಶನ್ ಮಾಡಬೇಕಾಗಿಲ್ಲ. ಬೇರೆ ಅರ್ಥ ಕೊಡಬೇಕಾಗಿಲ್ಲ. ಅದಕ್ಕಾಗಿ ತಾನು ಸ್ಪಷ್ಟವಾಗಿ ತನ್ನ ಜನರ ಹಿತದೃಷ್ಟಿಯಿಂದ ತರುತ್ತಿರೋ ಅಥವಾ ನಿಮ್ಮ ಅನಿಸಿಕೆ ಪ್ರಕಾರ ತರುತ್ತೀರೋ, ಯಾವ ರೀತಿಯಿಂದ ತರುತ್ತೀರಿ ಆ ಬಿಲ್‌ನ್ನು ಮೊದಲು ಇಂಟ್ರಡ್ಯೂಸ್ ಮಾಡಿ ಲೆಟ್ ಅಸ್ ಸಿ, ಒಳ್ಳೆಯದಿತ್ತು ಅಂದರೆ ನಾವು ಸಪೋರ್ಟ್ ಮಾಡುತ್ತೇವೆ. ಅದರೊಳಗೆ ಏನಾದರೂ ಹುಳುಕಿತ್ತು, ತಪ್ಪು ಇತ್ತು ಎಂದರೆ, ಅದರ ಬಗ್ಗೆ ಹೌಸ್‌ನಲ್ಲಿ ಚರ್ಚೆಯಾಗಿ ಒಮ್ಮತಕ್ಕೆ ಬಂದ ಮೇಲೆ ನೋಡೋಣ. ಇಷ್ಟು ಮಾತನ್ನು ಹೇಳಿ, ತಾವು ವಿಶೇಷವಾದ ಸಮಯವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಮತ್ತು ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಬಿಎಂಐಸಿ ಕುರಿತಾಗಿ ಬಹಳ ದೊಡ್ಡ ಚರ್ಚೆಯನ್ನು ಸದನದ ಎರಡೂ ಕಡೆ ಇರತಕ್ಕಂಥ ಸದಸ್ಯರು ಭಾಗವಹಿಸಿ ಅದರ ಮೇಲೆ ಬೆಳಕನ್ನು ಚೆಲ್ಲಿದ್ದಾರೆ.

ಈ ಸಂದರ್ಭದಲ್ಲಿ ಅಬ್ರಾಹಂ ಲಿಂಕನ್‌ರವರು ಅವರು ವಕಾಲತ್ತು ಮಾಡುತ್ತಿದ್ದಂಥ ಸಂದರ್ಭದಲ್ಲಿ ಒಂದು ರೈತನ ಕಥೆಯನ್ನು ಹೇಳುತ್ತಾರೆ. ಎಲ್ಲರೂ ರೈತರ ಪರವಾಗಿ ಮಾತನಾಡುತ್ತೇವೆ. ಆ ರೈತ ತನ್ನ ಕುದುರೆಯ ಗಾಡಿಯ ಮೇಲೆ ಹೋಗುವಾಗ ದಾರಿ ತಪ್ಪಿ ಘೋರಾರಣ್ಯದ ಒಳಗೆ ಹೋದ, ಆ ಸಂದರ್ಭದಲ್ಲಿ ಅವನಿಗೆ ದಾರಿ ಏನೂ ಸಿಗಲಿಲ್ಲ. ಗುಡುಗು, ಮಿಂಚು ಮತ್ತು ಮಳೆ ಬೀಳುತ್ತಾ ಇತ್ತು. ಆ ಮಿಂಚಿನಲ್ಲಿ ಬಿದ್ದ ಬೆಳಗಿನಿಂದ ಅವನು ದಾರಿ ಹುಡುಕುವಂಥ ಪ್ರಯತ್ನವನ್ನು ಮಾಡುತ್ತಿದ್ದ, ಹಾಗೆ ದಾರಿ ಹುಡುಕುವಂಥಪ್ರಯತ್ನದಲ್ಲಿ ಕೊನೆಗೆ ವಿಪರೀತ ಮಳೆ ಬಂದು ದಾರಿ ಸಿಗದಂಥ ಪರಿಸ್ಥಿತಿಯಾದಾಗ ಆ ರೈತ ಒಂದು ಪ್ರಾರ್ಥನೆಯನ್ನು ಮಾಡುತ್ತಾ ನಂತೆ,: "Oh Lord, if it is all the same to you, give us a little more light and little less noise". ಎಂದು ನಾವು ಈಗ ಏನು ಮಾಡುತ್ತಿದ್ದೇವೆ ವಿಪರೀತ ಗದ್ದಲವನ್ನು ಮಾಡುತ್ತಿದ್ದೇವೆ. ಮಾನ್ಯ ಖರ್ಗೆಯವರು ಈಗಾಗಲೇ ಹೇಳಿದಂತೆ ಅದರ ಉದ್ದೇಶ ಏನು ಎನ್ನುವುದೂ ಕೂಡ ಗೊತ್ತಾಗುತ್ತಿಲ್ಲ. ಯಾವ್ಯಾವ ರೀತಿಯಲ್ಲಿ ಒಬ್ಬೊಬ್ಬರು ತಮ್ಮದೇ ಆದ ರೀತಿಯಿಂದ ಅವರ ದೃಷ್ಟಿಕೋನದಿಂದ ಅಳತೆಯನ್ನು ಮಾಡತಕ್ಕಂಥ ಮಾನದಂಡವನ್ನು ಉಪಯೋಗಿಸತಕ್ಕಂಥ ಪ್ರಯತ್ನವನ್ನು ಮಾಡುತ್ತಿದ್ದೇವೆ. ಈ ಒಂದು ದೊಡ್ಡ ಗದ್ದಲದಲ್ಲಿ ಪರ ವಿರೋಧ ಆಪಾದನೆ ಮತ್ತೊಂದು ಇವುಗಳೆಲ್ಲದರ ಮೂಲಕ ಆಗಿರತಕ್ಕಂಥದ್ದು ಎಂದರೆ ನಮಗೆ ಬೆಳಕು ಚೆಲ್ಲುವುದಕ್ಕೆ ಸಾಧ್ಯವಾಗುತ್ತಿಲ್ಲ. ಆ ಗುಡುಗು ಸಿಡಿಲು ಆರ್ಭಟದಲ್ಲಿ ಬೆಳಕು ಬಿದ್ದರೂ ಕೂಡ ನಾವು ದಾರಿಯನ್ನು ಕಂಡುಕೊಳ್ಳಲಿಕ್ಕೆ ಸಾಧ್ಯವಾಗಲಿಲ್ಲ ಎನ್ನತಕ್ಕಂಥ ರೈತನ ಕಥೆಯನ್ನು ಅಬ್ರಾಹಂ ಲಿಂಕ್‌ನ್‌ರವರು ಹೇಳುತ್ತಾರೆ. ನಾವು ಇವತ್ತು ಪರಸ್ಪರ ರಾಜಕಾರಣಿಗಳು ಆದಂಥವರು ನಾವೇ ನಮ್ಮ ದ್ವೇಷಿಗಳು ಎಂದು ಭಾವಿಸಿಕೊಂಡಿದ್ದೇವೆ. ನಾವೆಲ್ಲರೂ ಆಡಳಿತ ಮಾಡುವಂತಹ ಸಂದರ್ಭದಲ್ಲಿ ಅದು ನೇರವಾಗಿಯೋ ಅಥವಾ ಪರೋಕ್ಷವಾಗಿಯೋ ಜವಾಬ್ದಾರರು ಎನ್ನುವುದು ಇದೆ. ಆ ಜವಾಬ್ದಾರಿಯ ಪರಿಕಲ್ಪನೆ ಎಲ್ಲರೂ ಕೂಡ ಆ ಮಟ್ಟದ ಒಂದು ಪ್ರಭುದ್ದತೆಯನ್ನು ಸಾಧಿಸಿಕೊಂಡು ತಮ್ಮ ಕಾರ್ಯ ಕರ್ತವ್ಯಗಳನ್ನು ಮಾಡಿದಾಗ ನಾವು ಯಾರೂ ಕೂಡ ಅದರಲ್ಲಿ ಆಪಾದನೆಗಳಿಗೆ ಒಳಗಾಗುವುದಿಲ್ಲ. ಆದರೆ ನಮ್ಮಲ್ಲಿ ವೈಯಕ್ತಿಕವಾಗಿ ವ್ಯಕ್ತಿಗತವಾಗಿ ಅಧಿಕಾರವಿದ್ದಾಗ ಅದನ್ನು ಸಾಮೂಹಿಕವಾದಂತಹ ರೀತಿಯಲ್ಲಿ ತೋರಿಸಿಕೊಳ್ಳದೆ ಇದ್ದಾಗ ಎಲ್ಲರೂ ಕೂಡ ಪರೋಕ್ಷವಾಗಿಯೂ ಪ್ರತ್ಯಕ್ಷವಾಗಿಯೋ ಅದಕ್ಕೆ ಭಾಗಿದಾರರಾಗಿದ್ದೇವೆ; ಅದನ್ನು ಅನೇಕ ಸದಸ್ಯರುಗಳು ಪ್ರಶ್ನೆ ಮಾಡಿದ್ದಾರೆ. ಅದರಲ್ಲಿ ನನ್ನಂತವರಂತೂ ಈ ಸರ್ಕಾರದಲ್ಲಿ ಪಾಲ್ಗೊಂಡಿರತಕ್ಕಂತವನಾಗಿರುವುದರಿಂದ

ಆ ಜವಾಬ್ದಾರಿಯನ್ನು ನಾವು ಹೊರಲೇಬೇಕಾಗುತ್ತದೆ. ಆ ಜವಾಬ್ದಾರಿಯನ್ನು ಹೊತ್ತುಕೊಂಡಿರುವಂತಹ ಸಂದರ್ಭದಲ್ಲಿಯೂ ಕೂಡ ಕೆಲವು ವಿಷಯಗಳನ್ನು ಅನಿವಾರ್ಯವಾಗಿ ಸತ್ಯಸಂಗತಿಗಳ ಮೇಲೆ ಬೆಳಕನ್ನು ಚೆಲ್ಲಬೇಕಾದಂತಹ ಅಗತ್ಯತೆ ಇದೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಬಹಳ ಉತ್ತಮವಾದಂತಹ ಸಲಹೆಗಳನ್ನು ಕೊಟ್ಟರು. ಮತ್ತೆ ಅವರು ನಿರ್ಭಾವದಿಂದ ಮಾತನಾಡಿದರು, ಅದನ್ನು ನಾವು ಮೆಚ್ಚಬೇಕಾಗುತ್ತದೆ. ಬಹಳ ಜನ ಸದಸ್ಯರು ನಿರ್ಭಾವದಿಂದ ಮಾತನಾಡದೆ ಯಾವಾಗಲೂ ಕೂಡ ಯಾವುದಾದರೂ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡುವಾಗ ಉತ್ತರಗಳನ್ನು ಏತಕ್ಕೆ ಇಟ್ಟುಕೊಳ್ಳುತ್ತೇವೆಂದರೆ, ಅವನಿಗೆ ಅಲ್ಲಿ ಆ ಭಾವುಕತೆ ಇರುವುದಿಲ್ಲ. ಅವನು ತನ್ನ ಕರ್ತವ್ಯವಾಗಿ ಕಾನೂನಿಗೆ ಅನುಗುಣವಾಗಿರುವಂತಹ ರೀತಿಯಲ್ಲಿ ತನ್ನ ಆ ಒಂದು ಮೊಕದ್ದಮ್ಮೆಯನ್ನು ಪ್ರತಿಪಾದಿಸುತ್ತಾನೆ. ಹಾಗೆ ಇರಬೇಕೆನ್ನುವಂತಹ ಕಾರಣಕ್ಕಾಗಿಯೇ ಕಕ್ಷಿದಾರರು ನೇರವಾಗಿ ನೀವು ಕಾನೂನಿಗೆ ಅವಕಾಶವಿದ್ದರೂ ಕೂಡ ಆತ ವಕಾಲತ್ತು ಮಾಡುವುದರ ಬದಲು ಬೇರೆಯವನಿಗೆ ಕೊಡಿ ಎಂದು ಹೇಳುತ್ತೇವೆ. ಏಕೆಂದರೆ ಆ ನಿರ್ಭಾವತೆ ಬಹಳ ಅಗತ್ಯವಾಗಿರುತ್ತದೆ. ತಾವು ಇಲ್ಲಿ ಕುಳಿತಿದ್ದೀರಿ, ತಾವೂ ಕೂಡ ನಿಮ್ಮ ಮೂಲಕವಾಗಿ ನಾವು ಜಗತ್ತಿಗೆ ನಾವು ಪರಿಚಯ ಮಾಡಿಕೊಡಬೇಕಾಗುತ್ತದೆ. ಆ ಕಾರಣಕ್ಕಾಗಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದರು. ಜನಗಳಿಗೆ ಇದು ಅರ್ಥವಾಗಲಿ ಎನ್ನುವ ಕಾರಣಕ್ಕಾಗಿಯೇ ಈ ಜಾಹೀರಾತನ್ನು ಕೊಟ್ಟಿರಬಹುದು. ಇದು ಚರ್ಚೆಗೆ ಬಂದಿರಬಹುದು, ಒಟ್ಟಿನಾರ್ಥ ಜನತೆಯು ಕನಿಷ್ಠ ಪಕ್ಷ ಸಾರ್ವಭೌಮರು, ಸದನದಲ್ಲಿ ನಡೆಯತಕ್ಕಂತಹ ಎಲ್ಲಾ ಕಾರ್ಯಕಲಾಪಗಳ ಬಗ್ಗೆಯೂ ತಮ್ಮದೇ ಆದಂತಹ ನಿರ್ಧಾರಕ್ಕೆ ಬರುವುದರ ಬಗ್ಗೆ ಅದು ಯಾವ ಕಾಲದಲ್ಲಿ ಅವರು ನಿರ್ಧಾರವನ್ನು ತೆಗೆದುಕೊಳ್ಳುತ್ತಾರೋ ಅದನ್ನು ಚುನಾವಣೆಯ ಕಾಲದಲ್ಲಿ ತೆಗೆದುಕೊಳ್ಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಲ್ಲಿ ನಿಮ್ಮ ಮಾತೂ ಕೂಡ ನಡೆಯುವುದಿಲ್ಲ. ಅದಕ್ಕೆ ಸಂಪೂರ್ಣವಾಗಿ ಸರ್ಕಾರದ ಪರವಾಗಿ ನೀವೇ ಉತ್ತರವನ್ನು ಕೊಡುತ್ತಿದ್ದೀರಿ, ಮತ್ತೆ ಅವರಿಗೆ ಕೊಡುತ್ತೀರಿ. ಸಿ.ಎಂ.ರವರು ಕೊಡುತ್ತಾರೆ. ಪಾಪ ಅವರು ನಿಮಗೆ ಉತ್ತರವನ್ನು ಹೇಳುವುದಕ್ಕೆ ಹೆಚ್ಚಿ ಸಿಕ್ಕಿ ಹಾಕ್ಕಿಸಿ ಬಿಟ್ಟು ಆಮೇಲೆ ಅವರು ಹೋಗಬಹುದು.

ಶ್ರೀ ಎಂ.ಪಿ. ಪ್ರಕಾಶ್ : ನಾನು ಸರ್ಕಾರದಲ್ಲಿ ಒಬ್ಬ ಮಂತ್ರಿಯಾಗಿದ್ದರೂ ಕೂಡ ನಾನು ನಿಮ್ಮಂತೆ ಈ ಚರ್ಚೆಯಲ್ಲಿ ಪಾಲ್ಗೊಂಡಿದವನಾಗಿದ್ದೇನೆ. ಇಡೀ ಸರ್ಕಾರದ ಅಭಿಪ್ರಾಯವನ್ನು ಮುಂದೆ ತೆಗೆದುಕೊಳ್ಳುತ್ತೇನೆ. ಆ ಕಾರಣಕ್ಕಾಗಿಯೇ ಈ

ವಿಷಯವನ್ನು ಈ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಬಹಳ ನಿರ್ಭಾವುಕತೆಯಿಂದ ತಾವು ಮಾಡಿದ್ದೀರಿ, ತಮಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆದರೆ ಇದರಲ್ಲಿ ಪ್ರಜಾಪ್ರಭುತ್ವದಲ್ಲಿ ನಡೆದುಕೊಂಡು ಬಂದ ದಾರಿಯನ್ನು ನಾವೆಲ್ಲರೂ ನೋಡಿದಾಗ ತಮಗೆ ಆ ಬಗ್ಗೆ ಗೊತ್ತಾಗಬಹುದು. ಅನೇಕ ಬಾರಿಯೂ ಕೂಡ ಒಂದು ಸಮ್ಮಿಶ್ರ ಪಕ್ಷವೇ ಬೇರೆಯಾಗಿರುತ್ತದೆ. ಸರ್ಕಾರವೇ ಬೇರೆಯಾಗಿರುತ್ತದೆ. ಒಂದೇ ಪಕ್ಷದ ಸರ್ಕಾರದ ವಿದ್ದಾಗಲೂ ಕೂಡ ಪಕ್ಷದ ಪ್ರಣಾಳಿಕೆಯನ್ನು ಸರ್ಕಾರದಲ್ಲಿ ಕೆಲವು ಸ್ಥಾನಗಳಿಗಾಗಿ ಅಲ್ಲಿ ಹಿಂದೆ ಸರಿಯುವಂತಹ ಕೆಲಸವನ್ನು ಸಹ ನಾವು ಮಾಡಲೇಬೇಕಾಗುತ್ತದೆ. ಅದರಲ್ಲಿ ಸಮ್ಮಿಶ್ರ ಸರ್ಕಾರವು ನಡೆಸಿಕೊಂಡಂತಹ ಸಂದರ್ಭದಲ್ಲಿ ಪಕ್ಷ ತನ್ನ ಅಭಿಪ್ರಾಯವನ್ನು ಹೇಳಬಹುದು. ಆದರೆ ಪಕ್ಷ ಹೇಳಿದ್ದೆಲ್ಲವೂ ಕೂಡ ಅಲ್ಲಿ ಆಗಿರುತ್ತದೆ ಎಂಬ ಪ್ರಶ್ನೆ ಇಲ್ಲ. ಕೆಲವು ಸೀಮಿತ ಉದ್ದೇಶಗಳಿಗಾಗಿ ಪಕ್ಷಗಳು ಧ್ವನಿಗೂಡಿಸಿ ಈಗ ಸಮ್ಮಿಶ್ರ ಸರ್ಕಾರವನ್ನು ನಡೆಸುವಂತಹ ಒಂದು ಪರಿಪಾಠ ಇತ್ತೀಚಿನ ವಿದ್ಯಾಮಾನಗಳಲ್ಲಿ ಬಂದಿದೆ. ಇತ್ತಿಚಿನ ದಿನಮಾನಗಳಲ್ಲಿ ಬಂದಿರುವಂತಹ ಕಾರಣ ನಮ್ಮ ಮತದಾರ ಯಾವ ಪಕ್ಷದ ಬಗ್ಗೆಯೂ ಕೂಡ ಸಂಪೂರ್ಣವಾಗಿ ಬೆಂಬಲಿಸಬೇಕು ಎಂಬ ನಿರ್ಧಾರವನ್ನು ತೆಗೆದುಕೊಂಡಿಲ್ಲ. ಆ ಗಳಿಗೆ ಪ್ರಾಯಶಃ ಎಲ್ಲಾ ಪಕ್ಷಗಳ ಬಗ್ಗೆಯೂ ಕೂಡ ಭ್ರಮನಿರಸನವಾಗಿರಬಹುದು. ಆ ಭ್ರಮನಿರಸನದ ಕಾರಣಕ್ಕಾಗಿಯೇ ಆತ ಯಾರಿಗೂ ಕೂಡ ಬಹುಮತವನ್ನು ಕೊಡಲಾರದಂತಹ ರೀತಿಯಲ್ಲಿ ಸಂದಿಗ್ಧತೆಯ ವಾತಾವರಣವನ್ನು ಸೃಷ್ಟಿ ಮಾಡಿದಾಗ ನಾವು ಸಮ್ಮಿಶ್ರ ಸರ್ಕಾರದ ಒಂದು ಕೆಲಸವನ್ನು ಇವತ್ತು ಪ್ರಾರಂಭಮಾಡಿದ್ದೇವೆ. ಅದು ಕೇಂದ್ರದಲ್ಲಿಯೂ ಕೂಡ ಆಗಿದೆ. ರಾಜ್ಯದಲ್ಲಿಯೂ ಕೂಡ ಆಗಿದೆ. ಕೇಂದ್ರದಲ್ಲಿಯೂ ಅದಂತಹ ಸಂದರ್ಭದಲ್ಲಿ ಅನೇಕ ಈ ರೀತಿಯಾದಂತಹ ಚರ್ಚೆಗಳು ಆಗಿವೆ. ನೀವು ಈ ರೀತಿಯಾಗಿ ಸಮ್ಮಿಶ್ರ ಸರ್ಕಾರವನ್ನು ರಚನೆ ಮಾಡಿದರೆ 22–23 ಪಕ್ಷಗಳು 18 ಪಕ್ಷಗಳು ಕೆಲಸವನ್ನು ಮಾಡಿದರೆ ಕೇಂದ್ರದ ಸಂಪೂರ್ಣವಾದಂತಹ ಆಡಳಿತವು ಕುಸಿದು ಬೀಳುತ್ತದೆ. ಬೇರೆಯವರೂ ಕೂಡ ನಮ್ಮ ಮೇಲೆ ಅಕ್ರಮಣವನ್ನು ಮಾಡಬಹುದು ಎನ್ನುವಂತಹ ರೀತಿಯಲ್ಲಿ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದರು. ಆದರೆ ತಮಗೆ ಉದಾಹರಣೆಯನ್ನು ಹೇಳುತ್ತೇನೆ. ನಾನು ಯಾವುದೇ ಕಾರಣಕ್ಕಾಗಿ ತಮ್ಮ ಪಕ್ಷದ ಬಗ್ಗೆ ಕೂಡ ಮಾತನಾಡಿದೆ ಎಂದು ಅನ್ಯತಾ ಭಾವಿಸುವುದಿಲ್ಲವೆನ್ನುವ ಕಾರಣಕ್ಕಾಗಿ ಹೇಳುತ್ತೇನೆ. ಒಂದೇ ಪಕ್ಷ ಇದ್ದು ಅವರ ತಾತನ ಕಾಲಕ್ಕಿಂತಲೂ ಹೆಚ್ಚು ಬಹುಮತವನ್ನು 414 ಕ್ಕಿಂತಲೂ ಹೆಚ್ಚು ಸದಸ್ಯ ಬಲವನ್ನು ರಾಜೀವಗಾಂಧಿಯವರು ಲೋಕಸಭೆಯಲ್ಲಿ ತೆಗೆದುಕೊಂಡಿದ್ದಂಥ ಸಂದರ್ಭದಲ್ಲಿ ಶಹಬಾನು ಎನ್ನುವವರು ಸಿವಿಲ್ ಪ್ರೊಸೀಜರ್

ಕೋಡ್ ಕೆಳಗೆ ಆ ಕೇಸ್‌ನಲ್ಲಿ ಜೀವನಾಂಶವನ್ನು ಕೊಡಬೇಕೆಂದು ನಿರ್ಧಾರವಾಗಿ ಚರ್ಚೆಯಾದ ನಂತರ ಸುಪ್ರೀಂಕೋರ್ಟಿನ ನಿರ್ಣಯವಾದ ಮೇಲೆ ಅಂತಹ ಒಂದು ಕಾನೂನನ್ನು ತರಲಿಕ್ಕೆ ಲೋಕಸಭೆಯಲ್ಲಿ ಆ ಕಾನೂನನ್ನು ಮಂಡಿಸಿದರು. ಅದಕ್ಕೆ ಚರ್ಚೆ ಕೂಡ ಆದವು. ಆದರೆ ಅದಕ್ಕೆ ವ್ಯತಿರಿಕ್ತವಾಗಿರತಕ್ಕಂಥ ಒಂದು ವಾತಾವರಣ ಸೃಷ್ಟಿಯಾದಾಗ ನಮ್ಮ ಪಕ್ಷದ ಬೆಂಬಲಿತರಲ್ಲಿಯೇ ಅನುಮಾನಗಳು ಸೃಷ್ಟಿಯಾಗುತ್ತವೆ ಎನ್ನುವ ಕಾರಣ ಬಂದಾಗ ಆ ಮಸೂದೆಯನ್ನು ಮಂಡಿಸಿರತಕ್ಕಂಥ ಆ ಮಂತ್ರಿಯ ಬಗ್ಗೆಯೂ ಕೂಡ ಯೋಚನೆ ಮಾಡದೆ ಏಕಪಕ್ಷೀಯವಾಗಿ ವಾಪಸ್ಸು ತೆಗೆದುಕೊಂಡಿದ್ದಂಥದ್ದೂ ಕೂಡ ಇತ್ತು. ಅಂದರೆ ಇದರ ಅರ್ಥ ನನ್ನನ್ನು ನಾನು ಸಮರ್ಥಿಸಿಕೊಳ್ಳಲು ಉದಾಹರಣೆ ಹೇಳುತ್ತಿದ್ದೇನೆಂದು ಅರ್ಥವಲ್ಲ. ಒಂದೇ ಪಕ್ಷದ ಸರ್ಕಾರ ಇದ್ದಾಗಲೂ ಕೂಡ ಒಮ್ಮೊಮ್ಮೆ ಅನಿವಾರ್ಯವಾಗಿರತಕ್ಕಂಥ ಸ್ಥಿತಿಯಲ್ಲಿ ಅತ್ಯಂತ ಪ್ರಭಾವಿ ರಾಜಕಾರಣಿಯಾದವರೂ ಕೂಡ ವಾಪಸ್ಸು ತೆಗೆದುಕೊಳ್ಳಬೇಕಾದ ಅನಿವಾರ್ಯತೆ ಸೃಷ್ಟಿಯಾಗುತ್ತವೆ. ಪಕ್ಷವೇ ಬೇರೆ ಸರ್ಕಾರವೇ ಬೇರೆ ಆಗಿ ಕೆಲವು ಕೆಲಸವನ್ನು ಮಾಡಬೇಕಾಗುತ್ತದೆ. ಕೆಲವು ಮೂಲಭೂತವಾದ ಉದ್ದೇಶಗಳು ಏನು ಇರುತ್ತವೆ, ಅವುಗಳನ್ನು ಸಾಧನೆ ಮಾಡುವಾಗ ಎರಡು ಹೆಜ್ಜೆ ಮುಂದೆ ಹೋಗಿ ಒಂದು ಹೆಜ್ಜೆ ಹಿಂದೆ ಸರಿಯತಕ್ಕಂಥದ್ದು ಸಮ್ಮಿಶ್ರ ಸರ್ಕಾರದ ಅಥವಾ ಯಾವುದೇ ಸರ್ಕಾರದ ಒಂದು ಉದ್ದೇಶವು ಕೂಡ ಆಗಿರುತ್ತದೆ. ಅಂದರೆ ಅದರ ಅರ್ಥ ಇಷ್ಟೆ, ಎರಡು ಹೆಜ್ಜೆ ಮುಂದೆ ಹೋಗಿದ್ದೇವೆ, ಒಂದು ಹೆಜ್ಜೆ ಹಿಂದೆ ಸರಿದಿದ್ದೇವೆ. ಒಂದು ಹೆಜ್ಜೆ ಹಿಂದೆ ಸರಿದಿದ್ದರೂ ಕೂಡ ಒಂದು ಹೆಜ್ಜೆ ಮುಂದೆ ಹೋಗಿದ್ದೇವೆ ಎನ್ನುವಂಥದ್ದು ನಮಗೆ ಮುಖ್ಯವಾಗಿರತಕ್ಕಂಥ ಪ್ರಸಂಗವಾಗಿರುತ್ತದೆ. ಸಾವಿರ ಮೈಲಿಗಳನ್ನು ಹೋಗಬೇಕಾಗಿದ್ದರೂ ಕೂಡ ಮನೆಯಿಂದ ಒಂದು ಹೆಜ್ಜೆಯನ್ನು ಇಡಲೇಬೇಕಾಗುತ್ತದೆ. ಆದ್ದರಿಂದ ಈ ಸಮ್ಮಿಶ್ರ ಸರ್ಕಾರದಲ್ಲಿ, ಈಗ ಎನ್.ಡಿ.ಎ ಸರ್ಕಾರದ ಸಂದರ್ಭದಲ್ಲಿ ಹಾಗಾಗಿತ್ತು, ಅದಕ್ಕಾಗಿಯೇ ಒಂದು ಸಮನ್ವಯ ಸಮಿತಿಯಿತು, ಅದಕ್ಕಾಗಿಯೇ ಒಬ್ಬರು ನಿಯೋಜಕರೂ ಕೂಡ ಇದ್ದರು. ಅವರದೇ ಆಗಿರತಕ್ಕಂಥ ಯು.ಪಿ.ಎ. ಸರ್ಕಾರದಲ್ಲಿಯಾಗಲಿ, ಎನ್.ಡಿ.ಎ. ಸರ್ಕಾರದಲ್ಲಿಯಾಗಲಿ ಇಲ್ಲಿರತಕ್ಕಂಥ ಕರ್ನಾಟಕ ಅಭಿವೃದ್ಧಿ ರಂಗವನ್ನು ಮಾಡಿಕೊಂಡಿರತಕ್ಕಂಥ ಸಂದರ್ಭದಲ್ಲಿಯೂ ಕೂಡ ಒಪ್ಪಿತ ವಿಚಾರಗಳಲ್ಲದೆ ಇರತಕ್ಕಂಥ ಸಂದರ್ಭಗಳಲ್ಲಿ ಒಂದು ಬಗೆಯಾದ ಒಪ್ಪಂದಕ್ಕೆ ನಾವೆಲ್ಲರೂ ಕಲೆತು ಒಂದು ಸಾರ್ವತ್ರಿಕ ಒಮ್ಮತಕ್ಕೆ ಬರತಕ್ಕಂಥ ಕೆಲಸವನ್ನು ನಾವು ಮಾಡಲೇಬೇಕಾಗುತ್ತದೆ. ಆ ಕಾರಣಕ್ಕಾಗಿಯೇ ತಾವು ಹೇಳಿದಂತೆ ಕೆಲವು ವಿಷಯಗಳನ್ನು ನಾವು ಪಕ್ಷದ ಅಧ್ಯಕ್ಷರಾಗಿ ಜಾಹೀರಾತನ್ನು ಕೊಟ್ಟಿರತಕ್ಕಂಥದ್ದು ನಿಜ. ಆ

ಜಾಹಿರಾತಿನ ಮೂಲಕ ಜನತೆಗೆ ನಮ್ಮ ಪಕ್ಷದ ಪ್ರಣಾಳಿಕೆ, ನಮ್ಮ ಪಕ್ಷದ ಉದ್ದೇಶ, ನಮ್ಮ ಪಕ್ಷ ಏನನ್ನು ನಿಮ್ಮಿಂದ ಬಯಸುತ್ತದೆ ಎಂಬುದನ್ನು ನಾವು ಹೇಳಿದ್ದೇವೆ. ಅ ಸರ್ಕಾರ ನಡೆಸತಕ್ಕಂಥವರು ಅದರ ಬಗ್ಗೆ ಯೋಚನೆ ಮಾಡುತ್ತಾರೆ. ಅದನ್ನು ಯಾವರೀತಿಯಾಗಿ ತೆಗೆದುಕೊಂಡು ಹೋಗಬೇಕೆಂಬುದನ್ನೂ ಕೂಡ ನಾವು ಅದನ್ನು strategy ಎನ್ನುತ್ತೇವೆ. ಯಾವುದಕ್ಕಾದರೂ ಕೂಡ ಸ್ಟ್ರಗಲ್ ಅಂಡ್ ಸ್ಟ್ರಾಟಜಿ ಎನ್ನುವಂಥ ಮಾತಿದೆ. ಯಾವುದೇ ಹೋರಾಟಕ್ಕೆ ಅದು ನಾವು ಮತಪೆಟ್ಟಿಗೆಗಳ ಮೂಲಕ ಗಳಿಸಿದ ಅಧಿಕಾರವಾಗಿರಬಹುದು. ಅಥವಾ ಬಂದೂಕಿನ ಮೂಲಕ ಗಳಿಸಿಕೊಂಡಿರತಕ್ಕಂಥ ಅಧಿಕಾರವಾಗಿರಬಹುದು, ಸ್ಟ್ರಾಟಜಿ–ಸ್ಟ್ರಗಲ್ ಎಂದರೆ A struggle and strategy ಒಂದು ಕಡೆಗೆ ಹೋರಾಟವನ್ನು ಮಾಡಬೇಕು, ಹೋರಾಟದ ಗರ್ಭದಲ್ಲಿ ಸಂಘಟನೆಯನ್ನು ಇಟ್ಟುಕೊಳ್ಳಬೇಕು, ಸಂಘಟನೆಯ ಗರ್ಭದಲ್ಲಿ ಹೋರಾಟವನ್ನು ಇಟ್ಟುಕೊಳ್ಳಬೇಕು. ಹೋರಾಟ ಮತ್ತು ಸಂಘಟನೆಯ ನಡುವೆ ಚತುರತೆಯನ್ನೂ ಸಹ ಇಟ್ಟುಕೊಳ್ಳಬೇಕಾಗುತ್ತದೆ. ಅದನ್ನು ನಾವು ಕನ್ನಿಂಗ್‌ನೆಸ್ ಎಂದು ಭಾವಿಸಬಾರದು ಅಥವಾ ಆಯಾಯ ಸಂದರ್ಭಕ್ಕೆ ಅನುಗುಣವಾಗಿ ನಮ್ಮ ಸಿದ್ಧಾಂತವನ್ನು ತರಲಿಕ್ಕೆ ಏನಾಗುತ್ತದೆ. ಹಿಂದೆ ಕೂಡ ವಾಜಪೇಯಿಯವರು, ಅಡ್ವಾನಿಯವರು ಈ ವಿಷಯದಲ್ಲಿ ಬೇರೆ ಬೇರೆ ಸಮಸ್ಯೆಗಳನ್ನು ಎತ್ತಿದಂಥ ಸಂದರ್ಭದಲ್ಲಿ ನಮಗೆ ನೀವು ಸಂಪೂರ್ಣವಾದಂಥ ಬಹುಮತವನ್ನು ಕೊಡಿ, ಆಗ ನಮ್ಮ ಪ್ರಣಾಳಿಕೆಯನ್ನು ನಾವು ಜಾರಿಗೊಳಿಸುತ್ತೇವೆ. ನೀವು ಸಂಪೂರ್ಣವಾದಂಥ ಬಹುಮತವನ್ನು ನಮಗೆ ಕೊಟ್ಟಿಲ್ಲ, ಹಾಗಾಗಿ ಈ ನಮ್ಮ ಸಮ್ಮಿಶ್ರ ಸರ್ಕಾರದಲ್ಲಿ ಕನಿಷ್ಠ ಕಾರ್ಯಕ್ರಮಗಳ ಆಧಾರದಲ್ಲಿ ನಾವು ಬಂದಿದ್ದೇವೆ. ಆದ್ದರಿಂದ ಇಲ್ಲಿ ನಾವು ಮೊದಲು ಮೂಲಭೂತ ಸಮಸ್ಯೆಯನ್ನು ನಾವು ಬಗೆಹರಿಸುತ್ತೇವೆಂದು ಅವರು ಹೇಳಿದರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈಗ ನೀವು ಯಾವ ಉದ್ದೇಶದಿಂದ ಇದನ್ನು ಹೇಳಲಿಕ್ಕೆ ಹೊರಟಿದ್ದೀರಿ? ಅಂದರೆ ಬಿಲ್ ತರಲಿಕ್ಕಾಗುವುದಿಲ್ಲವೆನ್ನುವುದಕ್ಕೆ ನೀವು ಪೀಠಿಕೆ ಹಾಕುತ್ತಿದ್ದೀರಾ? ನೀವು ಒಂದು ನಿಮಿಷ ಸುಮ್ಮನೆ ಕುಳಿತುಕೊಂಡರೆ ಚೆನ್ನಾಗಿರುತ್ತದೆ. ಏಕೆಂದರೆ ನಿಮ್ಮ ರಾಗವನ್ನು ಕೇಳುತ್ತಿದ್ದರೆ ನೀವು ಬಿಲ್ ತರಲಿಕ್ಕಾಗುವುದಿಲ್ಲವೆಂಬುದಕ್ಕೆ ಪೀಠಿಕೆ ಹಾಕುತ್ತಿದ್ದೀರಿ ಎನ್ನಿಸುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಇದು ಯಾವ ರಾಗವೆಂಬುದೇ ಅರ್ಥವಾಗುತ್ತಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ನಾನು ಆಲಾಪನೆ ಮಾಡಿದ ಕೂಡಲೇ ರಾಗ ಇಂತಹದ್ದೇ ಎಂದು ಕಂಡುಹಿಡಿಯುತ್ತಿದ್ದೀರಿ. ಆ ಆಲಾಪನೆಯ ಹಿನ್ನಲೆಯಲ್ಲಿ ಮಿಶ್ರ ರಾಗಗಳನ್ನು ನಾವು ಹಾಡುತ್ತಿರುತ್ತೇವೆ. ನೀವು ಆ ರೀತಿ ಯೋಚನೆ ಮಾಡಬೇಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಆ ಮಿಶ್ರ ರಾಗದಲ್ಲಿಯೇ ಈ ರಾಗ ಬರುತ್ತಿದೆಯೆಂದು ನಾವು ಹೇಳುತ್ತಿದ್ದೇವೆ.

ಮಾನ್ಯ ಸದಸ್ಯರೊಬ್ಬರು : ನೀವು ಸಮ್ಮಿಶ್ರ ರಾಗದಲ್ಲಿಯೂ ತಾಳದ ಪಂಡಿತರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಸ್ವಲ್ಪ ಬಣ್ಣ ಬಯಲಾಯಿತು, ಏನೆಂದರೆ ಈಗ ಪ್ರಕಾಶ್‌ರವರು ಸೂಕ್ಷ್ಮವಾಗಿ ಹೇಳುತ್ತಾ ಹೇಳುತ್ತಾ ಎಲ್ಲಿಗೆ ಬಂದರು ಅಂದರೆ, ಈ ಸರ್ಕಾರವೇ ಬೇರೆ, ಪಕ್ಷವೇ ಬೇರೆ, ಈ ಸಮ್ಮಿಶ್ರ ಸರ್ಕಾರದಲ್ಲಿ ನಾವಿದ್ದೇವೆ. ಅದಕ್ಕೆ ಈ ಜಾಹೀರಾತನ್ನು ಕೊಟ್ಟಿದ್ದೇವೆ. ಅದರ ಮೂಲಕ ಜನಾಭಿಪ್ರಾಯವನ್ನು ತೆಗೆದುಕೊಳ್ಳುತ್ತಿದ್ದೇವೆ. ಆದರೆ ಬಿಲ್ಲು ಬರುತ್ತದೋ ಇಲ್ಲವೋ ನೋಡೋಣ ಎನ್ನತಕ್ಕಂಥದ್ದು ಅವರ ಅಭಿಪ್ರಾಯವಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಲ್ಲ ಬಿಲ್ಲು ಬರುವುದೇ ಇಲ್ಲವೆಂದೇ ಅವರು ರಾಗ ಎಳೆಯುತ್ತಿರುವುದು.

ಶ್ರೀ ವಾಟಾಳ್ ನಾಗರಾಜ್ : ಅದೇ ರಾಗವೇ ಅವರದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎರಡನೆಯದೇನಾಗಿದೆಯೆಂದರೆ, ಒಂದು ಬ್ಯಾಲೆಟ್‌ನಿಂದ ಬಂದಂಥ ಸರ್ಕಾರ, ಇನ್ನೊಂದು ಸರ್ಕಾರ ಬಂದೂಕಿನಿಂದ ಬರುವಂತಹದು ಎಂದರು, ಬಂದೂಕಿನಿಂದ ಬಂದ ಸರ್ಕಾರವೂ ಅಲ್ಲ, ಬ್ಯಾಲೆಟ್‌ನಿಂದ ಬಂದಂತಹ ಸರ್ಕಾರವು ಅಲ್ಲ, ಇದು ರೆಸಾರ್ಟ್‌ನಲ್ಲಿ ಉದ್ಭವಿಸಿದ ಸರ್ಕಾರ, ಇದು ಹೇಗೆ ಆಗುತ್ತದೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಪ್ರಕಾಶ್‌ರವರೇ, ಒಂದು ನಿಮಿಷ ಇಲ್ಲಿ ಕೇಳಿ, ನಾವು ಯಾವ ವಿಚಾರದ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಈ ಚರ್ಚೆಗೂ ನೀವು ಮಂಡಿಸುತ್ತಿರುವ ವಾದಕ್ಕೂ ಏನೂ ಸಂಬಂಧವಿಲ್ಲ. ಆದರೆ ನೀವು ಹಾಕುತ್ತಿರುವಂಥ ಪೀಠಿಕೆ ಬಿಲ್ ತರಲಿಕ್ಕೆ ಸಾಧ್ಯವಿಲ್ಲವೆನ್ನುವುದನ್ನು ಪರೋಕ್ಷವಾಗಿ ಹೇಳುತ್ತಿದ್ದೀರಿ. ಸಮ್ಮಿಶ್ರ ಸರ್ಕಾರದಲ್ಲಿ ಈ ತರಹದ್ದೆಲ್ಲಾ ಆಗುತ್ತದೆ, ತಂದಂಥ ಬಿಲ್ಲನ್ನು ವಾಪಸ್ಸು ತೆಗೆದುಕೊಳ್ಳುವಂಥ ಪರಿಸ್ಥಿತಿ ಬರುತ್ತದೆಂದು ನೀವು ಏತಕ್ಕೆ ಹೇಳಿದಿರಿ ಎಂದರೆ, ಮುಖ್ಯಮಂತ್ರಿಯವರು ಬಿಲ್ ತರುತ್ತೇವೆಂದು ಹೇಳಿಬಿಟ್ಟಿದ್ದಾರೆ, ಹಾಗಾಗಿ ಈಗ ಬಿಲ್ಲನ್ನು ತರದಿದ್ದರೆ ಸಮಸ್ಯೆಯಾಗುತ್ತದೆಂದು ಹೇಳಿ, ಮುಖ್ಯಮಂತ್ರಿಗಳು ಹಿಂದೆ ಹೇಳಿದ್ದಕ್ಕೆ

ಅದನ್ನು ನೀವು ಸಮರ್ಥನೆ ಮಾಡಿಕೊಳ್ಳಲಿಕ್ಕೆ ಹಿಂದೆ ಶಹಭಾನು ಪ್ರಕರಣವನ್ನು ಪ್ರಸ್ತಾಪ ಮಾಡುತ್ತಿದ್ದೀರಿ, ಬೇರೇನಿಲ್ಲ. ನೇರವಾಗಿ ಬಿಲ್ ತರಲಿಕ್ಕೆ ಹೇಳಿಬಿಡಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರು ಬಹಳ ಬುದ್ಧಿವಂತರಾಗಿರುವುದರಿಂದ ಮನಃಶಾಸ್ತ್ರವನ್ನೂ ಕೂಡ ಕಂಡುಹಿಡಿದಿದ್ದಾರೆ, ಪ್ರಾಯಶಃ ನನ್ನ ಮನಸ್ಸಿನಲ್ಲೇನಿದೆ ಎಂದು ತಿಳಿದುಕೊಳ್ಳುವಂಥ ಅವರ ಅಪರೋಕ್ಷ ಜ್ಞಾನಕ್ಕೆ ನಾನು ವಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ ಅವರು ಈಗ ಉದಾಹರಣೆಗೆ ಹೇಳುತ್ತೇನೆ. ಅದನ್ನು ಅವರು ತಪ್ಪಾಗಿ ಭಾವಿಸಬಾರದು. ನೋಡಿ ಇಂಥದ್ದನ್ನು ಮಾಡಿದರೆ ನಿಮಗೆ ನಾವು ಕೊಟ್ಟಿರುವಂಥ ಬೆಂಬಲವನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಎಡಪಂಥಿಯದವರೆಲ್ಲಾ ಹೇಳುತ್ತಿದ್ದಾರೆ. ಅದರ ಬಗ್ಗೆ ಯಚೂರಿಯವರು ಮಾತನಾಡುತ್ತಾರೆ, ಇನ್ನೊಂದು ಕಡೆ ಪ್ರಕಾಶ್ ಕರಾಟ್‌ರವರು ಹೇಳುತ್ತಾರೆ, ಅದೇ ರೀತಿಯಾಗಿ ಬುದ್ಧದೇವ ಭಟ್ಟಾಚಾರ್ಯರು ಒಂದು ರೀತಿಯಲ್ಲಿ ಮಾತನಾಡಿ ನಂತರ ಕೋಮುವಾದಿ ಶಕ್ತಿಗಳು ಈ ದೇಶದಲ್ಲಿ ಅಧಿಕಾರಕ್ಕೆ ಬರಬಾರದು ಎನ್ನುವಂಥ ಕಾರಣಕ್ಕಾಗಿಯೇ ನಾವು ಬೆಂಬಲವನ್ನು ಬೇಷರತ್ತಾಗಿ ಕೊಡುತ್ತೇವೆಂದು ಒಂದು ಕಡೆಯಲ್ಲಿ ಹೇಳುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಲ್ಲ, ನೀವು ಇಲ್ಲದ್ದನ್ನೆಲ್ಲಾ ಹುಡುಕಬೇಡಿ, ಯಚೂರಿಯವರು ಹೇಳಿಲ್ಲ, ಪ್ರಕಾಶ್‌ರವರು ಹೇಳಿಲ್ಲ, ಬುದ್ಧದೇವ ಭಟ್ಟಾಚಾರ್ಯರವರು ಹೇಳಿಲ್ಲ, ನಾವೇನು ಹೇಳಿದ್ದೇವೆಂದರೆ ಬೆಂಬಲ ಕೇಳುತ್ತಿರುವವರು we have an open mind ಎಂದು ಹೇಳಿದ್ದೇವೆ. ನೀವು ಅದನ್ನು ಯಾವುದಕ್ಕೂ ತಿರುಗಿಸಲಿಕ್ಕೆ ಹೋಗಬೇಡಿ.

ಶ್ರೀ ಎಂ.ಪಿ. ಪ್ರಕಾಶ್ : ಆಯಿತು, I am sorry, I stand corrected, ನಿಮ್ಮ ಮಾತೇ ಸರಿ. ನನ್ನ ಮಾತನ್ನು ನಾನು ವಾಪಸ್ಸು ತೆಗೆದುಕೊಳ್ಳುತ್ತೇನೆ, ಜನ ಅದರ ಬಗ್ಗೆ ನಿರ್ಧಾರ ಮಾಡುತ್ತಾರೆ, ಆದ್ದರಿಂದ ನಿಮ್ಮ ವ್ಯಾಖ್ಯಾನವೂ ಬೇಡ, ನನ್ನ ವ್ಯಾಖ್ಯಾನವೂ ಬೇಡ ಏಕೆಂದರೆ ಓದಿದವರು ಅವರ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಮೊನ್ನೆ ಮಾಡಿದ್ದಾರೆ ನಾನು ಇಲ್ಲವೆಂದು ಹೇಳಿಲಿಲ್ಲವಲ್ಲಾ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮೊನ್ನೆ ಜನ ತೀರ್ಮಾನ ಮಾಡಿರುವುದು ನಿಮಗೆ ತಿಳಿದಿದೆ.

ಶ್ರೀ ಎಂ.ಪಿ. ಪ್ರಕಾಶ್ : ಮೊನ್ನೆ ತೀರ್ಮಾನಿಸಿದ್ದಾರೆ, ನಾನು ಇಲ್ಲವೆಂದು ಹೇಳಲಿಲ್ಲ. ಸ್ವತಃ ವಾಜಪೇಯಿಯವರೇ ಎಡಪಂಥೀಯರು ಯಾವರೀತಿ ಸರ್ಕಾರ ನಡೆಸಿಕೊಂಡು ಹೋಗುತ್ತಾರೆ ಎನ್ನತಕ್ಕಂಥದ್ದನ್ನು ನೀವು ಕಲಿಯಿರಿ ಎಂಬ ಮಾತನ್ನು

ಅವರ ಪಕ್ಷದ ಮುಖಂಡರಿಗೆ ಹೇಳಿದ್ದಾರೆ. ಅದಕ್ಕಿಂತ ದೊಡ್ಡ ಸರ್ಟಿಫಿಕೇಟ್ ಅನ್ನು ನಿಮಗೆ ಇನ್ಯಾರು ಕೊಡಬೇಕಾಗಿದೆ ಹೇಳಿ. ಆದ್ದರಿಂದ ನಾವೂ ಕೂಡ ನಿಮಗೆ ಸರ್ಟಿಫಿಕೇಟ್ ಕೊಡುತ್ತೇವೆ. ಹಾಗಾಗಿ ಅದರ ಬಗ್ಗೆ ಯಾವುದೇ ವಿಚಾರವನ್ನು ನಾನು ಹೇಳುವುದಿಲ್ಲ. ನೀವು ಈ ವಿಚಾರವನ್ನು ತೆಗೆದುಕೊಂಡಿರುವುದಕ್ಕೆ ಕಾರಣ ಕೆಲವು ಅನಿವಾರ್ಯವಾದಂಥ ಸ್ಥಿತಿಗಳಿರುತ್ತವೆ, ಇದು ಕಾಣದ ಕೈ ಇದೆ. ಮತ್ತೊಂದಿದೆ ಎನ್ನುವಂಥ ಮಾತುಗಳನ್ನು ಅನೇಕ ಸಂದರ್ಭಗಳಲ್ಲಿ ಪ್ರಸ್ತಾಪ ಮಾಡಿದ್ದೇವೆ. ಕಾಣದ ಕೈ ಎಂದು ಯಾರ ಬಗ್ಗೆ ಹೇಳುತ್ತೀರಿ ಎಂಬುದನ್ನು ನಾನು ಶ್ರೀರಾಮರೆಡ್ಡಿಯವರಂತೆ ತತ್‌ಕ್ಷಣದಲ್ಲಿ ಪ್ರತಿಕ್ರಿಯೆ ಕೊಡುವುದಿಲ್ಲ. ನಿಮ್ಮ ಉದ್ದೇಶ ಹೀಗಿರಬಹುದು ಎಂದು ನಾನು ಪರಿಭಾವಿಸಿಕೊಳ್ಳುತ್ತೇನೆ. ಯಾರ ಕುರಿತಾಗಿ ಯಾರಾದರೂ ಒಬ್ಬ ವ್ಯಕ್ತಿ ವಿವಾದಾತ್ಮಕನಾಗಿದ್ದಾನೆ, ಯಾರಾದರೂ ಒಬ್ಬ ವ್ಯಕ್ತಿ ಪ್ರಬಲನಾಗಿರುವಂಥವನು ದೂರದೃಷ್ಟಿಯುಳ್ಳಂಥವನು ಸಾರ್ವಜನಿಕರ ಅಭಿಪ್ರಾಯಕ್ಕೆ ಕೂಡ ಅನೇಕ ಸಂದರ್ಭಗಳಲ್ಲಿ ಮನ್ನಣೆ ಕೊಡುತ್ತಾ ಅದನ್ನು ಸರಿದಾರಿಗೆ ತರುವಂಥ ರೀತಿಯಲ್ಲಿ ಪ್ರತಿಪಾದನೆ ಮಾಡುತ್ತಾನೆ, ಹೋರಾಟಗಾರನಾಗಿರುತ್ತಾನೆ. ಆತ ವಿವಾದಾತ್ಮಕವಾದ ವ್ಯಕ್ತಿ ಆಗಿಯೇ ಇರುತ್ತಾನೆ, ನಮ್ಮಲ್ಲಿ ಆಚಾರ್ಯರೂ ಬೇರೆ, ವಿಭೂತಿ ಪುರುಷರೂ ಬೇರೆ, ಆಚಾರ್ಯರಾಗಿರುವಂಥವರು ಬರೇ ಉಪದೇಶವನ್ನು ಮಾಡುತ್ತಾರೆ, ಉಪದೇಶವನ್ನು ಮಾಡತಕ್ಕಂಥವರಿಂದ ಚಿಂತನೆಗಳು ಮಾತ್ರ ಸಮಾಜದಲ್ಲಿ ಬರುತ್ತವೆಯೇ ಹೊರತು ಪರಿವರ್ತನೆಗೆ ಅನೇಕ ಸಂದರ್ಭಗಳಲ್ಲಿ ಅದಕ್ಕೆ ಅವಕಾಶವಾಗುವುದಿಲ್ಲ. ಆದರೆ ಯಾರೂ ಅದನ್ನು ಯಾರೂ ಹೋರಾಟ ಕ್ರಿಯಾಶೀಲರಾಗಿರುತ್ತಾರೆ, ಅಂಥವರು ಅವರ ಜೀವಿತ ಕಾಲದಲ್ಲಿ ಬಹಳ ಟೀಕೆ ಟಿಪ್ಪಣಿಗಳಿಗೆ ಗುರಿಯಾಗುತ್ತಾರೆ, ಅದು ಜೀಸಸ್, ಬಸವಣ್ಣ, ಮಹಾತ್ಮ ಗಾಂಧಿ, ಅಂಬೇಡ್ಕರ್ ಮತ್ತು ಲೋಹಿಯಾರವರನ್ನೂ ಬಿಡಲಿಲ್ಲ, ಆದ್ದರಿಂದ ಈ ರೀತಿಯಾದಂಥವರನ್ನು ಅವರ ಸತ್ತ ನಂತರ ಇಡೀ ಸಮಾಜ ಅವರ ಚಿಂತನೆಗಳನ್ನು ಒತ್ತಿ ಅವರ ಮೂಲಕವಾಗಿಯೇ ಅದರ ಪರಿವರ್ತನೆಗೆ ಪ್ರಯತ್ನವನ್ನು ಮಾಡುತ್ತಾರೆ. ಹಾಗೆಯೇ ಇಲ್ಲಿ ಕಾಣದ ಕೈ ಇದೆ, ಅವರ್‍ಯಾರೋ ಇದರಲ್ಲಿ ಪ್ರಯತ್ನ ಮಾಡುತ್ತಿದ್ದಾರೆ, ಯಾವ ಕಾರಣಕ್ಕಾಗಿ ಪ್ರಯತ್ನ ಮಾಡುತ್ತಿದ್ದಾರೆಂದು ಹೇಳಿ ನಿಮ್ಮ ಮನಸ್ಸಿನಲ್ಲಿ ಯಾರನ್ನು ಗುರುತಿಟ್ಟುಕೊಂಡು ಮಾತನಾಡುತ್ತಿದ್ದೀರೋ ಆ ಮನುಷ್ಯರು ನಿಜವಾಗಿಯೂ ಬದಲಾವಣೆಯನ್ನು ತರಬೇಕೆಂಬ ಪ್ರಯತ್ನವನ್ನು ಮಾಡಿದಂತಹವರೇ ವಿನಃ ಅಲ್ಲಿ ಯಾವುದೇ ಕೆಟ್ಟ ದೃಷ್ಟಿಯಿದೆ ಎಂದು ಹೇಳುವುದಿಲ್ಲ, ಅದಕ್ಕೆ ಲಾಂಗ್‌ಫೆಲೋ ಬಹಳ ಒಳ್ಳೆಯದಾದಂಥ ಒಂದು ಕಪ್ಲೆಟ್ ಬರೆಯುತ್ತಾರೆ. ಬಹಳ ಉತ್ತಮವಾದಂಥ ಇಂಗ್ಲೀಷ್ ಕವಿ. The height through a great men

reached and kept were not attended by a sudden fight. But they, while their companion slept, were toiling up over in the night. ಯಾರೂ ಹಗಲು ರಾತ್ರಿ ಇದರ ಬಗ್ಗೆ ಯೋಚನೆ ಮಾಡುತ್ತಾರೆ, ಅವರ ಜೊತೆಗಾರರೆಲ್ಲಾ ಮಲಗಿರುತ್ತಾರೆ ಅವರ ಜೊತೆಗಾರರೆಲ್ಲಾ ಮಲಗಿದಾಗ ಇವರು ಚಿಂತನಾಶೀಲರಾಗಿರುತ್ತಾರೆ, ಹಾಗಾಗಿ ಕೆಲವರೆಲ್ಲಾ 24 ತಾಸು ರಾಜಕಾರಣಿಗಳು, 24 ತಾಸು ಚಿಂತನೆಯನ್ನು ಮಾಡುತ್ತಿರುತ್ತಾರೆ, ಏಕೆಂದರೆ ನಾವೆಲ್ಲಾ ಕೂಡ ಮಲಗಿಕೊಂಡೇ ಇರುತ್ತೇವೆ, ಹಾಗಾಗಿ ಯಾರಾದರೊಬ್ಬರು ಯೋಚನೆಯನ್ನು ಮಾಡಬೇಕಲ್ಲವೇ– But they, while their companion slept, were toiling up over in the night. ಆದ್ದರಿಂದ ನಾವು ಕೆಲವು ಸಂದರ್ಭಗಳಲ್ಲಿ ಯಾರ್ಯಾರದೋ ಬಗ್ಗೆ ಮಾತನಾಡಬಹುದು, ಹಾಗೆ ಮಾತನಾಡುವಾಗ ಏನನ್ನು ನಾವು ಗುರುತಿಸಬೇಕು ಎನ್ನುವುದಕ್ಕೆ ಜೈನ್ ಫಿಲಾಸಫರ್ಸ್ ಬಹಳ ಮುಖ್ಯವಾಗಿರತಕ್ಕಂಥ ಮಾತನ್ನು ಹೇಳುತ್ತಾರೆ, ಅವರು ಜೈನ್ ತತ್ವ ಗೊತ್ತಿರುವ ಅನೇಕ ಹಿರಿಯ ಸದಸ್ಯರೂ ಕೂಡ ಇದ್ದಾರೆ, ಅವರೇನು ಹೇಳುತ್ತಾರೆಂದರೆ: ನೀವೇನಾದರೂ ಮಾತನಾಡುವುದಿದ್ದರೆ ಮಾತಿನ ಬಗ್ಗೆ ಹೇಳುವಾಗ, 'ನೀವು ಹೇಳುವ ಮಾತುಗಳು ಸತ್ಯವೇ? ಮೊದಲ ಅದರ ಪರೀಕ್ಷೆಯಾಗಬೇಕು' ನಾನು ಹೇಳುವ ಮಾತು ಸತ್ಯವಾಗಿದ್ದರೆ ಮೂರು ಬಾಗಿಲುಗಳಲ್ಲಿ ಮೊದಲನೇ ಬಾಗಿಲು ತೆರೆಯುತ್ತದೆ. Are these words are truthful? Are these words are necessary? ಸಮ್ಮಿಶ್ರ ಸರ್ಕಾರ ಅಥವ ಯಾವುದೇ ಸರ್ಕಾರವನ್ನು ನಡೆಸಿಕೊಂಡು ಹೋಗುವಾಗ ಇದು ಬಹಳ ಮುಖ್ಯ. ಒಂದು ಕುಟುಂಬದ ಯಜಮಾನನಾಗಿರತಕ್ಕಂಥ ಸಂದರ್ಭದಲ್ಲಿ ಯಾವ ಮಾತನ್ನು ಯಾವ ಸಂದರ್ಭದಲ್ಲಿ ಬಳಸಬೇಕೆಂಬುದು ಬಹಳ ಮುಖ್ಯವಾಗಿರುತ್ತದೆ. Are these words are necessary ಅದನ್ನು ನಾವು ನೋಡಬೇಕು. Are these words kind? ಅವು ಅನುಕಂಪ, ಮಾನವೀಯತೆ ದೃಷ್ಟಿಕೋನದಿಂದ ಇರತಕ್ಕಂಥ ಮಾತುಗಳೇ. ಅನ್ನುವಂಥ ಮೂರು ಮಾದರಿಗಳ ಮೂಲಕವಾಗಿ ನಮ್ಮ ನಡವಳಿಕೆಗಳನ್ನು ನಾವು ಸಮರ್ಥಿಸಿಕೊಳ್ಳಬೇಕಾಗುತ್ತದೆ. ಆ ಕಾರಣಕ್ಕಾಗಿಯೇ ಸನ್ಮಾನ್ಯ ಅಧ್ಯಕ್ಷರೇ, ನಾನು ಬಹಳ ಉದ್ದವಾಗಿ ಪ್ರಿಯಾಂಬಲ್ ಹೇಳಿದೆ ಎಂದಲ್ಲ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಈ ಚರ್ಚೆಯನ್ನು ಬಹಳ ದೊಡ್ಡ ಮಟ್ಟಕ್ಕೆ ತೆಗೆದುಕೊಂಡು ಹೋದರು. ಅವರು ಹೇಳಿದಂಥಾದ್ದು ಭೂಸುಧಾರಣಾ ಕಾಯಿದೆಯನ್ನು ನೀವು ತಿದ್ದುಪಡಿ ಮಾಡುವುದರ ಮೂಲಕವಾಗಿ ಅದಕ್ಕೆ ಜಾಳತೆಯನ್ನು ತಂದುಕೊಟ್ಟು, ಅದರ ಮೂಲಕ ಎಲ್ಲರೂ ಇದರ ದುರುಪಯೋಗಪಡಿಸಿಕೊಳ್ಳುವುದಕ್ಕೆ ಪ್ರಾರಂಭ ಮಾಡಿದರು ಎಂಬ ಮಾತಿನಲ್ಲಿ

ಕೆಲವೊಂದು ಸತ್ಯಾಂಶ ಇದೆ. ಆದರೆ, ತಾವು ಒಂದನ್ನು ಯೋಚನೆ ಮಾಡಬೇಕು. ಈ ದೇಶದಲ್ಲಿ ಇವತ್ತೇನು ಪ್ರತಿ ಶತ 8.1ರಷ್ಟು ಅಭಿವೃದ್ಧಿಯಾಗುತ್ತದೆಂದು ಎಲ್ಲರೂ ಹೇಳುತ್ತಿರತಕ್ಕಂಥಾದ್ದು. ಅಭಿವೃದ್ಧಿಯ ಕಾರಣಗಳಿಗಾಗಿಯೇ ನಮ್ಮ ಕಣ್ಣಿಗೆ ಕಾಣುತ್ತಾ ಇರತಕ್ಕಂಥಾದ್ದು. ಈ ಖಾಸಗೀಕರಣ, ಜಾಗತೀಕರಣ, ಉದಾರೀಕರಣ ತತ್ವವನ್ನು ಇವತ್ತಿನ ಪ್ರಧಾನ ಮಂತ್ರಿಗಳಾಗಿರತಕ್ಕಂಥ ಡಾ॥ ಮನಮೋಹನ ಸಿಂಗ್‌ರವರು ಪ್ರತಿಪಾದಿಸಿದಂಥ ಆ ವಿಚಾರಗಳನ್ನು ಕೈಯಲ್ಲಿಟ್ಟುಕೊಂಡು ನರಸಿಂಹರಾಯರು ಅವತ್ತು ಪ್ರಧಾನ ಮಂತ್ರಿಗಳಾಗಿ ತೆಗೆದುಕೊಂಡ ನಿರ್ಣಯ ಇವತ್ತು ಅದನ್ನು ಒಪ್ಪುತ್ತೇವೋ ಅಥವಾ ಇಲ್ಲವೋ ಆ ವಿಚಾರಗಳು ಬೇರೆ. ಆದರೆ, ಕೇಂದ್ರದಲ್ಲಿ ಬಂದ ಎಲ್ಲಾ ಸರ್ಕಾರಗಳೂ ಅದನ್ನು ಒಪ್ಪಿವೆ. 1994ರಲ್ಲಿ ಸನ್ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ, ನರಸಿಂಹರಾಯರು ಕಾಂಗ್ರೇಸ್ಸೇತರ ಸರ್ಕಾರದ ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ, ನರಸಿಂಹರಾಯರು ಕಾಂಗ್ರೇಸ್ಸೇತರ ಸರ್ಕಾರದ ಮುಖ್ಯಮಂತ್ರಿಗಳಾದಂಥ ದೇವೇಗೌಡರನ್ನು ದಾವೋಸ್‌ಗೆ ಕಳುಹಿಸಿದರು. ನನಗೆ ನೆನಪಿದ್ದರೆ ಅಥವಾ ನಾನು ಹೇಳುವುದು ಸರಿಯಾಗಿದ್ದರೆ ಪ್ರಾಯಶಃ ದೇಶಪಾಂಡೆಯವರೂ ಕೂಡ ಆ ಸಂದರ್ಭದಲ್ಲಿ ಕೈಗಾರಿಕಾ ಮಂತ್ರಿಗಳಾಗಿ ಮಂತ್ರಿಗಳಾಗಿ ಆ ವರ ಜೊತೆಗೆ ದಾವೋಸ್‌ಗೆ ಹೋಗಿದ್ದರು. ಆ ನಂತರದಲ್ಲಿ ಬಂದಾಗ, ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಕೂಡ ಯೋಚನೆಯಾಗಿ ಗ್ಲೋಬಲ್ ಟೆಂಡರ್ ಕರೆದಿರಕ್ಕ ಸಂದರ್ಭದಲ್ಲಿ ಕೇವಲ ಒಬ್ಬರು ಮಾತ್ರ ತಮ್ಮ ಟೆಂಡರನ್ನು ಹಾಕಿದ್ದಾರೆ, ಆದ್ದರಿಂದ ಏಕೆ ಎಂದು, ಕೆಲವುಸಲ ಆಪಾದನೆಗಳು ಬರುತ್ತವೆ ಎನ್ನುವ ಕಾರಣಕ್ಕಾಗಿಯೇ ಅವರು ನಿರ್ಧಾರವನ್ನು ಅವತ್ತು ಜಾರಿಗೊಳಿಸಲಿಲ್ಲ. ಅವತ್ತಿನ ವಾತಾವರಣ, ಅವರು ಮುಖ್ಯಮಂತ್ರಿಗಳಾಗಿದ್ದಾಗ ಈ ಖಾಸಗೀಕರಣ, ಜಾಗತೀಕರಣದ ಪರಿಕಲ್ಪನೆಗಳನ್ನು ಒಪ್ಪಿತ ನೀತಿ, ಆರ್ಥಿಕ ನೀತಿ ಎಂದು ಹೇಳಿ ಯಾರೂ ಪರಿಭಾವಿಸಿರಲಿಲ್ಲ. ಆ ಕಾರಣಕ್ಕಾಗಿಯೇ ಅವರು ಒಂದು ಹೆಜ್ಜೆಯನ್ನು ಹಿಂದಕ್ಕೆ ಇಟ್ಟರು. ಇವತ್ತೇನು ಬೆಂಗಳೂರಿನ ಬಗ್ಗೆ ಮೂಲಭೂತ ಸೌಕರ್ಯ ಕಲ್ಪಿಸಬೇಕೆಂದು ನಾವೆಲ್ಲಾ ಇಷ್ಟು ಹೋರಾಟ ಮಾಡುತ್ತಿದ್ದೇವೆ. ಕೇವಲ ನಾನು ವಿದ್ಯಾರ್ಥಿಯಾಗಿ 1956ರಲ್ಲಿ ಇಲ್ಲಿಗೆ ಬಂದಂಥ ಸಂದರ್ಭದಲ್ಲಿ 5 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇದ್ದ ಬೆಂಗಳೂರು ಇವತ್ತು 80 ಲಕ್ಷಕ್ಕೆ ಹೋಗಿದೆ. ಇಷ್ಟೆಲ್ಲಾ ದೊಡ್ಡ ಪ್ರಮಾಣದಲ್ಲಿ ಬೆಳೆಯತಕ್ಕ ಬೆಂಗಳೂರಿಗೆ ಮೂಲಭೂತ ಸೌಕರ್ಯ ಕಲ್ಪಿಸಿಕೊಡುವುದಿಲ್ಲವೆ ಎಂಬ ಬಗ್ಗೆ ದೊಡ್ಡ ಚರ್ಚೆಯಾಗಿರುವುದೂ ಇದೆ. ಈ ಸನ್ನಿವೇಶದಲ್ಲಿ ಈ ಕೆಲಸವನ್ನು ನಾಗಾಲೋಟದಿಂದ ನಡೆಯತಕ್ಕ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಭೂಮಿಯೇ ಆಧಾರ. ಪ್ರಾಯಶ: ಇನ್ನು

10–20 ವರ್ಷಗಳ ನಂತರ ಆಕಾಶದಲ್ಲಿ ಏನು ಸೆಟಲೈಟ್ ಟೌನ್‌ಷಿಪ್‌ಗಳನ್ನು ಕಟ್ಟುತ್ತಾರೆ ಆ ಸಂದರ್ಭದಲ್ಲಿ ಪ್ರಾಯಶ: ಕೈಗಾರಿಕೆಗಳನ್ನು ನಾವು ಅಲ್ಲಿ ಸ್ಥಾಪಿಸಬಹುದು. ಅಲ್ಲಿಯವರೆಗೂ ಭೂಮಿಯನ್ನು ಬಿಟ್ಟು ಎಲ್ಲೂ ಮಾಡಲಿಕ್ಕಾಗುವುದಿಲ್ಲ. ಆ ಭೂಮಿಯಲ್ಲೇ ನಮ್ಮ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕಾಗುತ್ತದೆ. ಅದರ ಮೂಲಕ ಉದ್ಯೋಗಗಳನ್ನು ಕೊಡಬೇಕಾಗುತ್ತದೆ. ನಮ್ಮ ಕೃಷಿಯಲ್ಲಿ ಹೊಸ ಹೊಸ ನವೀನತೆಯನ್ನು ತಂದು ನೂರಾರು ಎಕರೆಯಲ್ಲಿ ಬೆಳೆಯತಕ್ಕಂಥಾದ್ದು, ಹತ್ತಾರು ಎಕರೆಯಲ್ಲಿ ಬೆಳೆಸತಕ್ಕಂಥ ವೈಜ್ಞಾನಿಕ ಕಲ್ಟಿವೇಷನ್ ಮಾಡತಕ್ಕಂಥಾದ್ದು ಮುಂದೆ ಬರಬಹುದು. ಆ ದೃಷ್ಟಿಕೋನದಿಂದ ಸನ್ಮಾನ್ಯ ದೇವೇಗೌಡರವರು ಅವತ್ತಿನ ಪ್ರಧಾನ ಮಂತ್ರಿಗಳ ಜೊತೆಗೂ ಮಾತನಾಡಿ ಆಗ ಕೆಲವು ಸೀಮಿತವಾಗಿರತಕ್ಕ ಷರತ್ತುಗಳನ್ನು ಭೂಸುಧಾರಣೆ ಕಾಯಿದೆಗೆ ತಂದು, ಆ ಕಾರಣಗಳಿಗೇ ತಿದುಪಡಿಯನ್ನು ತಂದರು. ನೀವು ಇಂಥಿಂಥ ಉದ್ದೇಶಗಳಿಗಾಗಿ ಖಾಸಗಿಯಾದಂಥ ಜಮೀನನ್ನು ಸರ್ಕಾರದ ಒಪ್ಪಿಗೆಯನ್ನು ಪಡೆದು ಅದರ ಮೂಲಕವಾಗಿ ನೀವು ಖರೀದಿಯನ್ನು ಮಾಡಿಸಬಹುದು. ಅದಕ್ಕಾಗಿ ಸರ್ಕಾರದ ಮಟ್ಟದಲ್ಲಿ ಅಲ್ಲದೇ, ಮುಖ್ಯ ಕಾರ್ಯದರ್ಶಿಗಳಿಂದ ಹಿಡಿದು ಉನ್ನತಮಟ್ಟದ ಅಧಿಕಾರಿಗಳ ಒಂದು ಸಮಿತಿಯಲ್ಲಿ ಅದು ನಿರ್ಧಾರ ಆಗಬೇಕು. ಅದರ ಮೂಲಕ ಆಗಬೇಕೆನ್ನುವ ತಿದ್ದುಪಡಿಯನ್ನು ತಂದರು. ತಿದ್ದುಪಡಿ ತಂದಿರತಕ್ಕಂಥಾದ್ದು ಸದುದ್ದೇಶ. ತಿದ್ದುಪಡಿ ತಂದಿರತಕ್ಕಂಥಾದ್ದು ಅಭಿವೃದ್ಧಿಯ ಚಾಲನೆ. ಆದರೆ, ತಿದ್ದುಪಡಿಯನ್ನು ದುರುಪಯೋಗ ಪಡಿಸಿಕೊಂಡಿರತಕ್ಕಂಥಾದ್ದು ನಮ್ಮ ಆಡಳಿತ ವೈಫಲ್ಯ ಮತ್ತು ಭ್ರಷ್ಟಾಚಾರದ ಪ್ರತೀಕ. ಆ ಕಾರಣಕ್ಕಾಗಿಯೇ ನಾವು ಯಾರನ್ನು ಈ ಕಾನೂನನ್ನು ಬುಡಮೇಲು ಮಾಡುವಂಥ ಪ್ರಯತ್ನವನ್ನು ಮಾಡುತ್ತಿದೆ ಎನ್ನುವುದರ ಮೇಲೆ ಅವಲಂಬನೆಯಾಗಿದೆ. ಆದ್ದರಿಂದ ತಿದ್ದುಪಡಿ ತಂದಿರತಕ್ಕಂಥಾದ್ದೇನೂ ತಪ್ಪಲ್ಲ. ಆದರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದಂತೆ ಅದೊಂದು ಉತ್ತಮವಾದಂಥ ಕಾನೂನು ಮತ್ತು ಕ್ರಾಂತಿಕಾರಕವಾದಂಥ ಕಾನೂನು. ಆದರೆ ಆ ಕ್ರಾಂತಿಕಾರಕವಾದಂಥ ಕಾನೂನನ್ನು ನಾವು ಯಾವುದೇ ಸಂದರ್ಭದಲ್ಲಿ ದುರುಪಯೋಗಪಡಿಸಿಕೊಳ್ಳತಕ್ಕಂಥಾದ್ದು ಅಲ್ಲ. ಈ ಸಂದರ್ಭದಲ್ಲಿ ನಾನು ನೇರವಾಗಿ ಈ ವಿಷಯಕ್ಕೆ ಬರುತ್ತೇನೆ. ಇಲ್ಲಿ ನೈಸ್ ಕಂಪನಿ ಬಂದಿರುವುದಕ್ಕಿಂತ ಪೂರ್ವದಲ್ಲಿ ತಮಗೆ ಗೊತ್ತಿದೆ, ಮೂರು ಕಂಪನಿಗಳು. ಇದನ್ನು ಎಲ್ಲರೂ ಕೂಡ, ಮಾನ್ಯ ಶ್ರೀರಾಮರೆಡ್ಡಿಯವರು, ಮಾಧುಸ್ವಾಮಿಯವರು, ರಾಮಸ್ವಾಮಿಯವರು, ದೇಶಪಾಂಡೆಯವರು, ರಾಯರೆಡ್ಡಿಯವರು ಹೀಗೆ ಅನೇಕರು ಪ್ರಸ್ತಾಪ ಮಾಡಿದ್ದಾರೆ. ಅವರು ಯಾವುದನ್ನು ಮಾಡಿದರೂ ಕೂಡ ಅದರಲ್ಲಿರತಕ್ಕಂಥ

ಮಾನ್ಯ ಅಶೋಕ್ ಖೇಣಿಯವರು ಅಮೇರಿಕಾದ ಒಬ್ಬ ನಾಗರೀಕ. ಅವರು ಎನ್.ಆರ್.ಐ. ಅಥವಾ ಸಿಟಿಜನ್‌ಷಿಫ್ ತೆಗೆದುಕೊಂಡಿದ್ದಾರೋ ನನಗೆ ಗೊತ್ತಿಲ್ಲ. ಆದರೆ, ಅವರ ಬಗ್ಗೆ ಹೇಳತಕ್ಕಂಥ ಮಾತಲ್ಲ ಇದು. ಆದರೆ, ಜಾರ್ಜ್‌ಬರ್ನಾಡ್‌ಷಾರವರು ತಮ್ಮ ಬಹಳ ಉತ್ತಮವಾಗಿರತಕ್ಕ ನಾಟಕದಲ್ಲಿ ನೆಪೋಲಿಯನ್ ಬೋನಾಪಾರ್ಟ್ ಮೂಲಕವಾಗಿ ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತಾರೆ. ಅಮೇರಿಕಾ ಮತ್ತು ಇಂಗ್ಲೇಂಡ್ ದೇಶದ ಸಾಮಾಜ್ಯ ಶಾಹಿ imperialism ಹೇಗಿರುತ್ತದೆ ಎಂಬುದನ್ನು ಅಲ್ಲಿರತಕ್ಕಂಥ ಖ್ಯಾತನಾಗಿರತಕ್ಕಂಥ ಒಬ್ಬ ನಾಟಕಕಾರ ಮತ್ತು ಇಡೀ ಜಗತ್ತಿನಿಂದ ಗೌರವಿಸಲ್ಪಟ್ಟ ಜಾರ್ಜ್‌ಬರ್ನಾಡ್‌ಷಾರವರು ಬಹಳ ಉತ್ತಮವಾದಂಥ ಮಾತನ್ನು ಹೇಳುತ್ತಾರೆ ಈ using Nepolean as a mouth piece, George Barnard sha makes a telling conment on British Imperialism which is no less if not more opposite to the American Imperialism of our time, he says, "there is nothing so bad or so good that you will not find an English man doing it. But you will never find an English man in the wrong. He does everything on principles. He fights you on a patriotic principle. He raps you on a business principle. He encourages you on a imperial principle. He punishes you on many many penny principle. He supports his king on a loyal principle and cut off his King's head on republican principle. American is no different. ನಾವು ಸ್ವತಃ Long live the King ಎಂದು ಹೇಳುತ್ತೇವೆ. King is dead ಎಂತಲೂ ಹೇಳುತ್ತೇವೆ. ಅದು ಅವರ ವೈರುಧ್ಯಗಳು dichotomyಗಳು. ಆ ರೀತಿಯಾಗಿ ಇಲ್ಲಿ ಇವರು ಪ್ರಸ್ತಾಪ ಮಾಡತಕ್ಕಂಥಾದ್ದು ನಾನು ನಿಮ್ಮನ್ನು ಅಭಿವೃದ್ಧಿಪಡಿಸಲಿಕ್ಕಾಗಿ ಇಲ್ಲಿಗೆ ಬಂದಿದ್ದೇನೆ, ಅಭಿವೃದ್ಧಿಯನ್ನು ಮಾಡುತ್ತೇವೆ. ಅಭಿವೃದ್ಧಿ ಮಾಡುವಾಗಲೂ ಕೂಡ ನಾವು ಹೆಚ್ಚು ಲಾಭವನ್ನು ಪಡೆಯುತ್ತೇವೆ. ಆ ಲಾಭ ಎಷ್ಟರಬೇಕು? ಅವರೇ ಪ್ರಸ್ತಾಪ ಮಾಡಿದಂತೆ 16 ಅಥವಾ 17 ಪರ್ಸೆಂಟಿನಷ್ಟು ನಮಗೆ ವಾಪಸ್ ಬರಬೇಕು. ಇತ್ತೀಚಿನ ದಿನಮಾನಗಳಲ್ಲಿ ಅದು 9–10–11 ಪರ್ಸೆಂಟ್ ವಾಪಸ್ ಬಂದರೆ ಸಾಕು ಎಂಬ ವಾದ ಇದೆ. ಅವರ ಪ್ರಕಾರವೇ 16–17 ಪರ್ಸೆಂಟ್ ನಮಗೆ ಬರುತ್ತದೆ ಎನ್ನುವ ಕಾರಣಕ್ಕಾಗಿಯೇ ನಾವು ಈ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆಂದು ಹೇಳುತ್ತಾರೆ. ಈಗ ಅವರು ಹೇಳಿರುವುದಕ್ಕೂ ಮತ್ತು ಪ್ರಸ್ತಾಪ ಮಾಡಿರತಕ್ಕಂಥಾದ್ದಕ್ಕೂ ಎಷ್ಟು ವ್ಯತ್ಯಾಸವಿದೆ ಎಂಬುದನ್ನು ಸದಸ್ಯರೆಲ್ಲರೂ ಹೇಳಿದ್ದಾರೆ.

ಮೊದಲು ಅವರು ಪ್ರಸ್ತಾಪ ಮಾಡಿದ್ದು, 18 ಸಾವಿರ ಎಕರೆ ಇದ್ದರೆ, ನಾವು ಈ ಯೋಜನೆಯನ್ನು ಜಾರಿಗೊಳಿಸಬಹುದು ಎಂದರು. ಆದರೆ, ಜಾರಿಗೊಳಿಸುವಂಥ ಸಂದರ್ಭದಲ್ಲಿ ಕೂಡ ಅವರು ಬೇರೆ ಬೇರೆ ಮಾತುಗಳನ್ನೆಲ್ಲಾ ಹೇಳಿ, ಕೊನೆಗೆ ಅವರು ಎಲ್ಲಿಗೆ ಬಂದು ನಿಂತರು. 20,193 ಎಕರೆಯನ್ನು ನಮಗೆ ಕೊಟ್ಟರೆ ಸಾಕು, ಅದರ ಮೂಲಕವಾಗಿ ಕೆಲಸವನ್ನು ಮಾಡುತ್ತೇವೆ. ಅದರಲ್ಲಿ, ಮೊದಲು ನಮ್ಮ ಏನು ಫ್ರೇಮ್ ವರ್ಕ್ ಅಗ್ರಿಮೆಂಟ್ ಇತ್ತು, ಅದನ್ನು ಎಲ್ಲಾ ಸದಸ್ಯರು ಈಗಾಗಲೇ ಪ್ರಸ್ತಾಪ ಮಾಡಿರುವುದರಿಂದ ಮತ್ತೆ ನಾನು, not at the cost of the repetition ಅವರು ಐದು ಟೌನ್‌ಷಿಪ್‌ಗಳನ್ನು ಮಾಡುತ್ತೇವೆಂದು ಹೇಳಿದ್ದರು, ಅದು ಇರಲಿ. ಅವರು ಪರಿಭಾವಿಸಿರತಕ್ಕಂಥಾದ್ದು ಟೋಲ್ ಕಲೆಕ್ಷನ್. ಅಲ್ಲಿ ಬರತಕ್ಕಂಥ ಶುಲ್ಕ ಏನಿದೆ, ವಾಹನಗಳ ಮೇಲಿನ ಶುಲ್ಕದ ಮೇಲೆ 30 ವರ್ಷಗಳ ನಂತರ, ಇದನ್ನು ವಾಪಸ್ ಸರ್ಕಾರಕ್ಕೆ ಕೊಡುತ್ತೇವೆನ್ನುವ ಯೋಚನೆಯನ್ನು ಮಾಡಿದರು. ನಂತರ, ಅಲ್ಲಿಯ ವಾಹನಗಳ ತಿರುಗಾಟ, ಅದರ ಸಾಂದ್ರತೆ, ಅದರ ಬಗ್ಗೆ ಸಂಪೂರ್ಣವಾದ ಸರ್ವೆ ಮಾಡಿದಾಗ, ನಾವು ಹಾಕಿದಂಥ ಬಂಡವಾಳಕ್ಕೂ ನಂತರ ಶುಲ್ಕದಿಂದ ಬರತಕ್ಕ ಆದಾಯಕ್ಕೂ ಈ ಯೋಜನೆ ಲಾಭದಾಯಕವಾದುದು ಆಗುವುದಿಲ್ಲ. ಆ ಕಾರಣಕ್ಕಾಗಿಯೇ ನಾವು ಏಳು ಉಪ ನಗರಗಳನ್ನು ಕೈಗೊಳ್ಳುತ್ತೇವೆ. ಅದನ್ನು ಮಾರಾಟ ಮಾಡುವ ಹಕ್ಕನ್ನು ಕೊಡಬೇಕು ಎಂದು ಅವರು ಪ್ರತಿಪಾದಿಸಿದರು. ಆ ಏಳು ಉಪನಗರಗಳನ್ನು ಕೊಡಲಿಕ್ಕಾಗುವುದಿಲ್ಲ, ಐದು ಉಪನಗರಗಳನ್ನು ಕೊಡುತ್ತೇವೆಂಬ ಮಾತನ್ನು ಹೇಳಿದೆವು. ಆ ಐದು ಉಪನಗರಗಳನ್ನು ಅಭಿವೃದ್ಧಿಪಡಿಸಬೇಕು. ಈ ರೀತಿ ಅಭಿವೃದ್ಧಿಪಡಿಸಿದ ಉಪನಗರದಲ್ಲಿ ಶೇಕಡ 55 ರಷ್ಟು ಭಾಗವನ್ನು ಸರ್ಕಾರಕ್ಕೆ ವಾಪಸ್ ಕೊಡಬೇಕು, ಉಳಿದ 45 ಭಾಗವನ್ನು ನೀವು ಮಾರಾಟ ಮಾಡಬಹುದು. ಇದು ಮುಖ್ಯವಾಗಿರತಕ್ಕಂಥಾದ್ದು. ಇದರಲ್ಲಿ ಅವರೇ ಕೊಟ್ಟಿರತಕ್ಕಂಥಾದ್ದು 111 ಕಿಲೋಮೀಟರ್ ಉದ್ದದ ಎಕ್ಸ್‌ಪ್ರೆಸ್ ರಸ್ತೆ. ಇಂಟರ್ ಚೇಂಜ್‌ಗಳು ಮತ್ತೆ ಟೋಲ್ ಪ್ಲಾಜಾಗಳು ಸೇರಿ 4,522 ಎಕರೆ; ಇದು ಅವರೇ ಕೊಟ್ಟಿರತಕ್ಕಂಥಾದ್ದು. 45 ಕಿಲೋಮೀಟರ್ ಉದ್ದದ ಪೆರಿಫೆರಲ್ ರಸ್ತೆ ಇಂಟರ್‌ಚೇಂಜ್‌ಗಳೂ ಕೂಡ ಸೇರಿ 2193 ಎಕರೆ. 9.8 ಕಿಲೋಮೀಟರ್ ಉದ್ದದ ಲಿಂಕ್ ರಸ್ತೆ 278 ಎಕರೆ. ಒಟ್ಟು ಟೋಲ್ ರಸ್ತೆ ನಿರ್ಮಾಣಕ್ಕಾಗಿ 6,999 ಎಕರೆ. ಅದೇ ರೀತಿಯಾಗಿ ಐದು ಉಪನಗರಗಳನ್ನು ನಿರ್ಮಾಣ ಮಾಡಲಿಕ್ಕೆ 13,194 ಎಕರೆ. ಒಟ್ಟು ಟೋಲ್ ರಸ್ತೆ ನಿರ್ಮಾಣಕ್ಕಾಗಿ 6999 ಪ್ಲಸ್ 13,194 ಒಟ್ಟು 20,193 ಎಕರೆ ಈ ಇಡೀ ಯೋಜನೆಗೆ ಕೊಡಬೇಕಾಗಿರತಕ್ಕಂಥಾದ್ದು ಅದು. ಆದರೆ ಇವತ್ತು ಏನಾಗಿದೆ? ಈ ಎಲ್ಲದ್ದಕ್ಕೂ ಅವರು ಮಾಡಿರತಕ್ಕಂಥ ಯೋಜನೆಯಲ್ಲಿ

ಹೆಚ್ಚುವರಿಯಾಗಿರತಕ್ಕಂಥ ಭೂಮಿಯನ್ನು ನಾವು ಕಾಣುತ್ತೇವೆ. ಅದನ್ನು ನಾವೇ ಕಂಡು ಹಿಡಿಯತಕ್ಕಂಥಾದ್ದು ಅಲ್ಲ. ಅವತ್ತಿನ ಕಾಲದಲ್ಲಿಯೂ ಕೂಡ ಅವತ್ತಿನ ಮಾನ್ಯ ಕೈಗಾರಿಕಾ ಮಂತ್ರಿಗಳೂ ಕೂಡ ಈ ವಿಚಾರದಲ್ಲಿ ಬರೆದಿದ್ದಾರೆ. ಮಾನ್ಯ ಕೈಗಾರಿಕಾ ಮಂತ್ರಿಗಳ ನೋಟ್ ಕೂಡ ಇದರ ಬಗ್ಗೆ ಸಂಪೂರ್ಣವಾಗಿ ಬೆಳಕನ್ನು ಚೆಲ್ಲುತ್ತದೆ. ಆಗ ಮಾನ್ಯ ಎಸ್.ಎಂ. ಕೃಷ್ಣರವರೂ ಕೂಡ ಒಂದು ಮಾತನ್ನು ಬರೆಯುತ್ತಾರೆ. ಅಲೈನ್‌ಮೆಂಟ್‌ಗೆ ಮಾತ್ರ ಇವರು ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಿ, ಮಿಕ್ಕ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಅವಶ್ಯಕತೆ ಇಲ್ಲ. ಇದು ಸರ್ಕಾರದ ನೀತಿಯಾಗಬೇಕು ಕೆಐಎಡಿಬಿ ಯವರು ಅದರ ಬಗ್ಗೆ ನಿಶ್ಚಿತವಾದ ನಿಲುವನ್ನು ತೆಗೆದುಕೊಳ್ಳಬೇಕು. ಅಂತ ಅವರು ಬರೆಯುತ್ತಾರೆ. ಈಗ ಅದೇ ರೀತಿಯಾಗುವಾಗ while examining some of the representations given by the land owners, the Hon'ble Minister for Large and Medium Industries, pointed out that in the absence of the maps as approved by the Government, it will be difficult to take a decision as to any survey number is required for the project or otherwise. Hon'ble Minister has directed me to obtain a copy of the alignment maps as approved by the Government. You are therefore requested to make available a copy of the said drawing to this office at the earliest. ಅಂತ ಹೇಳಿ ಚೀಫ್ ಇಂಜಿನಿಯರ್‌ರವರು ಪತ್ರವನ್ನು ಬರೆಯುತ್ತಾರೆ. ಅದಕ್ಕೆ Hon'ble Minister reviwed the progress that is on 12.11.2003 relating to the Bangalore-Mysore Infrastructure Corridor Project. He took serious note of the fact that the copies of alignment as approved by the PWD are not available either with the Government in CI Department or with the KIADB. He expressed surprise at the extent involved in acquisition. Special Deputy Commissioner, BMICP informed that the total land required for the project including the government land of 5688 acres is 20193 acrs. He says that the promoter company has confirmed that the land requirement will not exceed the said extent. Hon'ble Minister observes that the private area notifies as on the date is 20824 acres, that means

6319 acres is notified in excess of the private land requirement. He directed the Special Deputy Commissioner, BMICP to identify the lands sthat are notified but not required for the project and to submit a proposal to the government for causing de-notification of the said extent. ಎನ್ನತಕ್ಕಂಥ ಮಾತನ್ನು ಬರೆಯುತ್ತಾರೆ. ಇವರು ಈ ತರಹದಲ್ಲಿ ಬರೆದರೆ ಇವರ ಅಧಿಕಾರಿ ಕೋ-ಆರ್ಡಿನೇಟರ್ ಅಂತ ಒಬ್ಬ ಅಧಿಕಾರಿ ಅದರಲ್ಲಿ ಇರುತ್ತಾರೆ. ಆ ಕೋ-ಆರ್ಡಿನೇಟರ್ ಅಧಿಕಾರಿ ಬರೆಯುತ್ತಾರೆ. "Land acquisition notification were issued based on the requirement indicated by the promoter company and not on the basis of any technical drawing map as approved by the Government in PWD or the project report." ಇದನ್ನು ಅನಿಸ್ ಸಿರಾಜ್ ಅಂತ ಹೇಳಿ ಸ್ಪೆಷಲ್ ಡೈಪ್ಯುಟಿ ಕಮೀಷನರ್‌ಗೆ ಬರೆಯುತ್ತಾರೆ. ಅದರ ಜೊತೆಗೆ ಆ ಕೋ-ಆರ್ಡಿನೇಟರ್ ಆಗಿರತಕ್ಕಂಥವರು ಹೇಳುತ್ತಾರೆ ಇಲ್ಲಾ ನೀವು ಇದನ್ನು ಬಿಟ್ಟು ಕೊಡ ಕೆಲಸ ಮಾಡಿಕೊಳ್ಳಬಹುದು ನೀವು ಈ ವಿಚಾರದಲ್ಲಿ ಸರ್ವಸ್ವತಂತ್ರರು ಇದ್ದೀರಿ ಇದನ್ನೆಲ್ಲಾ ನೀವು ಮಾಡಿಕೊಳ್ಳಿ ಎನ್ನತಕ್ಕಂಥ ಮಾತನ್ನು ಕೂಡ ಅದರಲ್ಲಿ ಬರೆಯುತ್ತಾರೆ. ಬರೆದಿರತಕ್ಕಂಥದ್ದರಲ್ಲಿ ನೋಟಿಫೈ ಆಗಿರತಕ್ಕಂಥಾದ್ದು ಯಾವುವು? ಈಗಾಗಲೇ ಚರ್ಚೆಯಾಗಿದೆ. ಅನೇಕ ಜನ ಮಾನ್ಯ ಸದಸ್ಯರು ಸದನದ ಗಮನ ಸೆಳೆದಿದ್ದಾರೆ. ಕೋನಪ್ಪನ ಅಗ್ರಹಾರ ಇಲ್ಲಿ ಸರ್ವೆ ನಂಬರ್ 51, 28 ಎಕರೆ 10 ಗುಂಟೆ ಅದು ಟ್ಯಾಂಕ್ ಸರ್ವೆ ನಂಬರ್ 63 14 ಗುಂಟೆ ಗುಂಡುತೋಪು, ಸರ್ವೆ ನಂಬರ್ 89, 23 ಗುಂಟೆ, ಬರಿಯಲ್ ಗ್ರೌಂಡ್, ಹಾಗೆಯೇ ನೀವು ಉದ್ದಕ್ಕೂ ಹೋದರೆ, ಟ್ಯಾಂಕ್, ಟ್ಯಾಂಕ್, ಗೋಮಾಳ, ಟ್ಯಾಂಕ್, ಟ್ಯಾಂಕ್, ಗೋಮಾಳ, ಗೋಮಾಳ, ಟ್ಯಾಂಕ್, ಪ್ರತಿಯೊಂದರ ಲಿಸ್ಟ್ ತಮ್ಮ ಹತ್ತಿರ ಇದೆ. ಎಲ್ಲರೂ ಕೂಡ ಅದನ್ನು ನೋಡಿದ್ದಾರೆ. ನಾವು ಯಾವುದನ್ನೂ ಅಧಿಸೂಚನೆ ಹೊರಡಿಸುತ್ತಿದ್ದೇವೆ? ಅಧಿಸೂಚನೆ ಹೊರಡಿಸುವಂತಹ ಸಂದರ್ಭಗಳಲ್ಲಿ ಅಥವಾ ಯಾವುದೇ ಸಂದರ್ಭದಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಆಗ ಕಂದಾಯ ಮಂತ್ರಿಗಳಾಗಿದ್ದಾಗ ಮಾನ್ಯ ದೇವರಾಜ ಅರಸರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಕಾಲಕಾಲಕ್ಕೆ ಬದಲಾವಣೆಗಳಾಗಿವೆ. ಆ ಮಾತು ಬೇರೆ. ಗೋಮಾಳವನ್ನು ಯಾವುದೇ ಕಾರಣಕ್ಕೂ ಕೊಡಬಾರದು ಎನ್ನತಕ್ಕಂಥಾದ್ದು ಇದೆ. ಆದರೆ ಇವತ್ತಿನ ದಿನ ಗೋಮಾಳವನ್ನು ಕೊಡುತ್ತಿದ್ದೇವೆ. ಸುಮಾರು 8 ಆ ತರಹದ ಸರ್ಕಾರಿ ಆಜ್ಞೆಗಳು ಹೊರಟಿವೆ. ಸರ್ಕಾರಿ ಆದೇಶಗಳು

ಹೊರಡಿಸಲಾಗಿದೆ. ಒಮ್ಮೆ ಯಾರ್ಯಾರೋ ಅದರಲ್ಲಿ ಗೋಮಾಳದಲ್ಲಿ ಸಾಗುವಳಿ ಮಾಡಿಕೊಂಡಿದ್ದಾರೆ, ಅನುಭವದಲ್ಲಿ ಇದ್ದಾರೆ, ಅವರಿಗೆ ಕೊಡಿ. ಮತ್ತೊಂದು ಸಂದರ್ಭದಲ್ಲಿ ಇಲ್ಲ ಯಾರಿಗೂ ಕೊಡಬೇಡಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರನ್ನು ಮಾತ್ರ ಪರಿಗಣಿಸಬೇಕು, ನಂತರದಲ್ಲಿ ಅವರನ್ನೂ ಕೂಡ ಪರಿಗಣಿಸಬಾರದು, ಈ ರೀತಿ ಯಾದಂತಹ ಬಹಳ ಒಂದಕ್ಕೊಂದು ದ್ವಂದ್ವವಾದಂತಹ ಮತ್ತು ಅಲ್ಲಿ ಅಸ್ಪಷ್ಟತೆಯನ್ನು ಸೃಷ್ಟಿ ಮಾಡುವಂತಹ ಸುಮಾರು 8 ಆಜ್ಞೆಗಳು ಇವೆ. ಇಷ್ಟು ಆಜ್ಞೆಗಳ ನಡುವೆಯೂ ಕೂಡ ಗೋಮಾಳ ಇವತ್ತು ಉಳಿದಿಲ್ಲ. ನಾನು ನನ್ನ ನೆನಪಿನಲ್ಲಿ ಹೇಳುವುದಾದರೆ, ಕಂದಾಯ ಮಂತ್ರಿಯಾದಂತಹ ಸಂದರ್ಭದಲ್ಲಿ, ಗೋಮಾಳದ ಬಗ್ಗೆ ನಾವು ತಿರಸ್ಕಾರ ಮಾಡುತ್ತೇವೆ ಅರ್ಜಿಗಳನ್ನು; ಆದರೆ ತಿರಸ್ಕಾರ ಮಾಡುವುದು ಬೇರೆ ಆದರೆ ಅವರನ್ನು ಅಲ್ಲಿಂದ ಒಕ್ಕಲೆಬ್ಬಿಸುವುದು ಬೇರೆ. ಯಾವುದೇ ಊರಿನಲ್ಲಿ, ಬೆಂಗಳೂರಿನ ಹತ್ತಿರದಲ್ಲಿ ನಗರಜಿಲ್ಲೆ, ಗ್ರಾಮಾಂತರ ಜಿಲ್ಲೆಯಲ್ಲಿ ಒಂದು ಗುಂಡು ತೋಪು ಉಳಿದಿಲ್ಲ. ಒಂದೂ ಸ್ಮಶಾನ ಉಳಿದಿಲ್ಲ. ಒಂದು ಯಾವುದೇ ತರಹದ ಗೋಮಾಳ ಉಳಿದಿಲ್ಲ. ದನ ಕರ ಎಲ್ಲವೂ ಕೂಡ ಅವುಗಳನ್ನು ಕಟ್ಟಿ ಕೊಳ್ಳುವುದಕ್ಕೆ ಸಾಧ್ಯವಾಗದೇ ಇರುವ ರೀತಿ ಮೇಕೆ, ಆಡು, ಕುರಿ, ಈ ರೀತಿಯಾಗಿ ರೈತರ ಭವಣೆ ಎನ್ನತಕ್ಕಂಥಾದ್ದನ್ನು ಊಹಿಸಲಿಕ್ಕೆ ಅಸಾಧ್ಯವಾದಂತಹ ರೀತಿಯಲ್ಲಿ ನಮ್ಮಲ್ಲಿ ಇವತ್ತು ಭೂಮಿಯನ್ನು ಕಬಳಿಸುವಂತಹ ಪ್ರವೃತ್ತಿ ಮತ್ತು ದುರಾಸೆ ಬೆಳೆದು ಬಂದಿರತಕ್ಕಂಥಾದ್ದು, ಇದು ನಾಗರೀಕರಣದ ನೇರ ಪ್ರಭಾವ. ಇದನ್ನು ನಾವು ಕಾನೂನಿನ ಮೂಲಕ ಹತ್ತಿಕ್ಕುತ್ತೇವೆ ಎನ್ನತಕ್ಕಂಥ ಮಾತಲ್ಲ. ನಾನು ನನ್ನ ಕಡತದಲ್ಲಿ ಬರೆದಿದ್ದೇನೆ. ಒಂದು ಸಂದರ್ಭದಲ್ಲಿ 'the rejection of an application is not an eviction'. ಅಂತ ಬರೆದೆ ನಾನು. ನಾವು ಇವತ್ತು ಏನು ಗೋಮಾಳ ಕೊಡುವುದಕ್ಕೆ ಆಗುವುದಿಲ್ಲ. ಎಂದು ಹೇಳಿ ಅದನ್ನು ತಿರಸ್ಕರಿಸಬಹುದು. ಆದರೆ ತಿರಸ್ಕರಿಸಿದ್ದು ಕಾನೂನಿನ ಅಡಿಯಲ್ಲಿ ಮಾತ್ರ ತಿರಸ್ಕರಿಸಿದ್ದೇವೆ. ಆದರೆ ವಾಸ್ತವದಲ್ಲಿ ಆ ಮನುಷ್ಯ ಅಲ್ಲಿದ್ದಾನೆ. ಆ ಮನುಷ್ಯ ಅಲ್ಲಿ ಮನೆ ಕಟ್ಟಿದ್ದಾನೆ, ಆ ಮನುಷ್ಯ ಅಲ್ಲಿ ಇನ್ನೇನಾದರೂ ಬೇರೆ ಬೇರೆ ಪ್ಲಾಜಾಗಳನ್ನು ಕಟ್ಟಿದ್ದಾನೆ ಮತ್ತೊಂದು ಏನೋ ಮಾಡಿದ್ದಾನೆ, ಆದರೆ ಅಲ್ಲಿರತಕ್ಕಂಥ ನಮ್ಮ ಮೂಕ ಕುರಿಗಳಿಗೆ ಆಗಲಿ, ಮೇಕೆಗಳಿಗೆ ಆಗಲಿ, ರೈತನಿಗೆ ಆಗಲಿ ಯಾವ ತರಹದ ಅನುಕೂಲವಾಗಲಾರದಂತಹ ರೀತಿಯಲ್ಲಿ ಆಗಿದೆ. ನಾಗರೀಕರಣದ ದುಷ್ಪರಿಣಾಮ ಈ ತರಹದ ಭೂ ಹಗರಣಗಳು ಈ ಕಾರಣಕ್ಕಾಗಿಯೇ ಆಗುತ್ತದೆ. ಇದು ಎಲ್ಲ ದೇಶಗಳಲ್ಲಿ ಆಗಿರತಕ್ಕಂಥಾದ್ದು, ಬರೀ ನಮ್ಮ ಬೆಂಗಳೂರಿನಲ್ಲಿ ಮಾತ್ರ ಆಗಿದೆ ಎನ್ನತಕ್ಕಂಥ ಮಾತನ್ನು ನಾನು ಹೇಳುವುದಿಲ್ಲ. ಅದಕ್ಕೆ

ಒಂದು ರಾಜಕೀಯ ಇಚ್ಛಾಶಕ್ತಿ ಬೇಕು ಎಂದು ಹೇಳುತ್ತೇನೆ; ರಾಜಕೀಯ ಇಚ್ಛಾಶಕ್ತಿಯನ್ನು ನಾವು ಯಾವಾಗ ತೋರಿಸುವುದಕ್ಕೆ ಸಾಧ್ಯ? ಜನಸಾಮಾನ್ಯರು ಕಾನೂನಿಗೆ ಅನುಗುಣವಾಗಿ ನಡೆಯುವಂತಹ ಪ್ರವೃತ್ತಿಯನ್ನು ಬೆಳೆಸಿಕೊಂಡಿರತಕ್ಕಂಥ ಸಂದರ್ಭಗಳಲ್ಲಿ, ನಾವು ಶಾಸನ ಮಾಡತಕ್ಕಂಥವರು, ಮಂತ್ರಿಗಳಾಗತಕ್ಕಂಥವರು, ದೊಡ್ಡ ದೊಡ್ಡ ಅಧಿಕಾರದಲ್ಲಿರತಕ್ಕಂಥವರು ಉದ್ದಿಮೆಪತಿಗಳಾದಂತಹವರು, ಇಲ್ಲಿ ಸುಲಭವಾಗಿ ದುಡ್ಡು ಸಿಗುತ್ತದೆ ಎನ್ನುವ ಕಾರಣಕ್ಕಾಗಿ ಈ ಭೂ ಹಗರಣದಲ್ಲಿ ನಾವೇ ಕೈ ಹಾಕಿದಾಗ ಆಗ ನಾವು ಏನು ತೋರಿಸುತ್ತೇವೆ, ರಾಜಕೀಯ ಇಚ್ಛಾಶಕ್ತಿ ತೋರಿಸುತ್ತೇವೆ ಎನ್ನತಕ್ಕಂಥಾದ್ದು ಆತ್ಮ ವಂಚನೆಯಾಗುತ್ತದೆಯೆ ವಿನಹಃ ಮತ್ತೊಂದು ಆಗುವುದಿಲ್ಲ. ಆ ಕಾರಣಕ್ಕಾಗಿ ಇವತ್ತು ಬರೀ ಕಾನೂನಿನ ಮೂಲಕ ಇದನ್ನು ಸರಿಪಡಿಸುವುದಕ್ಕೆ ಆಗುವುದಿಲ್ಲ. ಇದರ ಜೊತೆಗೆ ನಾವು ಏನೇ ನಿರ್ಣಯಗಳನ್ನು ಮಾಡಿದರೂ ಕೂಡ ನಮ್ಮ ವಿಧಾನಸೌಧದ ಎದುರಿಗೆ ಒಂದು ಕೆಂಪು ಕಟ್ಟಡ ಇದೆ. ಆ ಕೆಂಪು ಕಟ್ಟಡ ಅನೇಕ ಸಂದರ್ಭಗಳಲ್ಲಿ ಕಾನೂನಿನ ಕೆಲವು ತಾಂತ್ರಿಕ ಕಾರಣಗಳಿಗಾಗಿ ಅವರು ತಡೆಯಾಜ್ಞೆಯನ್ನು ಕೊಡುತ್ತಾರೆ.

ಅಧ್ಯಕ್ಷರೇ : ಮಾನ್ಯ ಪ್ರಕಾಶ್‌ರವರೇ, ಸರ್ಕಾರ ಏನೂ ಮಾಡುವುದಕ್ಕೆ ಆಗುವುದಿಲ್ಲ ಎನ್ನುವುದು ತಮ್ಮ ಅಭಿಪ್ರಾಯವೇ? ಈಗ ಏನಾಗಿದೆ ನಾಗರೀಕರಣದ ಪ್ರಭಾವ ಇದು. ಸರ್ಕಾರ ಏನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದು ತಮ್ಮ ಮಾತಿನ ಇಂಗಿತವೇ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ.....

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಪ್ರಕಾಶ್‌ರವರೇ, ಒಂದು ನಿಮಿಷ ಈಲ್ಡ್ ಆದರೆ ಮಾತನಾಡುತ್ತೇನೆ. ಬಹುಶಃ ನಾನು ಏನೂ ಮಾತನಾಡಬಾರದು ಅಂತ ಮಾಡಿದ್ದೆ. ಮಾನ್ಯ ಪ್ರಕಾಶ್‌ರವರು ಮಾತನಾಡುವಾಗ ಕೆಲವು ಮಾತುಗಳನ್ನು ಹೇಳಿದರು, ಬಸವಣ್ಣನವರ ಉದಾಹರಣೆಗಳನ್ನೂ ಸಹ ನಡುವೆ ಕೊಟ್ಟುಕೊಂಡು ಬಂದರು. ಆಮೇಲೆ ಮಾನ್ಯ ಅಧ್ಯಕ್ಷರು ನೇರವಾಗಿಯೇ ತಮಗೆ ಹೇಳಿದ್ದಾರೆ. ಏನು ಒಕ್ಕಲಿಗರು ಮತ್ತು ಲಿಂಗಾಯಿತರು ಅಂತ. ಅವರ ಮುಖ್ಯಮಂತ್ರಿಗಳು ಒಕ್ಕಲಿಗರಿದ್ದಾರೆ ಲಿಂಗಾಯಿತರು ಉಪ ಮುಖ್ಯಮಂತ್ರಿಗಳಿದ್ದಾರೆ ಎನ್ನುವ ಮಾತನ್ನು ಅಧ್ಯಕ್ಷರು ನೇರವಾಗಿ ನಿಮಗೆ ಹೇಳಿದ್ದಾರೆ. ಬಸವಣ್ಣನವರು ಒಂದು ಕಡೆ ಹೇಳುತ್ತಾರೆ. "ನ್ಯಾಯ ನಿಷ್ಠೆ ನೀಪಾಕ್ಷಣಕರ ನಾನಲ್ಲವಯ್ಯ, ಲೋಕವಿರೋಧಿ ಶರಣನು ಯಾರಿಗೂ ಅಂಜುವವನಲ್ಲ, ಕೂಡಲಸಂಗಮ ದೇವನರಾಜ ದೇಹದಲ್ಲಿ ನಿರತನಾಗಿ" ಅಂತ ಬಸವಣ್ಣ ಹೇಳುತ್ತಾನೆ, ಹಾಗೆ ಏನಾದರೂ ತಾವು ದಾಕ್ಷಿಣ್ಯಕ್ಕೆ ಒಳಗಾಗಿದ್ದೀರೋ ಹೇಗೋ.

"ಅರು ಒಲೆದು ನಮ್ಮನ್ನು ಏನು ಮಾಡುವವರು, ಊರುಮುನಿದು ನಮ್ಮನ್ನು ಎಂತು ಮಾಡುವರು ಆನೆಯ ಮೇಲೆ ಹೋಗುವವರಿಗೆ ಶ್ವಾನಕಚ್ಚಬಹುದೇ ಆಯ್ಯಾ ಅಂತ ಹೇಳುತ್ತಾರೆ." ಈ ಕಾರಣದಿಂದ ಇವೆಲ್ಲಾ ಹೇಳುತ್ತೀರಿ ತಾವು: ನನಗೆ ಗೊತ್ತು ಇದೆ. ತಾವು ಬಹಳ ಬುದ್ಧಿವಂತರಿದ್ದೀರಿ, ಅದರಲ್ಲಿ ಏನೂ ಪ್ರಶ್ನೆ ಇಲ್ಲ. ಬಹಳ ಶಾಣೆ ತರಹ ಮಾಡಿ ನೀವು ಒಲ್ಲೆ ಅಂತ ಮನೆಯಲ್ಲಿ ಕುಳಿತರೂ ಸಹಿತ ಕರೆದುಕೊಂಡು ಬಂದು ಮುಂದೆ ಕೂರಿಸಿದ್ದಾರೆ. ನಮ್ಮನ್ನೆಲ್ಲಾ ಬಾಯಿ ಕಟ್ಟಿಸುವುದು: ನೀವೇ ಪ್ರಶ್ನೆ ಕೇಳುತ್ತೀರಿ, ನೀವೇ ಉತ್ತರ ಹೇಳಿಬಿಡುತ್ತೀರಿ. ಮುಂದೆ ನಮಗೆ ಏನೂ ಬರದಹಾಗೆ ಇದು ಈ ದಾಕ್ಷಿಣ್ಯಕ್ಕೆ ಒಳಗಾಗುತ್ತೀರೋ ಹೇಗೆ? ದಾಕ್ಷಿಣ್ಯಕ್ಕೆ ಒಳಗಾಗುವುದು ಸರಿಯೇ ಹೇಗೆ? ಅದು ಸಮ್ಮಿಶ್ರ ಸರ್ಕಾರ ಇರಬಹುದು ಅದು ಇನ್ನೊಂದು ಇರಬಹುದು, ಅಧಿಕಾರದ ಆಸೆಗಾಗಿ ತಮ್ಮ ತತ್ವ ನೀತಿ, ಸಿದ್ಧಾಂತಗಳನ್ನು ಬಿಟ್ಟು ನಾವು ಹೊಂದಿಕೊಳ್ಳಬೇಕೋ ಹೇಗೆ ಎನ್ನುವುದನ್ನು ಕೂಡ ತಾವು ಕ್ಲಿಯರ್ ಮಾಡಬೇಕು. ದಯಮಾಡಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಬಸವಣ್ಣನವರೂ ಕೂಡ ತಮ್ಮ ಪ್ರಾರಂಭದ ದಿಸೆಯಲ್ಲಿ ನಾನು ಜೋಳವಾಳಿಗೆ ಅಂತ ಹೇಳಿದರು. ಪ್ರಾರಂಭದ ಹಂತದಲ್ಲಿ ಅವರು ಮಂತ್ರಿಯಾಗುವುದಕ್ಕಿಂತ ಪೂರ್ವದಲ್ಲಿ ಆ ಅಧಿಕಾರ, ಮತ್ತು ಆ ಜನಪ್ರಿಯತೆ, ತಾವು ಭಾವಿಸಿದಂತಹ ಒಂದು ಸಮಾಜವನ್ನು ಕಟ್ಟಲಿಕ್ಕೆ ಬೇಕಾಗಿರತಕ್ಕಂಥಾದ್ದರಲ್ಲಿ ಅದೇ ಜಾಣತನ, ಅದೇ ಚತುರತೆ ಅಂತ ಹೇಳಿದ್ದು ನಾನು. ಆ ಚತುರತೆಯನ್ನು ಮಾಡಿಕೊಂಡು ಯಾಗ ಶರಣ ಸಮಾಜ ಎನ್ನುವುದು ದೊಡ್ಡದಾಯಿತು ಆಗ ದಾಕ್ಷಿಣ್ಯಪರನಲ್ಲ ಅಂತ ಹೇಳಿದ. ಅದಕ್ಕಿಂತ ಪೂರ್ವದಲ್ಲಿ ಪಂಪ ಹೇಳುತ್ತಾನೆ ಕುಲಂ ಕುಲ ಮಸ್ತು ಚಲಂ ಕುಲಂ ಎನ್ನತಕ್ಕಂಥ ಮಾತನ್ನು ಹೇಳುತ್ತಾನೆ. ಹಾಗೆಯೇ ಅಭಿಮಾನ ಒಂದೇ ಕುಲಂ, ಆಣ್ಮಕುಲಂ, ನನ್ನ ಆಣ್ಮ ಕುಲಂ ಯಾವುದು. ನನ್ನ ಅಭಿಮಾನವೇ ನನ್ನ ಕುಲ. ಆದರೆ ನಾವೆಲ್ಲಾ ಬಹಳ ಸಣ್ಣವರಾಗಿರುವುದರಿಂದ ನಾವು ಯಾವ್ಯಾವುದೋ ಕಾರಣಕ್ಕಾಗಿ ಜಾತಿ ಕಾರಣಗಳನ್ನು ಹಿಡಿದುಕೊಂಡು ಹೋಗುತ್ತೇವೆ. ಆದರೆ ಚತುರತೆ ಇದ್ದುದ್ದರಿಂದ ಬಸವಣ್ಣ ಉಳಿದುಕೊಂಡ, ಇಲ್ಲದಿದ್ದರೆ ಆತ ತನ್ನ ಶರಣಸಮಾಜ ಕಟ್ಟಲು ಆಗುತ್ತಿರಲಿಲ್ಲ. ಅದೂ ತಮಗೆ ಗೊತ್ತಿರುವ ವಿಷಯ. ಅವರ ಪ್ರಕಾರ ಈ ಯೋಜನೆ 1583.76 ಕೋಟಿ ರೂ.ಗಳದ್ದು. ಇದನ್ನು ಅವರು ಪರಿಕಲ್ಪಿಸಿಕೊಂಡು ಸರ್ಕಾರಕ್ಕೆ ತಂದಂತಹ ಸಂದರ್ಭದಲ್ಲಿ equity capital, promoter's contribution 33% Rs. 522 crores ಅಂತ ಅವರು ಹೇಳುತ್ತಾರೆ. ಮುಂದೆ ಅದು ಯಾಕೆ ಬದಲಾಯಿತು? 522 ಕೋಟಿ ರೂ. ಗಳ ನಮ್ಮದೇ ಬಂಡವಾಳ ಹಾಕಿ ಮಾಡುತ್ತೇವೆ ಅಂತ ಹೇಳಿ ಬಂದವರು ನೀವು ಈ ಭೂಮಿಯನ್ನು

ಕೊಡುವುದಿಲ್ಲ ಅಂದರೆ ನಾನು ಈ ಯೋಜನೆ ಕಾರ್ಯಗತಗೊಳಿಸಲು ಸಾಧ್ಯವಾಗುವುದಿಲ್ಲ, ನನಗೆ ಮಾರಾಟ ಅವಕಾಶ ಕೊಡಬೇಕು ಮತ್ತು ಆ ಮಾರಾಟ ಮಾಡಿದ ಹಣದಿಂದ ಈ ಯೋಜನೆಯನ್ನು ನಾನು ಕೈಗೊಳ್ಳಲು ಸಾಧ್ಯವಾಗುತ್ತದೆ ಅಂದರು. ಅಧ್ಯಕ್ಷರೇ, ತಾವು ಹೇಳಿದಂತೆ ಸರ್ಕಾರ ನಿರ್ವೀರ್ಯ ಅಂತ ಹೇಳುವುದಿಲ್ಲ. ಸರ್ಕಾರಕ್ಕೆ ತನ್ನದೇ ಅಧಿಕಾರ ಇದೆ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವ ಸಂದರ್ಭದಲ್ಲಿ......

ಅಧ್ಯಕ್ಷರು : ನನ್ನ ಮಾತಿನ ಸಾರಾಂಶ ಏನೆಂದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಏನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಕೆಲವು ಸಾರಿ ಎಂಬ ಭಾವನೆ ಬರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇವರು ಮಾಡಬೇಕೆಂದರೂ ಬಿಜೆಪಿಯವರು ಮಾಡಗೊಡುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ನಮ್ಮಿಬ್ಬರ ನಡುವೆ ಒಡಕು ತರುವ ಪ್ರಯತ್ನ ಏನೂ ಮಾಡಬೇಡಿ. ಅವರೂ ತಮ್ಮ ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ, ಯಾವುದೇ ಸಮ್ಮಿಶ್ರ ಸರ್ಕಾರದಲ್ಲಿ ಅವರು ಅವರ ಪಕ್ಷದ ನೀತಿ ಹೇಳಬಹುದು, ಆದರೆ ವ್ಯವಸ್ಥೆಯ ದುರವ್ಯವಸ್ಥೆಯಲ್ಲಿ ಒಮ್ಮೊಮ್ಮೆ ಸರ್ಕಾರಗಳು ತಮ್ಮ ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಲಿಕ್ಕೆ ಎಷ್ಟು ಕಷ್ಟವಾಗುತ್ತದೆ ಅಂತ ಹೇಳಿದೆ, ಆದರೆ ಇವತ್ತು ಅಂತಹ ರಾಜಕೀಯ ಇಚ್ಛಾಶಕ್ತಿ ತೋರಿಸುವ ಶಕ್ತಿ ಮಾನ್ಯ ಮುಖ್ಯಮಂತ್ರಿಗಳಿಗಿದೆ. ಅವರು ಮಾತನಾಡುವಾಗ ಅದನ್ನು ಹೇಳುತ್ತಾರೆ. 522 ಕೋಟಿ ರೂ. ಬಂಡವಾಳ ಹೂಡುತ್ತೇವೆಂದು ಬಂದವರು ಮಾಡಬೇಕಾಗಿತ್ತು, ಆದರೆ 2002 ಜೂನ್ 29ರಲ್ಲಿ ಈ ಕಾರಿಡಾರ್ ಯೋಜನೆ ಸಂಯೋಜಕರೇ ಅವರಿಗೊಂದು ಪತ್ರ ಬರೆಯುತ್ತಾರೆ. ಏನಂತ? "ಯೋಜನೆಯ ದಾಖಲಾತಿಗಳು ಜಮೀನು ಮತ್ತಿತರ ಯೋಜನಾ ಸವಲತ್ತುಗಳನ್ನು ನೈಸ್ ಕಂಪನಿ ಸಾಲ ಎತ್ತಲು ಹಣಕಾಸು ಸಂಸ್ಥೆಗಳಿಗೆ ಅಡವಿಡಲು. ಒತ್ತೆಯಿಡಲು ಸರ್ಕಾರದ ಅಭ್ಯಂತರವಿಲ್ಲ; ಹಾಗೆಯೇ ಒಂದು ವೇಳೆ ಯೋಜನೆ ಅರ್ಧದಲ್ಲೇ ನಿಂತಲ್ಲಿ, ಆಗ ಸಾಲ ನೀಡಿದ ಸಂಸ್ಥೆಗಳಿಗೆ ಸರ್ಕಾರವೇ ನೇರವಾಗಿ ಸಾಲ ತೀರುವಳಿ ಮಾಡುತ್ತದೆ" ಈ ಅಧಿಕಾರವನ್ನು ಈ ಸಂಯೋಜಕರಿಗೆ ಯಾರು ಕೊಟ್ಟರು? ಅವತ್ತಿನ ಸಚಿವಸಂಪುಟ ಸಭೆಯಲ್ಲಿ ಇದಕ್ಕೆ ಏನಾದರೂ ನಿರ್ಧಾರ ಆಯಿತೇ? ಈ ಒಂದು ಪತ್ರ ಬರೆಯ ಬೇಕಾಗಿದ್ದರೆ, ಈ ಪತ್ರದ ಹಿನ್ನೆಲೆಯಲ್ಲಿ ಅಥವಾ ನಂತರದ ದಿನಗಳಲ್ಲಿ ಕಂಫರ್ಟ್‌ಪತ್ರ ಕೊಟ್ಟಿದ್ದು ಆಯಿತು. ಮಾನ್ಯ ರಾಜಣ್ಣನವರು ಬಹಳ ಸೂಕ್ತ ವಿಚಾರಗಳನ್ನು ಎತ್ತಿದರು: Comfort letter is a totally different from a guarantee. ಅಂತ, ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ನೀವು ಏನೂ ಯೋಚನೆ

ಮಾಡಬೇಡಿ Be comfortable. If there is anything goes wrong, certainly here is a Government which takes care of it as a collateral security, or otherwise as a guarantor. ಈ ಮಾತುಗಳನ್ನೇ ಆ ಕಂಫರ್ಟ್‌ಲೆಟರ್‌ನಲ್ಲಿ ಬರೆದದ್ದು. ಅದರ ಜವಾಬ್ದಾರಿಯನ್ನು ಇವರೇ ಪರಿಭಾವಿಸಿಕೊಳ್ಳುತ್ತಾರೆ, ನೋಡಿ: ಸರ್ಕಾರವೇ ಇವರಾಗುತ್ತಾರೆ. ಈ ಪತ್ರದ ಆಧಾರದ ಮೇಲೆ ಅವರು 150 ಕೋಟಿ ರೂ. ಸಾಲವನ್ನು ತೆಗೆದುಕೊಳ್ಳುತ್ತಾರೆ. 'ಯೋಜನೆಯ ದಾಖಲಾತಿಗಳು ಮತ್ತು ಜಮೀನು ಮತ್ತಿತರ ಯೋಜನಾ ಸವಲತ್ತುಗಳನ್ನು ನೈಸ್ ಕಂಪನಿ ಸಾಲ ಎತ್ತಲು ಹಣಕಾಸು ಸಂಸ್ಥೆಗಳಿಗೆ ಅಡವಿಡಲು, ಒತ್ತೆಯಿಡಲು ಚಾರ್ಜ್ ಸೃಷ್ಟಿಸಲು ಸರ್ಕಾರದ ಅಭ್ಯಂತರವಿಲ್ಲ ಹಾಗೆಯೇ ಒಂದು ವೇಳೆ ಯೋಜನೆ ಅರ್ಧದಲ್ಲೇ ನಿಂತಲ್ಲಿ ಆಗ ಸಾಲ ನೀಡಿದ ಸಂಸ್ಥೆಗಳಿಗೆ ಸರ್ಕಾರವೇ ನೇರವಾಗಿ ಸಾಲ ತೀರುವಳಿ ಮಾಡುತ್ತದೆ ಎಂಬ ಸ್ಪಷ್ಟ ಭರವಸೆ ಪತ್ರ ಬರೆಯುತ್ತಾರೆ. ಇದಾದಮೇಲೆ ಐಸಿಐಸಿಐ ಬ್ಯಾಂಕ್ ಆ ದಾಖಲೆಗಳನ್ನಿಟ್ಟುಕೊಂಡು 150 ಕೋಟಿ ರೂ. ಗಳ ಸಾಲ ಕೊಡುತ್ತದೆ ಜನವರಿಯಲ್ಲಿ ಅದರ ಮಂಜೂರಾತಿಯಾಗುತ್ತದೆ. 522 ಕೋಟಿ ರೂ. ಗಳ ಬಂಡವಾಳವನ್ನು ನಾನು ಈ ಯೋಜನೆಯನ್ನು ರೂಪಿಸಿರುವ ಮೂಲಕರ್ತೃವಾಗಿ ಬಂಡವಾಳ ತೊಡಗಿಸುತ್ತೇನೆ, Promotor's contribution is 33% of the total project cost - ಅಂತ ಹೇಳಿದ ಮನುಷ್ಯ 150 ಕೋಟಿ ರೂ. ಗಳನ್ನು ಕೊಂಡೊಯ್ದು ನಾವು 10 ರೂ. ಗೆ ಕೊಟ್ಟಿರುವ ನಮ್ಮದೇ ಸರ್ಕಾರಿ ಭೂಮಿ ಇನ್ನೂ ಕೂಡ ಸರ್ಕಾರದ ದಾಖಲಾತಿಗಳಲ್ಲಿದೆ ನಮ್ಮ ಪಹಣಿ ಪತ್ರಿಕೆಯಲ್ಲಿದೆ, ರೆಕಾರ್ಡ್ ಆಫ್‌ರೈಟ್ಸ್‌ನಲ್ಲಿ ಬದಲಾವಣೆಯಾಗಿಲ್ಲ. ಅದರಲ್ಲಿ ಬದಲಾವಣೆ ಆಗದೇ ಇದ್ದರೂ ಕೂಡ ಐಸಿಐಸಿಐ ಬ್ಯಾಂಕಿಗೆ ಅಡವಿಟ್ಟು 150 ಕೋಟಿ ರೂ. ತೆಗೆದುಕೊಳ್ಳುತ್ತಾರೆ. ಜನವರಿಯಲ್ಲಿ ಕೊಟ್ಟಿರತಕ್ಕಾ ಹಣದಲ್ಲಿ ಕೇವಲ 10 ಕೋಟಿ ರೂ. ಯನ್ನು ಫೆಬ್ರವರಿಯಲ್ಲಿ ನಮಗೆ ಕಟ್ಟುತ್ತಾರೆ. ಕೆಐಎಡಿಬಿ ನಿಯಮಗಳ ಪ್ರಕಾರ ಯಾವುದಾದರೂ ಭೂಮಿಯನ್ನು ಖಾಸಗಿಯವರ ಪರವಾಗಿಯೋ ಕೈಗಾರಿಕೆ ಉದ್ದೇಶಕ್ಕೋ ಅಥವಾ ಅಭಿವೃದ್ಧಿಪರ ಯೋಜನೆಗಳಿಗಾಗಿಯೋ ಭೂಸ್ವಾಧೀನ ಪ್ರಕ್ರಿಯೆಯನ್ನು ನಾವು ಪ್ರಾರಂಭ ಮಾಡುವಾಗ ಅಂದಾಜಿಸಲಾದ ಮೊತ್ತದ 50 ಭಾಗವನ್ನು ಕಟ್ಟಬೇಕು ಅಂತ ನಿಯಮವಿದೆ. ಆದರೆ ಆ ಯಾವುದೇ ನಿಯಮವನ್ನು ಪರಿಪಾಲಿಸಿಲ್ಲ. ಅದರೂ ಈ ಯೋಜನಕಾರರು ಮುಂದೆ ನಾವು ಕೊಟ್ಟಿರುವುದರಲ್ಲೇ ರೂ. 150 ಕೋಟಿ ಕಟ್ಟಿ ನಂತರ ಫೆಬ್ರವರಿ 2003ರಲ್ಲಿ 10 ಕೋಟಿ ರೂ ಗಳನ್ನು ಕಟ್ಟುತ್ತಾರೆ. ನಂತರ 20 ಕೋಟಿ ರೂ. ಕಟ್ಟಿದ್ದಾರೆ ಅಂತ ಕೆಲವರು ಹೇಳುತ್ತಾರೆ, 70 ಕೋಟಿ ರೂ. ಕಟ್ಟಿದ್ದಾರೆ ಅಂತ ಕೆಲವರು ಹೇಳುತ್ತಾರೆ ಅದು

ಕಾಗದಪತ್ರಗಳನ್ನು ನೋಡಿದಾಗ ಯಾರಿಗಾದರೂ ಗೊತ್ತಾಗುತ್ತದೆ. ಆದರೆ ಅವರೇ ಹೇಳುತ್ತಾರೆ. 41 ಕೋಟಿ ರೂ ಗಳನ್ನು ಯೋಜನೇತರ ವೆಚ್ಚಕ್ಕಾಗಿ ಬಳಸಿದ್ದೇವೆ ಅನ್ನುವ ಮಾತನ್ನು ಹೇಳುತ್ತಾರೆ. ಆ ಯೋಜನೇತರ ವೆಚ್ಚ ಅಂದರೆ ಏನು? ವಕೀಲರಿಗೆ ಕೊಟ್ಟಿದ್ದೋ, ಮತ್ತೊಂದೋ ಮಗದೊಂದೊ ಏನಾದರೂ ಇರಬಹುದು. ಇಲ್ಲ ಅಂತಲೂ ಹೇಳುವುದಕ್ಕಾಗುವುದಿಲ್ಲ. ಯೋಜನೇತರ ವೆಚ್ಚಕ್ಕಾಗಿ ಇವರು 41 ಕೋಟಿ ರೂ. ಖರ್ಚುಮಾಡಿ, ಮುಂದೆ ಸಾಲವನ್ನು ತೀರಿಸುವಂಥ ಜವಾಬ್ದಾರಿಯನ್ನು ಸರ್ಕಾರ ಹೊತ್ತುಕೊಂಡರೆ ಈ ಎಲ್ಲಾ ದುಬಾರಿ ವೆಚ್ಚವನ್ನು ನಾವು ಹೊತ್ತುಕೊಳ್ಳಬೇಕೆ? ಐದೂವರೆ ಕೋಟಿ ಕನ್ನಡಿಗ ಇದಕ್ಕೆ ಪಾಲುದಾರನಾಗುತ್ತಾನೆ. ಇಲ್ಲಿ ಆ ಸರ್ಕಾರ ಈ ಸರ್ಕಾರ ಅವರಿದ್ದರು ಇವರಿದ್ದರು ಅಂತ ಕೆಸರನ್ನು ಎರಚುವಂಥ ಕೆಲಸ ಕಾರ್ಯಗಳನ್ನು ನಾವು ಇಲ್ಲಿ ಮಾಡಲಿಕ್ಕೆ ಮಾಡುತ್ತಿಲ್ಲ. ಆದರೆ ನಡೆದಿರುವ ಘಟನಾವಳಿಗಳು ಏನಿವೆ ಅವನ್ನು ತಾವು ಯೋಚನೆ ಮಾಡಿದರೆ ಮತ್ತೆ ನಾನು ಶೇಕ್ಸ್‌ಪಿಯರನ ಮಾತನ್ನೇ ಹೇಳಬೇಕಾಗುತ್ತದೆ: ಹ್ಯಾಮ್ಲೆಟ್ ಹೇಳುತ್ತಾನೆ: All is not well in the state of Den Mark ಅಂತ ನಮ್ಮ ಸರ್ಕಾರ ಅವರ ಸರ್ಕಾರ ಅನ್ನುವುದಕ್ಕೆ ಹೆಚ್ಚಾಗಿ ಇದ್ಯಾವುದೂ ಕೂಡ ಸಕ್ರಮವಾಗಿ ಆಗಿಲ್ಲ. ಒಂದೇ ಒಂದು ಪೈಸೆ ಸರ್ಕಾರದ ಹಣ ಹಾಕದೆ ಉದಾರೀಕರಣ ಜಾಗತೀಕರಣ ಹಿನ್ನೆಲೆಯಲ್ಲಿ ನಾಗಾಲೋಟದಲ್ಲಿ ಕರ್ನಾಟಕದಲ್ಲಿ ಅಭಿವೃದ್ಧಿಪಥದಲ್ಲಿ ಕೊಂಡೊಯ್ಯುವಾಗ ಸಾರಿಗೆ ಕೂಡ ಬಹಳ ಮುಖ್ಯವಾದದ್ದು ಎಂಬ ಕಾರಣಕ್ಕಾಗಿ ಅವತ್ತಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ದೇವೇಗೌಡರು ಈ ಯೋಜನೆಯನ್ನು ರೂಪಿಸಿ ಅದಕ್ಕೆ ಹಸಿರು ನಿಶಾನೆ ಕೊಟ್ಟಿದ್ದಾರೆ. ಅಲ್ಲಿ ಹೇಳಿದರು, ಸರ್ಕಾರದ ಒಂದು ರೂ. ಅನ್ನೂ ಹಾಕುವ ಪ್ರಶ್ನೆ ಉದ್ಭವವಾಗುವುದಿಸಲ್ಲ. ಈ ಯೋಜನೆಯ ಸಂಪೂರ್ಣ ವೆಚ್ಚವನ್ನು ನೀವೇ ಭರಿಸಬೇಕು. ನಂತರ ಅವರು ಕರ್ನಾಟಕದ ಈ ಕಾರ್ಯಕ್ರಮದಲ್ಲಿ ಸರ್ಕಾರದಲ್ಲಿ ಇರಲಿಲ್ಲ. ಮತ್ತೆ ಅವರು 2004ರಲ್ಲಿ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಪ್ರಸ್ತಾಪಿಸಿದಂತೆ ಗವರ್ನರ್‌ಗೊಂದು ಮೆಮೊರ್ಯಾಂಡಂ ಕೊಟ್ಟರು. ಕನಕಪುರದ ಲೋಕಸಭಾ ಸದಸ್ಯರಾಗಿ ಆಯ್ಕೆ ಯಾದಾಗ ಗ್ರಾಮಾಂತರ ಪ್ರದೇಶದಲ್ಲಿರುವಂಥ ಬಿಡದಿ, ರಾಮನಗರ, ಚನ್ನಪಟ್ಟಣ, ಮುಂತಾದ ಪ್ರದೇಶಗಳಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಭೂಸ್ವಾಧೀನ ಪ್ರಕ್ರಿಯೆಯನ್ನು ಮಾಡಿಕೊಂಡು ಯೋಜನೆಯ ರೂಪರೇಷೆಗೂ ಸುಮಾರು 35 ಸಾವಿರ ಎಕರೆಯಷ್ಟು ಭೂಮಿಯನ್ನು ತೆಗೆದುಕೊಳ್ಳಬೇಕು ಅನ್ನುವ ಯೋಜನೆಗೂ 29 ಸಾವಿರ ಎಕರೆಗಿಂತ ಹೆಚ್ಚಿನದಕ್ಕೆ ಅಧಿಸೂಚನೆ ಹೊರಡಿಸಿರುವುದರ ನಡುವಿರುವ ತಾರತಮ್ಯವನ್ನು ಕಂಡಾಗ ಮತ್ತು ಬಿಡದಿಯವರೆಗಿನ ರಸ್ತೆಯ ಆಜುಬಾಜಿನಲ್ಲಿ ಯಾವುದೇ ನಗರವನ್ನು

ತರಬಾರದು. ಏಕೆಂದರೆ ಯೋಜನೆಯ ಮೂಲ ಉದ್ದೇಶಗಳಲ್ಲಿ ಇದೂ ಒಂದು. ಬೆಂಗಳೂರು ನಗರದಲ್ಲಿ ವಿಪರೀತವಾಗಿ ಬೆಳೆಯುತ್ತಿರುವ ಜನಸಂಖ್ಯೆ ಮತ್ತು ವಾಹನಗಳ ಸಾಂದ್ರತೆಯಿಂದ ಇಲ್ಲಿ ಉಸಿರುಗಟ್ಟುವಂತಹ ವಾತಾವರಣ ಸೃಷ್ಟಿಯಾಗುವುದರಿಂದ ಇದಕ್ಕೆ ಒಳ್ಳೆಯ ರಸ್ತೆಗಳನ್ನು ಮಾಡಬೇಕಾಗುತ್ತದೆ ಎಂಬ ಕಾರಣಕ್ಕಾಗಿ ಪಕ್ಕದ ಭೂಮಿಗಳನ್ನು ಮಾರಾಟ ಮಾಡಬಾರದು ಎಂಬ ಷರತ್ತಿದೆ; ಅಂದರೆ ಬಿಡದಿಯಲ್ಲಿ ಎರಡು, ರಾಮನಗರದಲ್ಲಿ 2 ಶ್ರೀರಂಗಪಟ್ಟಣದಲ್ಲಿ 1 ನೀವು ಉಪನಗರಗಳನ್ನು ಕಟ್ಟಿಕೊಳ್ಳಬಹುದು ಹಾಗೆ ಕಟ್ಟಿದ್ದರಲ್ಲಿ ಶೇಕಡಾ 45ರಷ್ಟನ್ನು ನೀವಿಟ್ಟುಕೊಂಡು ಮಾರಾಟ ಮಾಡಿಕೊಳ್ಳಬಹುದು ಶೇಕಡಾ 55ರಷ್ಟನ್ನು ಅಭಿವೃದ್ಧಿಪಡಿಸಿದ ರೀತಿಯಲ್ಲಿ ಸರ್ಕಾರಕ್ಕೆ ವಾಪಸ್ ಕೊಡಬೇಕು ಅಂತ. ದಿವಂಗತ ಜೆ.ಎಚ್. ಪಟೇಲರೂ ಕೂಡ ಯಾವ ತಪ್ಪನ್ನೂ ಮಾಡಿಲ್ಲ. ಅವರ ಕಾಲದಲ್ಲಿ ಕೂಡ 10 ರೂ. ಗೆ ಒಂದು ಎಕರೆ ಕೊಡುವ ಗುತ್ತಿಗೆ ಒಪ್ಪಂದ ಆದಾಗಲೂ ಕೂಡ 30 ವರ್ಷಗಳ ನಂತರ ಆ ಭೂಮಿ ವಾಪಸ್ ಸರ್ಕಾರಕ್ಕೆ ಬರಬೇಕು ಎಂಬ ಷರತ್ತನ್ನು ಹಾಕಿದ್ದಾರೆ; ಮಾನ್ಯ ದೇಶಪಾಂಡೆಯವರು ಅವತ್ತು ಕೈಗಾರಿಕಾ ಸಚಿವರಾಗಿದ್ದರು ಅದರರ್ಥವೇನು? ಸದುದ್ದೇಶ; ಯಾವುದೇ ಕಾರಣಕ್ಕಾಗಿ ಲಾಭ ಒಬ್ಬರ ಕೈಗೇ ಹೋಗಬಾರದು ಅಂತ, ನಾವು ಒಪ್ಪಿಕೊಂಡಿದ್ದ ಉದ್ದೇಶ ಯಾವುದು? ಯಾರಾದರೂ ಬಂದು ಇಲ್ಲಿ ಕಾರ್ಖಾನೆ ಅಥವಾ ಯೋಜನೆ ಮಾಡುತ್ತೇವೆ ಅಭಿವೃದ್ಧಿ ತರುತ್ತೇವೆ ಅಂದರೆ ಆತ ಅದನ್ನು ಒಂದು ಉದಾರವಾಗಿ, ದಾನವಾಗಿ ಮಾಡುತ್ತೇನೆ ಚಾರಿಟಬಲ್ ಪರ್ಪಸ್‌ಗಾಗಿ ಬರುತ್ತೇನೆ ಅಂತ ಹೇಳುವುದಿಲ್ಲ. ಅವರೂ ಲಾಭ ಮಾಡಿಕೊಳ್ಳುವುದು ಅಗತ್ಯ ಅನಿವಾರ್ಯ; ವ್ಯಾಪಾರದಲ್ಲಿ ಅವರು ಇರಬೇಕಾಗುತ್ತದೆ. ಅವರನ್ನು ನಾವು ಮೆಚ್ಚುತ್ತೇವೆ ಎಷ್ಟಕ್ಕೆ? ನೀವು ಹಾಕಿದ ಬಂಡವಾಳಕ್ಕೆ ಶೇಕಡಾ 16, 17ರಷ್ಟು ದುಡ್ಡು ನಿಮಗೆ ವಾಪಸ್ ಬರಬೇಕು. ಆ 16–17 ಪರ್‌ಸೆಂಟ್ ದುಡ್ಡು ಬರುವ ರೀತಿಯಲ್ಲಿ ನೀವು ಇದನ್ನೆಲ್ಲಾ ಮಾಡಿ ಎನ್ನುವಂಥ ಮಾತನ್ನು 2004ರಲ್ಲಿ ಲೋಕಸಭಾ ಸದಸ್ಯರಾದ ಮಾನ್ಯ ದೇವೇಗೌಡರು ಮೆಮೊರಾಂಡಂನ್ನು ಕೊಡುವುದರ ಮೂಲಕವಾಗಿ ಅವತ್ತಿನ ದಿವಸ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದಾದನಂತರ ಇದೆಲ್ಲಾ ನಡೆದಿರುವ ಘಟನೆಗಳನ್ನು ತಾವು ಕಂಡಿದ್ದೀರಿ. ಇನ್ನು ಇಂತಹ ಅನೇಕ ವಿಚಾರಗಳು, ವೈಫಲ್ಯಗಳು ಎಲ್ಲೆಲ್ಲಿ ಆಗಿವೆ, ಏನು ಕತೆ ಎನ್ನುವುದನ್ನೂ ಕೂಡ ನಾನು ಹೇಳಬಹುದು. ಆದರೆ ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಅವರು ಉತ್ತರ ಕೊಡತಕ್ಕಂಥದ್ದು ಇದೆ. ಸರ್ಕಾರ ಯಾವಾಗಲೂ ಕೂಡ ಕೈಕಟ್ಟಿಕೊಂಡು ಕುಳಿತುಕೊಳ್ಳಬೇಕಾದಂಥ ಅಗತ್ಯತೆ ಇಲ್ಲ. ಅದಕ್ಕೆ ಸಾರ್ವಭೌಮತ್ವವೂ ಇದೆ. ಅಧಿಕಾರವೆಂದರೆ ಅಧಿಕಾರದ ಚಲಾವಣೆ. ಆ ಅಧಿಕಾರದ

ಚಲಾವಣೆಯಲ್ಲಿ ಕಾಠಿಣ್ಯತೆ, ಮತ್ತು ಮೃದತ್ವ ಎರಡನ್ನೂ ಜೊತೆಗೆ ಇಟ್ಟುಕೊಳ್ಳಬೇಕಾಗಿರತಕ್ಕಂಥದ್ದು. ಮೃದತ್ವ ಅಭಿವೃದ್ಧಿ ದೃಷ್ಟಿಕೋನದ ಪರವಾಗಿ; ಕೆಲವು ಉದಾರವಾಗಿರುವ ಷರತ್ತುಗಳು ಮತ್ತು ಅವರಿಗೆ ಬೇಕಾಗಿರುವ ಸೌಕರ್ಯಗಳನ್ನು ಕಲ್ಪಿಸಿಕೊಡತಕ್ಕಂಥದ್ದು. ಕಠಿಣತೆ ಅದನ್ನು ಮೀರಿ ಹೊರಗಡೆ ಹೋದಾಗ ಕಾನೂನಿನ ಪ್ರಕಾರ ಕ್ರಮವನ್ನು ಕೈಗೊಳ್ಳತಕ್ಕದ್ದು. ಈ ಸರ್ಕಾರ. ಕಾನೂನಿನ ಪ್ರಕಾರ ಕೈಗೊಳ್ಳಬೇಕಾಗಿರತಕ್ಕದ್ದರಲ್ಲಿ ಮಾನ್ಯ ಸದಸ್ಯರು ಅದರಲ್ಲಿ ಹಿರಿಯರಾಗಿರುವ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇನ್ನೂ ಅನೇಕ ಸದಸ್ಯರು ಕೂಡ ಹೇಳಿದರು. ಒಂದು, ನೀವು ಭೂಮಿಯನ್ನು ರೈತರಿಗೆ ವಾಪಸ್ ಕೊಡಬಹುದು. ಅದು ಒಂದು ಸಲಹೆ. ಆ ತರಹದ ನಿರ್ಣಯ ಪ್ರಕ್ರಿಯೆ ಎನ್ನುವುದು ಸಂಪೂರ್ಣ ಮುಗಿದಾಗ ಲ್ಯಾಂಡ್ ಅಕ್ವಿಜಿಷನ್ ಆ್ಯಕ್ಟ್ ಕೆಳಗೆ ಸೆಕ್ಷನ್ 48ರ ಕೆಳಗೆ ಅದೆಲ್ಲಾ ಮುಕ್ತಾಯವಾಯಿತೆಂದಾಗ ನಾವು ಅದನ್ನು ಮತ್ತೆ ವಾಪಸ್ ಕೊಡುವುದಕ್ಕಾಗುತ್ತಾ? ಅದಕ್ಕೆ ಬೇರೆ ಕಾರಣಗಳೂ ಕೂಡ ಇವೆ. ಮತ್ತೆ ಮಾನ್ಯ ಮಾಧುಸ್ವಾಮಿಯವರು ಒಂದು ಮಾತನ್ನು ಹೇಳಿದರು. ಸೆಕ್ಷನ್ 28(4)ರ ಕೆಳಗೆ ಕೆಐಎಡಿಬಿ ಪ್ರಕ್ರಿಯೆ ಎನ್ನುವುದು ಮುಗಿಯದೇ ಇದ್ದಾಗ ಪ್ರಾಥಮಿಕ ನೋಟೀಸ್...

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, 28(4) ನೋಟಿಫಿಕೇಷನ್ ಮಾಡುವುದಕ್ಕೇ ಬರುವುದಿಲ್ಲವೆಂದು ನಾನು ನಿಮಗೆ ಹೇಳಿದ್ದೆ. 28(4) is the final notification. ಆ 28(4) ಕೆಳಗೆ 2500 ಚಿಲ್ಲರೆ ಲ್ಯಾಂಡ್ ಅಕ್ವೈರ್ ಆಗಿದೆ. That we cannot do. ಅದರಲ್ಲಿ 1035 ಅಷ್ಟೇ ನಾವು ಹ್ಯಾಂಡ್ ಓವರ್ ಮಾಡಿದ್ದೇವೆ. ಅದು ನನ್ನ ಮಾಹಿತಿ. If you are right, you just check up. ಬಾಕಿ 1500 ಎಕರೆಯನ್ನು ಹ್ಯಾಂಡ್ ಓವರ್ ಮಾಡಿಲ್ಲ. It is still with the KIADB. So if you find it as excess, you can say no. 28:1 ಕೆಳಗೆ ಏನು ಎಕ್ಸೆಸ್ ಲ್ಯಾಂಡ್ 6600ನ್ನು ನಾನು ಕೊಡಿಸಿದ್ದೆ. ಅದರಲ್ಲಿ 2700 ಎಕರೆ ಆ ಟೈಮಲ್ಲಿ ನಾವೇ de-notify - ಮಾಡಿದ್ದೇವೆ. ಬಾಕಿ ಉಳಿದ 3600 ಇವತ್ತು ಸಂಜೆ ಒಳಗೂ ನೀವು ಮಾಡಬಹುದು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೇ, ನಿನ್ನೆ ಅದನ್ನು ಹೇಳಿದೆವು. beyond 21,193 ಅದರ ಬಗ್ಗೆ ಚರ್ಚೆ ಇಲ್ಲ. ಮಾನ್ಯ ದೇಶಪಾಂಡೆಯವರು ಹೇಳಿದ ಹಾಗೆ ಅಕ್ವಿಜಿಷನ್ ಅಷ್ಟಾಗಿಲ್ಲ. ಫೈನಲ್ ನೋಟೀಫಿಕೇಷನ್ 28(4) ಆಗಿಲ್ಲ. ಆದ್ದರಿಂದ ಉಳಿದದ್ದನ್ನು ಅಕ್ವಿಜಿಷನ್ ಮಾಡುವಾಗಲೇ ನೀವು ಡ್ರಾಪ್ ಮಾಡುತ್ತಾ ಬನ್ನಿ. You

have got powers. ಅದನ್ನೇ ಏಕೆ ಪುನಃ ಫರ್ದರ್ ಪ್ರೊಸೀಡ್ ಆಗುತ್ತೀರಿ? ದಯವಿಟ್ಟು ಇದರ ಮೇಲೆ ಕ್ರಮ ತೆಗೆದುಕೊಳ್ಳಿ.

ಶ್ರೀ ಎಂ.ಪಿ. ಪ್ರಕಾಶ್ : ನಾನು ಒಪ್ಪಿಕೊಳ್ಳುತ್ತೇನೆ. ನಾನು ಹೇಳುವಾಗ 28:4ರ ಬಗ್ಗೆ ತಪ್ಪಾಗಿ ಹೇಳಿದೆ. 28:4ರ ಪ್ರಕ್ರಿಯೆ ಸಂಪೂರ್ಣವಾಗದೇ ಇದ್ದ ಸಂದರ್ಭಗಳು ಎಲ್ಲಿ ಇರುತ್ತವೆ, ಆ ಸಂದರ್ಭದಲ್ಲಿ ನೀವು ಹೇಳಿದಂತೆ ಭೂಮಿಯನ್ನು ಅವರಿಗೆ ವಾಪಸ್ ಕೊಡಬಹುದು ಎನ್ನುವ ಮಾತನ್ನು ತಾವು ಹೇಳಿದ್ದೀರಿ. ನನಗೆ ಇದರಲ್ಲಿ ಒಂದು ಸಣ್ಣ ಅನುಮಾನ ಇದೆ. ಏನೆಂದರೆ ಅದನ್ನು ನಿರ್ಣಯ ಮಾಡತಕ್ಕ ಒಬ್ಬ ಅಧಿಕಾರಿ ಏನು ಇರುತ್ತಾರೆ, ಅವರು ಕ್ವಾಸಿ ಜ್ಯುಡಿಷಿಯಲ್ ಆಗಿ ಕೂತಿರುತ್ತಾರೆ. ಅವರ ಮೂಲಕವೇ ಆಜ್ಞೆ ಮಾಡಿಸಬೇಕಾಗುತ್ತದೆಯೇ ವಿನಃ ಸರ್ಕಾರ ಅದರಲ್ಲಿ ನೇರವಾಗಿ ಹೇಳುವುದಕ್ಕಾಗುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ. ಅದನ್ನು ಕಾನೂನು ತಜ್ಞರ ಮೂಲಕ ಅಥವಾ ನಮ್ಮ ಹಿರಿಯ ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿ....

ಶ್ರೀ ಆರ್.ವಿ. ದೇಶಪಾಂಡೆ : ಪ್ರೊಸೀಜರ್ ಬಹಳ ಸಿಂಪಲ್ ಇದೆ. ಒಂದು ಮಾತನ್ನು ಹೇಳುತ್ತೇನೆ, ಕೆಐಎಡಿಬಿ ಯಲ್ಲಿ ಲ್ಯಾಂಡ್ ಅಕ್ವಿಜಿಷನ್ ಚೀಫ್ ಮಿನಿಸ್ಟರ್, ಮಿನಿಸ್ಟರ್‌ಗಳು ಕೂತು ವಿಧಾನಸೌಧದಲ್ಲಿ ಮಾಡುವುದಿಲ್ಲ. ಒಂದು ಪ್ರೊಸೀಜರ್ ಇರುತ್ತದೆ. ಪ್ರಪೋಸಲ್ ಬರುತ್ತದೆ. ಸ್ಪೆಷಲ್ ಡಿಸಿ ನೋಡುತ್ತಾನೆ It goes to the KIADB Board. There are 6 IAS Officers, they sent it to the Secretariat. ಪ್ರಿನ್ಸಿಪಲ್ ಸ್ಕ್ರೆಟರಿ ಎಲ್ಲಾ ನೋಡಿ 28(1) ನೋಟಿಫಿಕೇಷ ನನ್ನು ಗೌರ್‍ನಮೆಂಟ್ ಮಾಡುತ್ತದೆ. 28(4) ನೋಟಿಫಿಕೇಷನನ್ನು ಫೈನಲ್ ಗೌರ್‍ನಮೆಂಟ್ ಮಾಡುತ್ತದೆ. ಅದರ 28:1ರಲ್ಲಿ ಐಡೆಂಟಿಫೈ ಮಾಡಿದ ನಂತರ ಇವತ್ತು ಅಲೈನ್‌ಮೆಂಟೂ ರೆಡಿಯಾಗಿರಬಹುದು. ಆ ಆಲೈನ್‌ಮೆಂಟ್ ಪ್ರಕಾರ ಪಿಡಬ್ಲ್ಯೂಡಿ can identify which is the excess/land ಆ ಎಕ್ಸೆಸ್ ಲ್ಯಾಂಡ್ ಬಗ್ಗೆ ಪಿಡಬ್ಲ್ಯೂಡಿ can intimate C.I. and C.I Department can de-notify these lands.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಈಗ ಅರ್ಕಾವತಿಯಲ್ಲಿ ಮಾಡಿದ್ದಾರೆ ನೋಡಿ. ಅಲ್ಲಿ ಹೇಗೆ ಮಾಡಿದ್ದಾರೆ ಎಂಬುದನ್ನು ನೋಡಿ ಅದನ್ನೇ ಫಾಲೋ ಮಾಡಿ.

ಶ್ರೀ ಎಂ.ಪಿ. ಪ್ರಕಾಶ್ : ಅದೇ ಮಾತು ನನಗೂ ಗೊತ್ತಾಗುತ್ತಿರುವುದರಿಂದ ಹೇಳುತ್ತಿದ್ದೇನೆ. There are 2 doubts. ಏಕೆಂದರೆ ಅವಸರ ದಲ್ಲಿ ಮಾಡಬಾರದು ಎನ್ನುವ ಮಾತನ್ನೆಲ್ಲಾ ನೀವು ಹೇಳಿರುವುದರಿಂದ, ಒಂದು straightaway the Government by its authority it can withdraw the notification

itself. Then there won't be any proposals before the Land Acquisition Officer.

ಶ್ರೀ ಜೆ.ಸಿ. ಮಾಧುಸ್ವಾಮಿ : ಕೆಐಎಡಿಬಿ ಪ್ರಕಾರ ಎರಡು ವರ್ಷದಲ್ಲಿ ಅದು ವಿಷಿಯೇಟೇ ಆಗಬೇಕಲ್ಲಾ.

Sri R.V. Deshpande: Under the Land Acquisition Act 1984, 11A, there is a provision to vitiate. ಎರಡು ವರ್ಷದೊಳಗಾಗಿ ಕಂಪ್ಲೀಟ್ ಆಗಲಿಲ್ಲವೆಂದರೆ ಅಟೋಮ್ಯಾಟಿಕ್ ಆಗಿ ವಿಷಿಯೇಟ್ ಆಗುತ್ತದೆ. Unfortunately KIADB ಆ್ಯಕ್ಟ್‌ನಲ್ಲಿ ವಿಷಿಯೇಟ್ ಆಗುವುದು 11(ಎ) ಎಂದು ಪ್ರಾವಿಷನ್ ಇಲ್ಲ. ನಾನು ಮಂತ್ರಿಯಾಗಿದ್ದಾಗ ಒಂದು ಡೈರೆಕ್ಷನನ್ನು ಕೊಟ್ಟಿದ್ದೇ ಅಂತಹ ಪ್ರಾವಿಷನನ್ನು ಮಾಡಿ ಅಂತ.

ಶ್ರೀ ಜೆ.ಸಿ. ಮಾಧುಸ್ವಾಮಿ : ಈಗ ಫೈನಲ್ ನೋಟೀಫಿಕೇಷನ್ ಆಗಿದ್ದನ್ನು ಕೈಬಿಟ್ಟು ಬಿಡಿ, ಬೇಕಾದರೆ ಫ್ರೆಷ್ ನೋಟೀಪೀಕೇಷನ್ ಮಾಡಿ. ಅವರಿಗೆ ಪರಿಹಾರವಾದರೂ ಜಾಸ್ತಿ ಬರುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಮಾಧುಸ್ವಾಮಿಯವರ ಮಾತನ್ನು ಮತ್ತು ಮಾನ್ಯ ದೇಶಪಾಂಡೆಯವರ ಮಾತನ್ನು ಒಪ್ಪುತ್ತೇನೆ. ಸರ್ಕಾರ ಒಂದು ನಿರ್ಣಯಕ್ಕೆ ಬಂದಾಗ ನೀವೆಲ್ಲಾ ಸಲಹೆ ಮಾಡುತ್ತಿರುವಂಥದ್ದಕ್ಕೆ in principle, we may agree. But the question of details, ನಾವು ಹಿರಿಯ ಅಧಿಕಾರಿಗಳ ಜೊತೆ, ಕಾನೂನಿನ ತಜ್ಞರ ಜೊತೆ ಮಾತನಾಡಿ, we will certainly take it. Suppose you now say, ಈಗ ನಮ್ಮಲ್ಲಿ 4(1) ನೋಟೀಫಿಕೇಷನ್ ಒಂದು ವರ್ಷದಲ್ಲಿ ಆಗದಿದ್ದರೆ, it gets vitiated under the Land Acquisition Act. ಆದರೆ ಇದರಲ್ಲೇನಿದೆ ಎನ್ನುವುದನ್ನು we have got to examine, because you are throwing light on that. So, let us see, we will be talking with our senior officers and the Chief Secretary and - ಅವರ ಅಡ್ವೈಸ್ ಮೇಲೆ ಯಾವುದು ಸಾಧುವಾಗುತ್ತೋ ನೋಡಿ ಅದರ ಬಗ್ಗೆ ನಾವು ನಿರ್ಣಯವನ್ನು ಕೈಗೊಳ್ಳುತ್ತೇವೆ. ಈಗಾಗಲೇ ನಾವು ಭೂಮಿಯನ್ನು ಎಲ್ಲಿ ಕೊಟ್ಟಿದ್ದೇವೆ. ಹೆಚ್ಚಿಗೆ ಎಲ್ಲಿ ಕೊಟ್ಟಿದ್ದೀರಿ. ಎನ್ನುವ ಮಾತನ್ನು ಹೇಳುವಾಗ ಇವರ ವಾದದಂತೆ ನಾವು ಹೋಗುವುದಾಗಿದ್ದರೆ ಈ ವಾದದಂತೆ ಹೋದಾಗ ಈ ಎಕ್ಸ್‌ಪ್ರೆಸ್ ಹೈವೇ ಆಗಲಿಕ್ಕಿಲ್ಲ ಎನ್ನುವುದಕ್ಕೆ ಒಂದು ವಿಚಾರವನ್ನು ಹೇಳುತ್ತೇನೆ. “ಮೊದಲ ಹಂತಕ್ಕೆ ಬೇಕು ಎಂದು ಕಂಪನಿ ಹೇಳುವ 6173 ಎಕರೆ ಜಮೀನಿನಲ್ಲಿ ಟೌನ್‌ಷಿಪ್‌ಗಳ ನಿರ್ಮಾಣಕ್ಕೆ

ಬಳಕೆಯಾಗುವುದು 1933 ಎಕರೆ ಮತ್ತು ಇಂಟರ್‌ಛೇಂಜ್‌ಗಳು ಸೇರಿದಂತೆ 41 ಕಿಲೋಮೀಟರ್ ಉದ್ದದ ಪೆರಿಫೆರಲ್ ರಸ್ತೆ, 9.8 ಕಿಲೋಮೀಟರ್ ಉದ್ದದ ಲಿಂಕ್ ರಸ್ತೆ ಮತ್ತು 12 ಕಿಲೋಮೀಟರ್ ಉದ್ದದ ಮೊದಲ ಹಂತದ ಎಕ್ಸ್‌ಪ್ರೆಸ್ ರಸ್ತೆ ಹೀಗೆ ಒಟ್ಟು ಮೊದಲ ಹಂತದ ರಸ್ತೆ ನಿರ್ಮಾಣಕ್ಕೆ ಬಳಕೆಯಾಗುವುದು 1791 ಎಕರೆ ಮಾತ್ರ. ಉಳಿದ 2449 ಎಕರೆ ಸಂಪೂರ್ಣವಾಗಿ ಮಾರಾಟಕ್ಕೆ ಮೀಸಲಿಟ್ಟ ಭೂಮಿ. ನೈಸ್ ಕಂಪನಿ ಈ ತರ್ಕ ಮತ್ತು ಲೆಕ್ಕಾಚಾರವನ್ನು ನೀವು ವಿಶ್ಲೇಷಿಸಿದರೆ ಎಂಥ ವಿಚಿತ್ರ ಸಂಗತಿ ಹೊರಬರುತ್ತದೆ. 12 ಕಿಲೋ ಮೀಟರ್ ಎಕ್ಸ್‌ಪ್ರೆಸ್ ರಸ್ತೆ, 41 ಕಿಲೋಮೀಟರ್ ಪೆರಿಫೆಯಲ್ ರಸ್ತೆ, 9.8 ಕಿಲೋಮೀಟರ್ ಲಿಂಕ್ ರಸ್ತೆ, ಹೀಗೆ ಒಟ್ಟು 62 ಕಿಲೋಮೀಟರ್ ರಸ್ತೆಗೆ 4240 ಎಕರೆ ಬಳಕೆಯಾದರೆ, ಇಡೀ ಯೋಜನೆಗೆ ರಸ್ತೆಗೆ ಬೇಕೆಂದು ಕಂಪನಿ ಕೇಳುವ 6999 ಎಕರೆಯಲ್ಲಿ ಉಳಿಯುವುದು 2759 ಎಕರೆ ಮಾತ್ರ. ಈ 2759 ಎಕರೆಯಲ್ಲಿ ಕಂಪನಿ 99 ಕಿಲೋ ಮೀಟರ್ ಎಕ್ಸ್‌ಪ್ರೆಸ್ ರಸ್ತೆಯನ್ನು ನಿರ್ಮಿಸುವುದು ಎಂತು? ಇದು ಮೂಲಭೂತವಾದ ಪ್ರಶ್ನೆ. ಸರ್ಕಾರ ಅದರಲ್ಲೂ ಮಾನ್ಯ ಕುಮಾರಸ್ವಾಮಿಯವರ ನೇತೃತ್ವದ ಈ ಸಮ್ಮಿಶ್ರ ಸರ್ಕಾರ ಈ ರಸ್ತೆ ಆಗಲೇಬೇಕು. ಇದಕ್ಕೆ ಯಾವುದೇ ತರಹದ ಅಡ್ಡಿ ಆತಂಕಗಳಾಗಬಾರದು. ಸುಪ್ರೀಂಕೋರ್ಟ್‌ನವರು ಮತ್ತು ಹೈಕೋರ್ಟ್‌ನವರು ಸೋಮಶೇಖರ ರೆಡ್ಡಿಯವರ ಪ್ರಕರಣದಲ್ಲಿ ಅಂದರೆ ಅವರ ಸಾರ್ವಜನಿಕ ಹಿತಾಸಕ್ತಿಯ ತೀರ್ಮಾನದಲ್ಲಿ ಕೊಟ್ಟಿರುವ ನಿರ್ದೇಶನ ಏನಿದೆ, ಆ ನಿರ್ದೇಶನದ ಮತ್ತು ಫ್ರೇಮ್‌ವರ್ಕ್ ಅಗ್ರಿಮೆಂಟ್‌ನಲ್ಲಿ ಮೂಲ ಒಪ್ಪಂದದ ನಡುವೆ ಇರತಕ್ಕಂಥದ್ದು. In the letter and spirit, it has to be followed. ಎನ್ನತಕ್ಕ ಮಾತನ್ನು ಅವರು ಹೇಳಿದ್ದಾರೆ. This Government is also prepared to take it. It undertakes and solemnly affirms that it wants to execute this project in the letter and spirit of the Supreme Court and High Court Judgments as they pronounced in the Somashekar Reddy's PIL case and as enunciated in the frame work agreement. ಇಷ್ಟನ್ನು ಮಾಡುವಾಗ ಯಾವುದು ಸೂಕ್ತ ಎನ್ನುವಂಥ ನಿಮ್ಮೆಲ್ಲಾ ಹೇಳಿಕೆಗಳು, ನಿಮ್ಮೆಲ್ಲರ ತರ್ಕ, ಸಾರ್ವಜನಿಕರು, ಪತ್ರಿಕೆಗಳ ಅಗ್ರಲೇಖರ ಬರೆದಿರತಕ್ಕಂಥ ಎಲ್ಲವನ್ನೂ ಕೂಡ ಸರ್ಕಾರ ಯೋಚನೆ ಮಾಡುತ್ತಾ ಇದೆ. ಯೋಚನೆ ಮಾಡಿ ಸನ್ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಉತ್ತರವನ್ನು ಕೊಡುತ್ತಾರೆಂದು ಹೇಳಿ ನಾನು ಹೆಚ್ಚು ಲಂಬಿಸದೆ ತಾವು ನನಗೆ ಇಲ್ಲಿ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ನಾಲ್ಕು ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಸದನದ ಗೌರವಾನ್ವಿತ ಸದಸ್ಯರಾಗಿರತಕ್ಕ ಹಿರಿಯರಾಗಿರತಕ್ಕ ಮಾನ್ಯ ಶ್ರೀ ರಾಮರೆಡ್ಡಿಯವರು, ಈ ಬೆಂಗಳೂರು–ಮೈಸೂರು ಕಾರಿಡಾರ್ ಯೋಜನೆಯ ಬಗ್ಗೆ ನಿಲುವಳಿ ಸೂಚನೆಯನ್ನು ಸದನದಲ್ಲಿ ಮಂಡಿಸಿದಾಗ ಈ ಒಂದು ಗಂಭೀರವಾದ ವಿಷಯದ ಬಗ್ಗೆ ಅಮೂಲಾಗ್ರ ಚರ್ಚೆಗೆ ನಿಯಮ 69ರ ಅಡಿಯಲ್ಲಿ ತಾವೇನು ಈ ಒಂದು ನಿಲುವಳಿ ಸೂಚನೆಯನ್ನು ಪರಿವರ್ತಿಸಿ ಸದನದಲ್ಲಿ ಚರ್ಚೆಯನ್ನು ಮಾಡುವುದಕ್ಕೆ ಅವಕಾಶವನ್ನೇನು ಕೊಟ್ಟಿದ್ದೀರಿ, ಈ ಒಂದು ಅವಕಾಶವನ್ನು ಉಪಯೋಗ ಮಾಡಿಕೊಂಡಂಥ ಸದನದ ಎರಡೂ ಕಡೆಯ ಸದಸ್ಯರುಗಳು ಹಲವಾರು ರೀತಿಯ ಬೆಳಕನ್ನು ಇಲ್ಲಿ ಚೆಲ್ಲಿದ್ದಾರೆ. ಈ ಒಂದು ನಿಲುವಳಿ ಸೂಚನೆ ವಿಷಯವಾಗಿ ಇವತ್ತು ನಿಯಮ 69ರ ಅಡಿಯಲ್ಲಿ ಏನು ಚರ್ಚೆಯನ್ನು ಪ್ರಾರಂಭ ಮಾಡುವುದಕ್ಕೆ ತಾವೇನು ಅನುಮತಿಯನ್ನು ಕೊಟ್ಟಿದ್ದೀರಿ, ಮೊದಲನೆಯದಾಗಿ ತಮಗೆ ನನ್ನ ಅತ್ಯಂತ ಧನ್ಯವಾದಗಳನ್ನು ಅರ್ಪಿಸುವುದಕ್ಕೆ ಬಯಸುತ್ತೇನೆ. ಅದೇ ರೀತಿ ಒಂದು ವಿಷಯವನ್ನು ಸದನದಲ್ಲಿ ಮಂಡನೆ ಮಾಡುವುದರ ಮುಖಾಂತರ ಮಾನ್ಯ ಶ್ರೀರಾಮರೆಡ್ಡಿಯವರು ಏನು ಇವತ್ತು ಅಮೂಲಾಗ್ರವಾಗಿ ಚರ್ಚೆಯನ್ನು ಮಾಡತಕ್ಕಂಥದ್ದಕ್ಕೆ ಇವತ್ತು ಒಂದು ಸನ್ನಿವೇಶವನ್ನೇನು ತಂದುಕೊಟ್ಟಿದ್ದಾರೆ, ಈ ಸಂದರ್ಭದಲ್ಲಿ ಅವರಿಗೂ ನನ್ನ ಅಭಿನಂದನೆಗಳು. ಈ ಚರ್ಚೆ ಪ್ರಾರಂಭಿಸಿದ ನಂತರ ಸದನದ ಹಲವಾರು ಗೌರವಾನ್ವಿತ ಸದಸ್ಯರುಗಳಾದ ಸನ್ಮಾನ್ಯ ಧರ್ಮಸಿಂಗ್‌ರವರು ಇರಬಹುದು, ಸನ್ಮಾನ್ಯ ದೇಶಪಾಂಡೆಯವರು ಇರಬಹುದು, ಶ್ರೀರಾಮರೆಡ್ಡಿಯವರು ಇರಬಹುದು, ಮಾಧುಸ್ವಾಮಿಯವರು ಇರಬಹುದು, ಹೀಗೆ ಹಲವು ಪ್ರಮುಖರು ಮತ್ತು ಈ ಭಾಗದಲ್ಲೂ ಹಲವು ಪ್ರಮುಖರು ರಾಮಸ್ವಾಮಿಯವರು ಇರಬಹುದು, ಅದರಲ್ಲೂ ಪ್ರಮುಖವಾಗಿ ರಾಜಣ್ಣನವರು ಬಹಳ ಉದ್ವೇಗದಿಂದ ಮಾತನಾಡಿದರೆಂದು ಕಾಣುತ್ತದೆ. ನಾನು ಆ ಸಂದರ್ಭದಲ್ಲಿ ಸದನದಲ್ಲಿ ಇರಲಿಲ್ಲ. ಆದರೆ, ಅವರ ಭಾಷಣದ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದಾರೆ. ಅದೇ ರೀತಿ ಆರಗ ಜ್ಞಾನೇಂದ್ರ ಇರಬಹುದು. ಹೀಗೆ ಸದನದ ಎಲ್ಲಾ ಪಕ್ಷಗಳ ಸದಸ್ಯರು ಅವರವರ ಭಾವನೆಗಳನ್ನು ವ್ಯಕ್ತಪಡಿಸುವ ಸಂದರ್ಭದಲ್ಲಿ ಸುಮಾರು ಹನ್ನೊಂದು ವರ್ಷಗಳ ಈ ಬಿಎಂಐಸಿ ಕರ್ಮಕಾಂಡದ ಬಗ್ಗೆ ಅವರವರ ಭಾವನೆಗಳನ್ನು ವ್ಯಕ್ತಪಡಿಸಬೇಕಾದರೆ, ಬಹುಶಃ ಇವೊತ್ತು ಎಲ್ಲರ ಧ್ವನಿಯೂ ಒಂದಾಗಿದೆ ಎಂಬುದು ನನ್ನ ಭಾವನೆ. ಏಕೆಂದರೆ, ಈ ಒಂದು ಕಾಮಗಾರಿಯ ವಿಷಯದಲ್ಲಿ ಸುದೀರ್ಘವಾಗಿ ಚರ್ಚೆಯಾಗಿದೆ; ಇವೊತ್ತು ರಾಜ್ಯ ಮತ್ತು ದೇಶ ಮಟ್ಟದಲ್ಲೂ ಈ ಪ್ರಾಜೆಕ್ಟ್ ಬಗ್ಗೆ ನಡೆಯುತ್ತಿರುವ ಚರ್ಚೆಗಳನ್ನು

ಏನು ನೋಡುತ್ತಿದ್ದೇವೆ, ಈ ಪ್ರಾಜೆಕ್ಟ್ ವಿಷಯದಲ್ಲಿ ಹಲವಾರು ವಿರೋಧ-ಪರ ಭಾವನೆಗಳನ್ನು ನೋಡುತ್ತಿದ್ದೇವೆ, ಒಂದು ಕಡೆ ರಾಜ್ಯದ ಕೆಲವು ಮುಖಂಡರುಗಳು ಈ ಪ್ರಾಜೆಕ್ಟ್ ವಿಷಯದಲ್ಲಿ ವಿರೋಧ ವ್ಯಕ್ತಪಡಿಸುವುದರ ಮುಖಾಂತರ ಅಭಿವೃದ್ಧಿಗೆ ಅಡ್ಡಿ-ಆತಂಕಗಳನ್ನು ಉಂಟು ಮಾಡುತ್ತಿದ್ದಾರೆ ಎನ್ನುವ ಭಾವನೆಯನ್ನು ಮೂಡಿಸಿದ್ದಾರೆ. ಇಂತಹ ಸನ್ನಿವೇಶದಲ್ಲಿ ನಾನು ಈವತ್ತು ಇಲ್ಲಿ ಇದ್ದೇನೆ, ಬಹುಶಃ ಹನ್ನೊಂದು ವರ್ಷಗಳಿಂದ ಈ ಪ್ರಾಜೆಕ್ಟ್ ನಡೆದು ಬಂದಿರುವ ದಾರಿ ಏನಿದೆ, ಇದಕ್ಕೆ ನಾನು ಹೊಸಬ. ನನಗೆ ಈ ದಾರಿ ಏನನ್ನುವುದು ಗೊತ್ತಿಲ್ಲ. ಹೊಸದಾಗಿ ನಾನು ಈ ಜಾಗದಲ್ಲಿ ಬಂದು ಕುಳಿತಿದ್ದೇನೆ. ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಗೌರವಾನ್ವಿತ ಸದಸ್ಯರಾದ ರಾಜೇಂದ್ರನ್‌ರವರು ಒಂದು ಮಾತನ್ನು ಹೇಳಿದರು 'ಇವೊತ್ತು ನೀವು ಅಭಿಮನ್ಯ ಸ್ಥಾನದಲ್ಲಿ ನಿಂತಿದ್ದೀರಿ' ಎಂದು. ಅವರು ಮಹಾಭಾರತದ ಒಂದು ಪ್ರಕರಣವನ್ನು ಅಥವಾ ಸನ್ನಿವೇಶವನ್ನು ಬಹಳ ಹಾಸ್ಯಮಯವಾಗಿ ಈ ವಿಷಯವನ್ನು ನನ್ನ ಗಮನಕ್ಕೆ ತರುವುದರ ಮುಖಾಂತರ 'ಅಭಿಮನ್ಯು ಚಕ್ರವ್ಯೂಹಕ್ಕೆ ನುಗ್ಗಿ ಅಲ್ಲಿಂದ ಮತ್ತೆ ವಾಪಸ್ಸು ಬರುವುದಕ್ಕೆ ಸಾಧ್ಯವಾಗಲಿಲ್ಲ. ಆ ರೀತಿಯ ಇಕ್ಕಟ್ಟಿಗೆ ನೀವು ಒಳಗಾಗುವುದು ಬೇಡ. ನೀವು ಆ ಚಕ್ರವ್ಯೂಹವನ್ನು ಬೇಧಿಸಿ ಹೊರಗೆ ಬರತಕ್ಕಂಥ ಚಾಣಕ್ಯತನವೂ ನಿಮ್ಮಲ್ಲಿ ಇದೆ' ಎಂಬ ಪ್ರೋತ್ಸಾಹದ ಮಾತನ್ನು ಏನು ಹೇಳಿದ್ದಾರೆ, ಈ ಸಂದರ್ಭದಲ್ಲಿ ಅದನ್ನು ಸ್ಮರಿಸಿಕೊಳ್ಳುವುದಕ್ಕೆ ಬಯಸುತ್ತೇನೆ. ಇದೊಂದು ರೀತಿ ಚಕ್ರವ್ಯೂಹವೆಮದು ಹೇಳಬಯಸುತ್ತೇನೆ. ನನಗೆ ಅನುಭವವಿಲ್ಲ, ವಯಸ್ಸಿನಲ್ಲಿ ಚಿಕ್ಕವನು. ಕೇವಲ 20-22 ತಿಂಗಳ ಕಾಲ ಇಲ್ಲಿ ನಾನು ಸದನದ ಸದಸ್ಯನಾಗಿ ಕುಳಿತಿದ್ದೇನೆ ಮತ್ತು 18 ತಿಂಗಳು ಸದನದ ಕೊನೆಯ ಬೆಂಚಿನಲ್ಲಿ ಇದ್ದೆ. ಇವೊತ್ತು ಈ ಸ್ಥಾನದಲ್ಲಿ ನಿಂತು ಈ ಸದನದ ಜವಾಬ್ದಾರಿಯನ್ನು ನಿರ್ವಹಿಸಲು ಹಾಗೂ ಈ ಸದನದ ಗೌರವವನ್ನು ಕಾಪಾಡುವುದಕ್ಕೆ ಬದ್ಧನಾಗಿದ್ದೇನೆ. ನಮ್ಮ ರಮೇಶ್‌ಕುಮಾರ್‌ರವರು ಒಂದು ಮಾತನ್ನು ಹೇಳಿದರು ನೀವು ಬಿಸಿ ರಕ್ತದವರು, ನೀವು ಇದಕ್ಕೆ ಏನಾದರೊಂದು ತೀರ್ಮಾನಕ್ಕೆ ಬನ್ನಿ ಇದಕ್ಕೊಂದು ಅಂತಿಮವಾದ ಒಂದು ಹೊಸ ಸ್ವರೂಪ ಕೊಡಿ' ಎಂದು ಅವರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಇವೊತ್ತು ಹಲವಾರು ಸಲಹೆಗಳು ಬಂದಿವೆ, ಈ 1995ರ ಎಂ.ಓ.ಯು. ಪ್ರಕರಣ ಏನಿದೆ, ಅದಕ್ಕಿಂತಲೂ ಹಿಂದಿನ ಕೆಲವು ಪೂರ್ವ ಇತಿಹಾಸದ ಬಗ್ಗೆಯೂ ಇವೊತ್ತು ಸದನದಲ್ಲಿ ಸದಸ್ಯರು ಚರ್ಚೆ ಮಾಡಿದ್ದಾರೆ. ಈ ವಿಷಯಗಳ ಬಗ್ಗೆ, ನನ್ನಲ್ಲಿರತಕ್ಕ ಮಾಹಿತಿಯ ಮುಖಾಂತರ ಆ ಸದಸ್ಯರುಗಳು ಈ 1995ರ ಪೂರ್ವದ ಇತಿಹಾಸದ ಬಗ್ಗೆ ಏನು ಚರ್ಚೆ ಮಾಡಿದ್ದಾರೆ, ಅದರ ಬಗ್ಗೆ ಸ್ವಲ್ಪ ಗಮನ ಚೆಲ್ಲಿ ನಂತರ ಈ ಬಿಎಂಐಸಿ ಪ್ರಾಜೆಕ್ಟ್ ಬಗ್ಗೆ ಬರಬೇಕೆಂದು ನಾನು ತಮ್ಮ ಮುಂದೆ ಹೇಳಬಯಸುತ್ತೇನೆ.

1988ರಲ್ಲಿ ಈ ಬೆಂಗಳೂರು–ಮೈಸೂರು ಕಾರಿಡಾರ್ ರಸ್ತೆಯನ್ನು ನಾಲ್ಕು ಪಥಗಳ ರಸ್ತೆಯನ್ನಾಗಿ ಮಾಡಬೇಕೆಂದು ದಿವಂಗತ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಈ ಪ್ರಾಜೆಕ್ಟ್ ಕುರಿತಂತೆ ಚಿಂತನೆ ಮಾಡಿದರೆಂದು ಏನು ಕೆಲವು ಸದನದ ಹಿರಿಯ ಸದಸ್ಯರು ಗಮನಕ್ಕೆ ತಂದಿದ್ದಾರೆ. ನಾನು ಅದಕ್ಕೂ ಒಂದು ಹೆಜ್ಜೆ ಮುಂದೆ ಹೋಗಿ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಆ ಸಂದರ್ಭದಲ್ಲಿ ಸನ್ಮಾನ್ಯ ದಿವಂಗತ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದರು. ಮಾನ್ಯ ದೇವೇಗೌಡರು ಲೋಕೋಪಯೋಗಿ ಸಚಿವರಾಗಿ ಕೆಲಸ ಮಾಡುತ್ತಿದ್ದರು. 1988ನೇ ಇಸವಿಗೂ ಮುಂಚೆ ಇವೊತ್ತು ನಾನು ಪ್ರತಿನಿಧಿಸತಕ್ಕಂಥ ರಾಮನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮಾಯಗಾನಹಳ್ಳಿ ಹತ್ತಿರ ಒಂದು ತಿರುವು ಏನಿದೆ, ಅಲ್ಲಿ ಹಲವಾರು ಅಪಘಾತಗಳು ನಡೆದಂಥ ತಿರುವು. ಸನ್ಮಾನ್ಯ ದೇವೇಗೌಡರು ಲೋಕೋಪಯೋಗಿ ಸಚಿವರಾಗಿದ್ದಾಗ, ಮಹಾರಾಷ್ಟ್ರದ ಶಾಲಾ ಮಕ್ಕಳನ್ನು ಹೊತ್ತ ಬಸ್ ಅಪಘಾತಕ್ಕೀಡಾದಾಗ ಬಸ್‌ನಲ್ಲಿದ್ದ ಸುಮಾರು 16–17 ಮಕ್ಕಳು ನಿಧನ ಹೊಂದಿದ ಸಂದರ್ಭದಲ್ಲಿ ತಕ್ಷಣವೇ ಆ ಸ್ಥಳಕ್ಕೆ ಭೇಟಿ ನೀಡಿದ ಲೋಕೋಪಯೋಗಿ ಸಚಿವರು, ತಕ್ಷಣ ಆ ತಿರುವನ್ನು ಸರಿಪಡಿಸುವುದಕ್ಕೆ ಸ್ಥಳದಲ್ಲೇ ತೀರ್ಮಾನಿಸುವ ಮೂಲಕ ಅಲ್ಲಿ ಒಂದು ಕೆಲಸ ಪ್ರಾರಂಭ ಮಾಡಿದರು. ಆ ಸಂದರ್ಭದಲ್ಲಿ ಈ ಚಿಂತನೆ ಪ್ರಾರಂಭವಾಯಿತು. ಈ ಮೈಸೂರು–ಬೆಂಗಳೂರು ರಸ್ತೆಯಲ್ಲಿ ಹಲವಾರು ಅಪಘಾತಗಳು ಆಗುತ್ತಿದೆ, ವಾಹನದ ದಟ್ಟಣೆ ಹೆಚ್ಚಿರುವ ಸನ್ನಿವೇಶದಲ್ಲಿ ಇವೊತ್ತು ಹೊಸದಾಗಿ ಈ ಪ್ರಾಜೆಕ್ಟ್ ಮಾಡಬೇಕೆಂದು ಹೊರಟಾಗ ಸರ್ಕಾರ ಮೊದಲ ಬಾರಿಗೆ ಕೆಲವು ತೀರ್ಮಾನಗಳನ್ನು ಮಾಡಿ ಟೆಂಡರ್ ಕರೆದಂತಹ ಸನ್ನಿವೇಶ ಏನಿದೆ, ಈಗಾಗಲೇ ಕೆಲವು ಸದಸ್ಯರುಗಳು ಸದನದ ಮುಂದೆ ತಂದಿದ್ದಾರೆ; ಆ ಸಂದರ್ಭದಲ್ಲಿ ಒಬ್ಬರೇ ಗುತ್ತಿಗೆದಾರರು ಆ ಟೆಂಡರ್‌ನಲ್ಲಿ ಭಾಗವಹಿಸುವುದರ ಮೂಲಕ ಕೆಲವು ಕಂಡಿಷನ್ಸ್ ಏನು ಹಾಕಿದ್ದರು, ಸರ್ಕಾರವೇ ಆ ವೆಚ್ಚ ಭರಿಸುವುದಕ್ಕೆ ಗ್ಯಾರಂಟಿ ಕೊಡಬೇಕು. ಈ ರೀತಿ ಸರ್ಕಾರದ ಮೇಲೆ ಕೆಲವು ಹೊಣೆ ಹೊರಿಸುವ ತೀರ್ಮಾನ ಏನು ಮಾಡಿದ್ದರು, ಅದಾದ ನಂತರ ಸನ್ಮಾನ್ಯ ದೇವೇಗೌಡರು ಮುಂದಿನ ಚುನಾವಣೆಯಲ್ಲಿ ಸೋತರು, ರಾಜೀನಾಮೆ ಕೊಟ್ಟರು. ಅದು ಅಲ್ಲಿಗೆ ನಿಂತಿತು. ಮತ್ತೆ ಅದರ ಬಗ್ಗೆ ಯಾರೂ ಪ್ರಸ್ತಾಪ ಮಾಡಲಿಲ್ಲ. ಇವೊತ್ತು ಹಲವಾರು ಸದಸ್ಯರುಗಳು ಈ ರಿಯಲ್ ಎಸ್ಟೇಟ್ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ರಿಯಲ್ ಎಸ್ಟೇಟ್ ದಂಧೆ. ಈ ಬಿಎಂಐಸಿ ಪ್ರಾಜೆಕ್ಟ್ ಪ್ರಾರಂಭವಾದ ನಂತರ ರಿಯಲ್ ಎಸ್ಟೇಟ್ ದಂಧೆ ಪ್ರಾರಂಭವಾಗಿದ್ದಲ್ಲವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ದಿವಂಗತ ಲಕ್ಷ್ಮಣರಾಯರು ಸರ್ಕಾರದ ಹಿರಿಯ

ಅಧಿಕಾರಿಗಳಾಗಿದ್ದರು, ಬೆಂಗಳೂರಿನ ಹಿರಿಯ ಪ್ರಮುಖ ಅಧಿಕಾರಿಗಳಿದ್ದರು. ಅವರ ನಾಯಕತ್ವದಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಒಂದು ಕಮಿಟಿಯನ್ನು ಫಾರ್ಮ್ ಮಾಡಿದರು. ಬೆಂಗಳೂರು ನಗರದಲ್ಲಿರುವ ಕೆರೆಗಳನ್ನು ಸಂರಕ್ಷಣೆ ಮಾಡತಕ್ಕಂಥಾದ್ದರ ಬಗ್ಗೆ ಲಕ್ಷ್ಮಣರಾಯರು ಕೊಟ್ಟ ವರದಿ ಏನಿದೆ, ಅದನ್ನು ಇವೊತ್ತು ನೆನಪಿಸಿಕೊಳ್ಳಲು ಬಯಸುತ್ತೇನೆ. ಲಕ್ಷ್ಮಣರಾಯರು ಏನು ಕೆಲವು ಮಾಹಿತಿಗಳನ್ನು ಮತ್ತು ಬೆಂಗಳೂರು ನಗರದ ಅಭಿವೃದ್ಧಿಗೆ, ಬೆಂಗಳೂರು ನಗರವನ್ನು ಸಂರಕ್ಷಿಸುವುದಕ್ಕೆ ಅವರು ಏನು ಒಂದು ವರದಿ ಕೊಟ್ಟರು, ಆ ವರದಿ ಇಲ್ಲಿದೆ. ಇಲ್ಲಿ ಹೊಸಬರು ಬಹಳ ಜನರಿದ್ದಾರೆ. ಹಿರಿಯ ಸದಸ್ಯರು ಮುಂದಿನ ಸಾಲಿನಲ್ಲಿ ಏನು ಕುಳಿತಿದ್ದೀರಿ, ಆ ವರದಿ ತಮ್ಮ ಗಮನಕ್ಕೆ ಬಂದಿದೆ ಎಂಬುದು ನನ್ನ ಭಾವನೆ. ಅಲ್ಲಿಯೇ ಪ್ರಾರಂಭವಾಯಿತು ರಿಯಲ್ ಎಸ್ಟೇಟ್ ಕೆಲಸ. ಇದು ಬಿಎಂಐಸಿ ಪ್ರಾಜೆಕ್ಟ್ ಬಂದ ನಂತರ ಆದದ್ದಲ್ಲ. ಇದು ಪ್ರಾರಂಭವಾಗಿದ್ದು 1988ರಲ್ಲಿ. ಲೋಕಂಡವಾಲಾ ಎನ್ನುವ ವ್ಯಕ್ತಿಗೆ ಚಲ್ಲ ಘಟ್ಟ ಶಿವವಾಗಲು ಈ ಎರಡು ಕೆರೆಗಳ ಬಗ್ಗೆ ಹೇಳುತ್ತೇನೆ. ಆ ಕೆರೆಗಳನ್ನು ಯಾರಿಗೆ ಕೊಟ್ಟರು? ಒಬ್ಬರು ಲೋಕಂಡ್‌ವಾಲಾ, ಇನ್ನೊಂದು ಶಾಂತಿನಗರ ಹೌಸಿಂಗ್ ಸೊಸೈಟಿ. ಶಾಂತಿನಗರ ಹೌಸಿಂಗ್ ಸೊಸೈಟಿಯ ಕರ್ಮಕಾಂಡ ಇನ್ನೂ ನಡೆಯುತ್ತಿದೆ. ಅದಿನ್ನೂ ಮುಗಿದಿಲ್ಲ. ಅಲ್ಲಿ ಪ್ರಾರಂಭವಾಯಿತು. ಇದರ ದೋಷವನ್ನು ನಾನು ಯಾರಿಗೂ ಕೊಡುವುದಕ್ಕೆ ಹೋಗುವುದಿಲ್ಲ. ಆದರೆ, ವ್ಯವಸ್ಥೆ ಇಲ್ಲಿಂದ ಪ್ರಾರಂಭವಾಯಿತು. ಒಂದು ರೀತಿಯಲ್ಲಿ ಬೆಂಗಳೂರು ನಗರದ ಭೂಮಿಯ ಕಬಳಿಕೆ ಇಲ್ಲಿಂದ ಪ್ರಾರಂಭವಾಯಿತೆಂದು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ರಿಯಲ್ ಎಸ್ಟೇಟ್ ಬಿಸಿನೆಸ್ ಬಗ್ಗೆ ನಾನು ಹೇಳಿದ್ದೇನೆ, ನಾನು ಸದನದ ಎಲ್ಲಾ ಸದಸ್ಯರಲ್ಲೂ ಮನವಿ ಮಾಡಿಕೊಳ್ಳುವುದೇನೆಂದರೆ, ನಾನು ಯಾರ ಪರವಾಗಿಯೂ ಇಲ್ಲಿ ಅಡ್ವೋಕೇಟ್ ಮಾಡುವುದಕ್ಕೆ ಬಂದಿಲ್ಲ. ಆದ್ದರಿಂದ ಯಾರೂ ತಪ್ಪು ಗ್ರಹಿಸ ಬಾರದು ಎಂದು ನಾನು ಮನವಿಮಾಡುತ್ತೇನೆ. ಅದಕ್ಕೆ ಕಾರಣ, ಈವತ್ತೇನು ಬೆಂಗಳೂರು ಮೈಸೂರು ಕಾರಿಡಾರ್ ರಸ್ತೆಯ ಬಗ್ಗೆ ಚರ್ಚೆಯನ್ನು ಮಾಡತಕ್ಕ ಸಂದರ್ಭದಲ್ಲಿ ಹಲವಾರು ಪ್ರಮುಖ ವ್ಯಕ್ತಿಗಳ ಬಗ್ಗೆ ಹಿಂದೆ ಸರ್ಕಾರವನ್ನು ನಡೆಸಿರತಕ್ಕವರ ಬಗ್ಗೆ ಚರ್ಚೆ ನಡೆದಿದೆ. ಈವತ್ತು ನಾನು ಮಾನ್ಯ ಹಿರಿಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರೇನಿದ್ದಾರೆ, ಅವರು ಈವತ್ತು ಬೆಳಿಗ್ಗೆ ಮಾತನಾಡತಕ್ಕ ಸಂದರ್ಭದಲ್ಲಿ ಇದು ನನ್ನ ಒಂದು ಗ್ರಹಿಕೆ. ಅವರು ಮಾತನಾಡಬೇಕಾದರೆ ಅವರ ಮುಖದಲ್ಲಿ ಏನೋ ಒಂದು ರೀತಿಯ ನೋವನ್ನು ವ್ಯಕ್ತಪಡಿಸುತ್ತಿದ್ದಾರೆಂದು ನನಗನ್ನಿಸಿತು. ಅವರು ಮಾತನಾಡತಕ್ಕ ಸಂದರ್ಭದಲ್ಲಿ ಅವರ ಅಂತರಾಳದಿಂದ ಬಂದಂಥ ಮಾತುಗಳು, ಯಾವುದೋ ಶಿಶು ಇದು, ಯಾರೋ ಇಲ್ಲಿ ತಂದು

ಬಿಟ್ಟಿದ್ದಾರೆ, ಇದರ ಹಣೆಯಬರಹ, ನಾವೇಕೆ ಇದರ ಬಗ್ಗೆ ಡಿಫೆಂಡ್ ಮಾಡಿಕೊಂಡು ಮಾತನಾಡಬೇಕು, ಯಾರೋ ಮಾಡಿರುವ ತಪ್ಪಿಗೆ ಈವತ್ತು ನಾವೆಲ್ಲಾ ತಪ್ಪಿಗೆ ಗುರಿಯಾಗಿದ್ದೇವೆ, ಏತಕ್ಕೆ ಬೇಕಿತ್ತು ಈ ರೀತಿಯ ಶಿಶು ಎಂಬ ಭಾವನೆ ಅವರಲ್ಲಿತ್ತು ಎಂಬುದು ನನ್ನ ಭಾವನೆ. ನಾನು ಈ ಸಂದರ್ಭದಲ್ಲಿ ಅವರನ್ನು ನಿಜಕ್ಕೂ ಅಭಿನಂದಿಸುತ್ತೇನೆ. ಈವತ್ತು ನೀವು ಧೈರ್ಯವಾಗಿ ನಿರ್ಧಾರ ಮಾಡಿ; ಈವತ್ತು ಹಲವಾರು ವಿಷಯಗಳ ಬಗ್ಗೆ ಚರ್ಚೆ ಮಾಡಿದ್ದಾರೆ. ನಾನು ಆ ಚರ್ಚೆಗಳ ಬಗ್ಗೆ ಮುಂದೆ ಕೆಲವು ವಿಷಯಗಳನ್ನು ಅವರ ಗಮನಕ್ಕೆ ತರಲು ಬಯಸುತ್ತೇನೆ. ನಿಜಕ್ಕೂ ಅವರು ಈವತ್ತು ಕೊಟ್ಟಿರುವ ಸಲಹೆಗಳು ಅಭಿನಂದನಾರ್ಹವಾದದ್ದು. ಈ ಬೆಂಗಳೂರು-ಮೈಸೂರು ಕಾರಿಡಾರ್ ರಸ್ತೆ ಏನಿದೆ, ಅವರು ಇದಕ್ಕೆ ಪಾಲುದಾರರಲ್ಲ. ಈ ತಪ್ಪುಗಳಿಗೆ ಅವರು ಪಾಲುದಾರರಲ್ಲ. ಅವರು ಮಂತ್ರಿಮಂಡಲದಲ್ಲಿ ಇರಬಹುದು. ಅವರು 1997ರಲ್ಲೇ ಮಾತನಾಡತಕ್ಕ ಸಂದರ್ಭದಲ್ಲಿ ಇದರ ಬಗ್ಗೆ ವಿರೋಧವನ್ನು ವ್ಯಕ್ತ ಮಾಡಿದ್ದರು. ನಾನು ಅವರಿಗೆ ತಪ್ಪು ಹೊರಿಸಲು ಸಿದ್ಧನಿಲ್ಲ. ಈ ಸಂದರ್ಭದಲ್ಲಿ ನಾನು ಯಾರಮೇಲೂ ತಪ್ಪು ಹೊರಿಸಲು ಸಿದ್ಧನಿಲ್ಲ. ಈ ವ್ಯವಸ್ಥೆಯ ಬಗ್ಗೆ ಚರ್ಚೆಯನ್ನು ಮಾಡಬೇಕಾದರೆ ಹಲವಾರು ಸದಸ್ಯರುಗಳು ಇದು ಕೇವಲ ಚರ್ಚೆಯಾಗಿ ಉಳಿಯಬಾರದು ಇದಕ್ಕೆ ಏನಾದರೂ ಅಂತಿಮವಾದ ತೀರ್ಮಾನ ಆಗಬೇಕೆಂದು ಏನು ಹೇಳಿದ್ದಾರೆ ನಾನು ಅದಕ್ಕೆ ಬೆಂಬಲ ಕೊಡುತ್ತೇನೆ ಮತ್ತು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. 1995ನೇ ಇಸವಿಯಲ್ಲಿ ಈ ಒಂದು ವಿಷಯ ಪ್ರಾರಂಭವಾಗುತ್ತದೆ; ನಾನು ಈ ಸಂದರ್ಭದಲ್ಲಿ ಮಾನ್ಯ ದೇಶಪಾಂಡೆಯವರು ಮಾತನಾಡುವಾಗ ಒಂದು ಪದ ಅವರಿಂದ ಬಂತು. ಇದು ದೇವೇಗೌಡರ ಗರ್ಭದಿಂದ ಬಂದಂಥ ಭ್ರೂಣ ಎಂದು ಹೇಳಿದರು. ಈ ಕರ್ಮಕಾಂಡವೇನಿದೆ, ಬೆಂಗಳೂರು-ಮೈಸೂರು ರಸ್ತೆಯ ಭ್ರೂಣವೇನಿದೆ ಅದರ ಬಗ್ಗೆ ನಂತರ ಬರುತ್ತೇನೆ. ಆದರೆ ದೇವೇಗೌಡರ ರಕ್ತವನ್ನೇನು ಹಂಚಿಕೊಂಡು ಬಂದಿದ್ದೇನೆ, ಅವರ ಶಿಶುವಾಗಿ, ಅದಕ್ಕೆ ಉತ್ತರ ಕೊಡಲು ಇಲ್ಲಿ ನಿಂತಿದ್ದೇನೆ. ಅದೂ ಅವರ ಬಾಯಿಂದ ಬಂದಂಥ ಮಾತಿಗಾಗಿ ದೇವೇಗೌಡರ ಮಗನಾಗಿ ಈ ವಿಷಯವನ್ನು ಹೇಳಲು ಬಯಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಇಲ್ಲಿ mis understand ಆಗಿದೆ. ಇವರೇನು ಹೇಳಿದರು 1997ರಲ್ಲೇ agreement ಆಯಿತು. ಒಂದು ದೃಷ್ಟಿಯಿಂದ ಮಾನ್ಯ ಜೆ.ಹೆಚ್. ಪಟೇಲ್‌ರವರ ಮೇಲೆ ಅಪವಾದ ಬರಲು ಶುರುವಾಯಿತು ಅಂತ. Frame work Agreement ಏನಾಯಿತಲ್ಲಾ, MoU, Cabinet sub Committee, Cabinet Committee ಇದರ entire discussions,

decisions, deliberations ಆಯಿತಲ್ಲಾ, That came into the frame work agreement ಎಂಬ ಅರ್ಥದಲ್ಲಿ ಹೇಳಿದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ನಾನು ತಪ್ಪಾಗಿ ಹೇಳುತ್ತಿಲ್ಲ. ತಮ್ಮ ಬಾಯಿಯಿಂದ ನೀವು ಒಂದು ಮಾತನ್ನು ಹೇಳಿದಿರಿ. ಎಲ್ಲೋ ಒಂದು ಕಡೆ ಭಗವಂತ ಮೂಲೆಯಲ್ಲಿದ್ದಾನೆ ಎಂದು; ಅದಕ್ಕೆ ಇನ್ನೊಬ್ಬರು ಸದಸ್ಯರು ಬರೀ ಮೂಲೆಯಲ್ಲಿಲ್ಲ, ಭಗವಂತನು ಸರ್ವಾಂತರಯಾಮಿ ಎಂದು ಹೇಳಿದರು. ಆ ದೃಷ್ಟಿಯಿಂದ ನೀವೇನು ಅದನ್ನು ಹೇಳಿದ್ದೀರಿ ಅದು ತಪ್ಪು ಎಂದು ಹೇಳುತ್ತಿಲ್ಲ. ಆದರೆ, ತಾವು ಬಳಸಿದ ಪದಕ್ಕೆ ನಾನು ಒಂದು ಕ್ಲಾರಿಫಿಕೇಷನ್ ಕೊಡಲು ಅನುಕೂಲವಾಯಿತು ಎಂದು ಇಲ್ಲಿ ಅದನ್ನು ಹೇಳಲು ಬಯಸಿದೆ. ಅದನ್ನು ತಪ್ಪು ಎಂದು ನಾನು ಹೇಳುತ್ತಿಲ್ಲ. "ದೇವೇಗೌಡರು ಮುಖ್ಯಮಂತ್ರಿಗಳಾಗಿ ನಾನು ಕೈಗಾರಿಕಾ ಸಚಿವನಾಗಿ ದಾವೋಸ್‌ಗೆ ಹೋಗತಕ್ಕ ಸನ್ನಿವೇಶಗಳು, ಆ ಸಂದರ್ಭದಲ್ಲಿ ಹಲವಾರು ಪ್ರಮುಖ ನಿರ್ಧಾರಗಳನ್ನು ದೇವೇಗೌಡರು ನಾವು ಒಟ್ಟಿಗೆ ಸೇರಿ ಮಾಡಿದ್ದೇವೆ " ಎಂಬ ಮಾತನ್ನೇನು ತಾವು ಹೇಳಿದ್ದೀರಿ, ಅದಕ್ಕೆ ನಾನು ಬೆಂಬಲಿಸುತ್ತೇನೆ ಮತ್ತು ಅಭಿನಂದಿಸುತ್ತೇನೆ. ತಾವು ಒಬ್ಬ ಕೈಗಾರಿಕಾ ಸಚಿವರಾಗಿ ಆ ಸಂದರ್ಭದಲ್ಲಿ ನಮ್ಮ ತಂದೆಯವರ ಜೊತೆ ಏನು ನಿರ್ಧಾರಗಳನ್ನು ತೆಗೆದುಕೊಂಡಿರಿ, ಅದನ್ನು ಬೆಂಬಲಿಸುತ್ತೇನೆ. ತಂದೆಯವರು ಎಂದು ಹೇಳುವುದಿಲ್ಲ ಆವತ್ತಿನ ಮುಖ್ಯಮಂತ್ರಿಗಳು, ತಂದೆಯವರ ವಿಷಯ ಮನೆಯಲ್ಲಿ ಇಲ್ಲಿ ಆವತ್ತಿನ ಮುಖ್ಯಮಂತ್ರಿಗಳು ಎಂಬ ಪದವನ್ನು ಬಳಸಲು ಬಯಸುತ್ತೇನೆ. ತಾವು ಮತ್ತು ಆವತ್ತಿನ ಮುಖ್ಯಮಂತ್ರಿಗಳು ಹಲವಾರು ಬಂಡವಾಳವನ್ನು ಹೂಡತಕ್ಕದಕ್ಕೆ ತ್ವರಿತವಾದ ನಿರ್ಧಾರಗಳನ್ನು ಮಾಡಿದ್ದೀರಿ, ಅದನ್ನು ಹೇಳುವುದಕ್ಕೆ ಮೊದಲು ಕೆಲವು ವಿಷಯಗಳನ್ನು ಹೇಳಲು ಬಯಸುತ್ತೇನೆ. ಏಕೆಂದರೆ, ಆವತ್ತಿನ ಮುಖ್ಯಮಂತ್ರಿಗಳು ಮತ್ತು ನೀವು ಕೈಗಾರಿಕಾ ಸಚಿವರಾಗಿ ನಾವು ಬಂಡವಾಳವನ್ನು ತರತಕ್ಕದ್ದರಲ್ಲಿ ಆ ಸರ್ಕಾರ ಒಂದು ಕಂಡಿದ್ದೇವೆ ಎಂದು ಬೆನ್ನುತಟ್ಟಿಕೊಳ್ಳಲು ಆಗುವುದಿಲ್ಲ. ಆ ಮುಖ್ಯಮಂತ್ರಿಗಳು ಅಷ್ಟೆ ನೀವೂ ಅಷ್ಟೆ. ಈ ದೇಶದಲ್ಲಿ ಮೊದಲ ಬಾರಿಗೆ 1991ನೇ ಇಸವಿಯಲ್ಲೇನು ಆರ್ಥಿಕ ಚಿಂತನೆ ಆರಂಭವಾಯಿತು, ಹೊಸ ವ್ಯವಸ್ಥೆಯಲ್ಲಿ ಈ ದೇಶದಲ್ಲಿ ಏನು ಅದರ ಬಗ್ಗೆ ಚಿಂತನೆಯನ್ನು ಪ್ರಾರಂಭ ಮಾಡುವುದಕ್ಕೂ ಮೊದಲೇ ಅಂದರೆ 1991ನೇ ಇಸವಿಗಿಂತ ಮೊದಲೇ ಕರ್ನಾಟಕದ ಬಗ್ಗೆ ಬಂಡವಾಳವನ್ನು ಹೂಡತಕ್ಕದ್ದರಲ್ಲಿ ನಮ್ಮ ರಾಜ್ಯ ಆವತ್ತು ಆಕರ್ಷಣೆಗೆ ಒಳಗಾಗಿತ್ತು. ಈ ಒಂದು ಹೊಸ ರಿಫಾರ್ಮ್ಸ್ ಆರ್ಥಿಕವಾಗಿ ಬರುವುದಕ್ಕೂ ಮೊದಲೇ ಈ ರಾಜ್ಯಕ್ಕೆ ಹಲವಾರು ದೇಶವಿದೇಶಗಳ ಕಂಪನಿಗಳ ಮಾಲೀಕರು ಇಲ್ಲಿ ಉದ್ಯಮವನ್ನು ಪ್ರಾರಂಭ ಮಾಡಿದ್ದರು

ಎಂಬುದನ್ನು ಹೇಳಲು ಬಯಸುತ್ತೇನೆ. ಕರ್ನಾಟಕ ರಾಜ್ಯ ಮಹಾರಾಜರ ಕಾಲದಿಂದ, ಮೈಸೂರು ಮಹಾರಾಜರು ಆಳತಕ್ಕ ಸನ್ನಿವೇಶ, ಸರ್.ಎಂ. ವಿಶ್ವೇಶ್ವರಯ್ಯನವರು ಆಳಿದಂಥ ಸಂದರ್ಭದಲ್ಲಿ ಮಿರ್ಜಾ ಇಸ್ಮಾಯಿಲ್‌ರವರು ಈ ರಾಜ್ಯವನ್ನು ಆ ಸಂದರ್ಭದಲ್ಲಿ ಆಳತಕ್ಕದ್ದರಲ್ಲಿ ಶೇಷಾದ್ರಿ ಅಯ್ಯರ್‌ರವರು ಆಳತಕ್ಕ ಸಂದರ್ಭದಲ್ಲಿ ಹಲವಾರು ರೀತಿಯ ಕಾರ್ಯಕ್ರಮಗಳನ್ನು ತಂದಿದ್ದಾರೆ. ನಾನು ಈ ಸಂದರ್ಭದಲ್ಲಿ ಮಾನ್ಯ ನಿಜಲಿಂಗಪ್ಪನವರು ಇರಬಹುದು ವೀರೇಂದ್ರಪಾಟೀಲರು ಇರಬಹುದು, ಎಲ್ಲರನ್ನೂ ಸ್ಮರಿಸಿಕೊಳ್ಳಲು ಬಯಸುತ್ತೇನೆ. ದೇವರಾಜ್‌ಅರಸುರವರನ್ನೂ ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಲು ಬಯಸುತ್ತೇನೆ. ಅವರ ಆಳ್ವಿಕೆಯಲ್ಲೇ ಹಿಂದೆಯೇ ಈ ರಾಜ್ಯಕ್ಕೆ ಹಲವಾರು ಬಂಡವಾಳವನ್ನು ಹೂಡಲು ಏನು ಬಂದಿದ್ದಾರೆ ಅದರ ಪಟ್ಟಿಯು ನನ್ನ ಹತ್ತಿರ ಇದೆ. ಬೇಕೆಂದರೆ ಅದನ್ನು ಇಡಲು ತಯಾರಿದ್ದೇನೆ. ಆರ್ಥಿಕ ಚಿಂತನೆ ಪ್ರಾರಂಭವಾದ ನಂತರ ಈ ರಾಜ್ಯದಲ್ಲಿ ಬಂಡವಾಳವನ್ನು ಹೂಡತಕ್ಕದ್ದು ಬಂದಿದ್ದಲ್ಲ. ಈ ರಾಜ್ಯದ ಬಗ್ಗೆ, ಈ ಆರ್ಥಿಕ ಹೊಸ ಚಿಂತನೆ ಪ್ರಾರಂಭವಾಗುವುದಕ್ಕೂ ಮುಂಚೆ ಈ ರಾಜ್ಯದಲ್ಲಿ ನಾವೇನು ಯಶಸ್ವಿಯಾಗಿದ್ದೇವೆ ಅದಕ್ಕೆ ಕಾರಣ ಕರ್ನಾಟಕದ ನಾಗರೀಕರು, ಹೃದಯವಂತರು. ಇವರು ಎಲ್ಲರ ಜೊತೆಯಲ್ಲೂ ಹೊಂದಾಣಿಕೆಯಿಂದ ಜೀವನ ಮಾಡತಕ್ಕವರು ಎನ್ನುವ ಒಂದು ವಿಶ್ವಾಸವನ್ನು 1991ಕ್ಕಿಂತ ಮೊದಲೇ ಮೂಡಿಸಿದ್ದೇವೆ; ಅದರ ಜೊತೆಗೆ ಹಲವಾರು ಪ್ರಖ್ಯಾತವಾದ ಇಂಜಿನಿಯರಿಂಗ್ ಕಾಲೇಜುಗಳು ಇರಬಹುದು, ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆಯನ್ನು ಹಿಂದಿನ ದಿನಗಳಲ್ಲಿಯೂ ಈ ಚಿಂತನೆ ಮಾಡಿ ಯುವಕರಿಗೆ ಹೆಚ್ಚಿನ ಅವಕಾಶವನ್ನೇನು ಕಲ್ಪಿಸಿಕೊಟ್ಟಿದ್ದರು, ಆ ಮೂಲದ ಪ್ರಕಾರ ಈ ರಾಜ್ಯದಲ್ಲೇನು ಬಂಡವಾಳ ಹೂಡತಕ್ಕವರನ್ನು ನಾವು ಆಗಲೇ ನೋಡಿದ್ದೇವೆ. ಇಂಥ ಸನ್ನಿವೇಶದಲ್ಲಿ ಯಾರೂ ಇದರ ಬಗ್ಗೆ ನಾವು ಬಂದ ನಂತರ ಇದಕ್ಕೆಲ್ಲಾ ಹೊಸದಾಗಿ ತಂದುಬಿಟ್ಟಿದ್ದೇವೆ. ಬೆಂಗಳೂರಿಗೆ ಕರ್ನಾಟಕಕ್ಕೆ ಬಂಡವಾಳವನ್ನು ತಂದುಬಿಟ್ಟಿದ್ದೇವೆಂದು ಯಾರೂ ಹೇಳಿಕೊಳ್ಳಲು ಸಾಧ್ಯವಿಲ್ಲ. ಹಲವಾರು ಜನರ ಸೇವೆಯೇನಿದೆ, ಭಾವನೆಗಳೇನಿದೆ ಅವರ ಮುಂದಾಲೋಚನೆಗಳಿಂದ ಈವತ್ತು ಹಿಂದಿನಿಂದಲೂ ಈ ರಾಜ್ಯಕ್ಕೆ ಬಂಡವಾಳವನ್ನು ಹೂಡತಕ್ಕದ್ದರಲ್ಲಿ ತರತಕ್ಕದ್ದಲ್ಲಿ ಯಶಸ್ವಿಯಾಗಿದ್ದಾರೆಂದು ಹೇಳಲು ಬಯಸುತ್ತೇನೆ. ನವೆಂಬರ್ 11ನೇ ತಾರೀಖು ಏನು ದೇವೇಗೌಡರು ಮುಖ್ಯಮಂತ್ರಿಗಳಾದರು. ಅದಾದ ನಂತರ ಆವತ್ತೇನು ದೇಶದ ಪ್ರಧಾನ ಮಂತ್ರಿಗಳಾಗಿದ್ದಂಥ ನರಸಿಂಹರಾಯರು ಒಂದು ಆರ್ಥಿಕ ಬದಲಾವಣೆಯನ್ನು ತರತಕ್ಕಂಥ ಚಿಂತನೆ ಮಾಡಿದಂಥ ಡಾ॥ ಮನಮೋಹನ್‌ಸಿಂಗ್‌ರವರು ಅವರುಗಳ ಒಂದು ಒತ್ತಾಯದ ಮೇರೆಗೆ. ಆ ಸಂದರ್ಭದಲ್ಲಿ ಏನು ಮಾಡಿದರು; ಮಾನ್ಯ

ದೇಶ್‌ಪಾಂಡೆಯವರಿಗೆ ಈ ಎಲ್ಲಾ ವಿಷಯಗಳು ಗೊತ್ತಿರತಕ್ಕದ್ದು. ಆದರೆ ಈ ಸದನದಲ್ಲಿ ಹೊಸ ಸದಸ್ಯರುಗಳೇನಿದ್ದಾರೆ ಅವರುಗಳ ಗಮನಕ್ಕೆ ಕೆಲವು ವಿಷಯಗಳನ್ನು ತರಬಯಸುತ್ತೇನೆ. ಆ ಸಂದರ್ಭದಲ್ಲಿ ನರಸಿಂಹರಾಯರು ಈ ರಾಷ್ಟ್ರದ ಒಬ್ಬ ವಿರೋಧ ಪಕ್ಷದ ಮುಖ್ಯಮಂತ್ರಿಗಳು ಆ ದಾವೋಸ್ ಸಭೆಗೆ ಹೋಗಬೇಕೆಂದು ದೇವೇಗೌಡರಿಗೆ ಸೂಚನೆಯನ್ನು ಕೊಟ್ಟರು. ಆ ಸಂದರ್ಭದಲ್ಲಿ ಕೆಲವು ನಿರ್ಧಾರಗಳನ್ನು ಮಾಡಿದರು. ಮಾನ್ಯ ಎಂ.ಪಿ. ಪ್ರಕಾಶ್‌ರವರು ಅವರ ಮಂತ್ರಿಮಂಡಲದಲ್ಲಿದ್ದರು ಎಂದು ಕಾಣಿಸುತ್ತದೆ. ದೇಶ್‌ಪಾಂಡೆಯವರು ಪ್ರಮುಖವಾಗಿ ಆ ಸಂದರ್ಭದಲ್ಲಿ ಬಹಳ active ಆಗಿ ಎಲ್ಲಾ ವಿಷಯಗಳಲ್ಲೂ ಕೆಲಸ ಮಾಡುತ್ತಿದ್ದರು. ಅವರು ಈ ಸಭೆಯಲ್ಲಿ ಮಾತನಾಡಬೇಕಾದರೆ ಒಂದೆರಡು ವಿಷಯಗಳನ್ನು ಜ್ಞಾಪಿಸಿದರು. ಉದಾಹರಣೆಗೆ ಬೆಂಗಳೂರಿನ International Airport ಬಗ್ಗೆ I.T. Industries ಬಗ್ಗೆ ಆ ಐ.ಟಿ. ಪಾರ್ಕ್ ವಿಷಯದಲ್ಲಿ ಸಿಂಗಪುರ್‌ನ Prime Minister ಬಂದಂಥ ಘಟನೆಗಳನ್ನೇನು ತಾವು ನೆನಪಿಸಿಕೊಂಡಿರಿ; ನಾನು ಒಂದೆರಡು ವಿಷಯಗಳನ್ನು ಆ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳಲು ಬಯಸುತ್ತೇನೆ. ಏಕೆಂದರೆ ಹಿರಿಯರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಈವತ್ತು ಬೆಳಿಗ್ಗೆ ಪ್ರಸ್ತಾಪ ಮಾಡಬೇಕಾದರೆ ನಮ್ಮ ಪಕ್ಷದ Advertisement ಏನಿದೆ ಅದನ್ನು ಉದಾಹರಣೆಗಿಟ್ಟು ಹೇಳಿದ್ದಾರೆ. ಅದಕ್ಕೋಸ್ಕರ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಅದು ಬಿಟ್ಟರೆ advocate ಮಾಡಬೇಕೆಂದಲ್ಲ. ಆದ್ದರಿಂದ ಹಿಂದಿನವರು ಏನು ಮಾಡಿದ್ದಾರೆ ಎಂಬುದನ್ನು ಸ್ಮರಿಸಿಕೊಂಡಿದ್ದೇನೆ. International Airport ಬಗ್ಗೆ ಚರ್ಚೆ ಮಾಡಿದರು, International Airportನ್ನು ಪ್ರಾರಂಭ ಮಾಡಬೇಕೆಂದು ಆವತ್ತು ಮುಖ್ಯಮಂತ್ರಿಗಳಾಗಿ ದೇವೇಗೌಡರೇನು ತೀರ್ಮಾನ ಮಾಡಿದರು ಆವತ್ತು ಇದ್ದದ್ದು ಕೇಂದ್ರ ಸರ್ಕಾರದವರು International Airport Standard ಎಂದು ಕೊಟ್ಟಿದ್ದರು. only Cargo facilitiesಗೆ ಮಾತ್ರ ಅವರು permission ಕೊಟ್ಟಿದ್ದರು. ಮಾನ್ಯ ರೋಷನ್ ಬೇಗ್‌ರವರು ಸದನದಲ್ಲಿ ಕುಳಿತಿದ್ದಾರೋ, ಇಲ್ಲವೋ ನನಗೆ ಗೊತ್ತಿಲ್ಲ. ಮಾನ್ಯ ರೋಷನ್ ಬೇಗ್‌ರವರು ಅಂದಿನ ಮುಖ್ಯಮಂತ್ರಿಗಳ ಜೊತೆಗೆ ಎರಡು ಬಾರಿ ಕೇಂದ್ರ ಸರ್ಕಾರದ ವಿಮಾನಯಾನ ಸಚಿವರಾಗಿದ್‌ದ ಗುಲಾಂ ನಬಿ ಆಜಾದ್ ಅವರನ್ನು ಭೇಟಿ ಮಾಡಿದ್ದರು. ಇಲ್ಲಿಗೆ Cargo facilities ಮಾತ್ರ ಕೊಟ್ಟರೆ ಇದು ಯಶಸ್ವಿಯಾಗಲಿಕ್ಕೆ ಸಾಧ್ಯವಾಗುವುದಿಲ್ಲ, ಪ್ರಯಾಣಿಕರಿಗೆ ಅವಕಾಶ ಕೊಡದಿದ್ದರೆ ಇದನ್ನು ನಾವು ತರಲಿಕ್ಕಾಗುವುದಿಲ್ಲ, International Airport standard ಎಂದು

ನೀವೇನು ಕೊಟ್ಟಿದ್ದೀರಿ, ಇದು ಕಷ್ಟವಾಗುತ್ತದೆ ಎಂದು ಎರಡು ಬಾರಿ ಮನವಿ ಮಾಡಿದ್ದರು. ಕೇಂದ್ರ ಸರ್ಕಾರ ಅದಕ್ಕೆ ಒಪ್ಪಿಗೆ ಕೊಡಲಿಲ್ಲ. ಇವತ್ತು ಮಾನ್ಯ ರೋಷನ್ ಬೇಗ್‌ರವರು ಸದನದಲ್ಲಿ ಇದ್ದಿದ್ದರೆ ಅದರ ಬಗ್ಗೆ ಹೇಳಬಹುದಾಗಿತ್ತು. ಅವರು ಸದನಕ್ಕೆ ಬಂದಿಲ್ಲ. ಇವತ್ತು ನಮ್ಮ ಸನ್ಮಾನ್ಯ ಖರ್ಗೆಯವರು ಮಾತನಾಡತಕ್ಕ ಸನ್ನಿವೇಶದಲ್ಲಿ ಏನೋ ಹೊರಗಡೆ ಕೇವಲ ಪ್ರಚಾರಕ್ಕೋಸ್ಕರವಾಗಿ ಈ advertisement ಕೊಡತಕ್ಕಂಥದ್ದು, ಯಾರನ್ನೋ ಇಕ್ಕಟ್ಟಿಗೆ ಸಿಕ್ಕಿಸತಕ್ಕಂಥದ್ದು ಮಾಡಿದ್ದಾರೆ, ಇವರು ಕೇವಲ ಪ್ರಚಾರಕ್ಕೋಸ್ಕರ ಹೇಳಿದ್ದಾರೆ ಎನ್ನುವ ಮಾತನ್ನು ಹೇಳಿದ್ದರಿಂದ ಈ ಕೆಲವು ವಿಷಯಗಳನ್ನು ಹೇಳಬೇಕೆಂದು ತೀರ್ಮಾನಕ್ಕೆ ಬಂದಿದ್ದೇನೆ ಅಷ್ಟೆ. ನಮ್ಮ ಪಕ್ಷದ advertisement ಬಗ್ಗೆ ಹೇಳಿದ್ದಾರೆ; ನಾನು ಕೆಲವು ವಿಷಯಗಳನ್ನು ಈ ಸಂದರ್ಭದಲ್ಲಿ ಸದನದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ, ನೀರಾವರಿ ಕೆಲಸಗಳನ್ನು ಮಾಡುವುದಕ್ಕೆ 300 ಕೋಟಿ ರೂಪಾಯಿಗಳನ್ನು ಅಂದರೆ ಕಾವೇರಿಗೆ 100 ಕೋಟಿ ರೂಪಾಯಿಗಳು, ಉತ್ತರ ಕರ್ನಾಟಕಕ್ಕೆ 200 ಕೋಟಿ ರೂಪಾಯಿಗಳ ಹಣವನ್ನು ಕೊಡಬೇಕೆಂದು ಮನವಿ ಮಾಡಿದ್ದರು. ಆ ಸಂದರ್ಭದಲ್ಲಿ ಏನೇನು ಮಾತನಾಡಿದ್ದಾರೆ ಅದರ ಬಗ್ಗೆ ನಾನು ಇಲ್ಲಿ ಚರ್ಚೆಯನ್ನು ಮಾಡಲಿಕ್ಕೆ ಹೋಗುವುದಿಲ್ಲ. ಆದರೆ ಆ ಸಂದರ್ಭದಲ್ಲಿ ಅವರು 300 ಕೋಟಿ ರೂಪಾಯಿಗಳನ್ನು ತರಲಿಕ್ಕೆ ಯಶಸ್ವಿಯಾಗಲಿಲ್ಲ. ಅವರು ಮುಖ್ಯಮಂತ್ರಿಗಳಾಗಿ 300 ಕೋಟಿ ರೂಪಾಯಿಗಳನ್ನು ಅವತ್ತು ಕೇಳಿದ್ದರು ನೀರಾವರಿ ಕೆಲಸಗಳನ್ನು ಆದಷ್ಟು ಬೇಗ ತ್ವರಿತವಾಗಿ ಮುಗಿಸಬೇಕು, ಅದಕ್ಕೆ ಹಣವನ್ನು ಕೊಡಿ ಎಂದು ಏನು ಆಗ ಮನವಿ ಮಾಡಿದ್ದರು, ಆ ಸಂದರ್ಭದಲ್ಲಿ ಏನೇನು ರಾಜಕಾರಣಗಳಾಯಿತು, ಅದರ ಬಗ್ಗೆ ನಾನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ, ಈ ಸಂದರ್ಭದಲ್ಲಿ ಸಮಯವನ್ನು ಹೆಚ್ಚಿಗೆ ತೆಗೆದುಕೊಳ್ಳಲಿಕ್ಕೆ ಹೋಗುವುದಿಲ್ಲ. ಇವತ್ತು ಸನ್ಮಾನ್ಯ ಹಿರಿಯ ಎಂ.ಪಿ. ಪ್ರಕಾಶ್‌ರವರಿದ್ದಾರೆ, ಮಾನ್ಯ ದೇಶಪಾಂಡೆಯವರಿದ್ದಾರೆ, ನೀರಾವರಿಯ ಬಗ್ಗೆ ಅವರೇನು ಅವತ್ತು 300 ಕೋಟಿ ರೂಪಾಯಿಗಳನ್ನು ಕೇಳಿದ್ದರು, ಅದು ಕೇವಲ ಹೊರಗಡೆ ಜನಗಳನ್ನು ಮೆಚ್ಚಿಸಲಿಕ್ಕೆ ಹೇಳಿದಂತದ್ದು ಎಂಬುದು ಏನಿದೆ, ಆ ಸಂದರ್ಭದಲ್ಲಿ ಹಲವಾರು ಘಟನೆಗಳು ನಡೆದಿವೆ, ಅದರ ಬಗ್ಗೆ ನಾನು ಹೇಳಲಿಕ್ಕೆ ಹೋಗುವುದಿಲ್ಲ. ಆ ಮುಖ್ಯಮಂತ್ರಿಗಳ ಮೇಲೆ ಅವರು ಹುಟ್ಟಿದಾಗಿನಿಂದಲೂ, ಅವರ ಜೀವನದಲ್ಲಿ ಆಪಾದನೆಗಳು ಬಂದಿವೆ, ಅವುಗಳ ಬಗ್ಗೆ ನಾನು ಇಲ್ಲಿ ಹೆಚ್ಚಿಗೆ ಚರ್ಚೆ ಮಾಡುವುದಿಲ್ಲ. ಏನು ಆ ಸಂದರ್ಭದಲ್ಲಿ ಮುಖ್ಯಮಂತ್ರಿಗಳಾಗಿ, ಮೊದಲನೇ ಬಾರಿಗೆ ಉತ್ತರ ಕರ್ನಾಟಕದ ನೀರಾವರಿಗೆ ಏನು ಹಣವನ್ನು ಕೊಡಬೇಕು ಎಂದು ತೀರ್ಮಾನ

ಮಾಡಿ ಪ್ರಾರಂಭ ಮಾಡಿದರು, ಕಾರ್ಯರೂಪಕ್ಕೆ ತಂದರು, ಅದು ಹಿರಿಯ ಸದಸ್ಯರುಗಳಿಗೆ ಗೊತ್ತಿರತಕ್ಕಂಥದ್ದು, ಅದರ ಬಗ್ಗೆ ಹೆಚ್ಚಿಗೆ ಹೇಳಲಿಕ್ಕೆ ನಾನು ಬಯಸುವುದಿಲ್ಲ. ಏಕೆಂದರೆ ಕೇವಲ ಹೊರಗಡೆ ಜನಗಳನ್ನು ಮೆಚ್ಚಿಸಲಿಕ್ಕೆ ಮಾಡಿದಂತದ್ದಲ್ಲ ಎನ್ನುವುದಕ್ಕೆ ಈ ಸ್ಪಷ್ಟೀಕರಣ ಕೊಡಲಿಕ್ಕೆ ಬಯಸುತ್ತೇನೆ. ಅವರು ಅವತ್ತಿನಿಂದಲೂ ಯಾವ ರೀತಿಯಾಗಿ ಕೆಲಸ ಮಾಡಿಕೊಂಡು ಬಂದಿದ್ದಾರೆ ಎನ್ನುವುದಕ್ಕೋಸ್ಕರ ಇದನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ. ರೈತರ ಬಗ್ಗೆ ಮೊಸಳೆ ಕಣ್ಣೀರು ಹಾಕುತ್ತಾರೆಂದು ಕೆಲವರು ವಿಷಯವನ್ನು ಚರ್ಚೆ ಮಾಡಿದರು. ಅವರ ಜೀವನವೇ ಅದರಲ್ಲಿ ಬಂತು ಎಂದು ಇಲ್ಲಿ ಕೆಲವರು ಹೇಳುತ್ತಾರೆ. ನಾನು ಇವತ್ತು ಮಾನ್ಯ ವಾಟಾಳ್ ನಾಗರಾಜ್‌ರವರು 1962ರಲ್ಲಿ ಇದ್ದರೋ ಇಲ್ಲವೋ ಗೊತ್ತಿಲ್ಲ, ಆಗ ತಾವು ಮೊದಲನೇ ಬಾರಿಗೆ ಎಲೆಕ್ಟ್ ಆಗಿದ್ದಿರಿ ಎಂದು ಕಾಣಿಸುತ್ತದೆ, ಇಲ್ಲ, 1967ರಲ್ಲಿ ಬಂದಿರಿ ಅನ್ನಿಸುತ್ತದೆ. ಆಗ ಮಾನ್ಯ ಖರ್ಗೆ ಸಾಹೇಬರು ಇದ್ದರು ಎಂದು ಕಾಣುತ್ತದೆ. ಅವರೂ ಇರಲಿಲ್ಲವೇ ? ಆಗ ಅವರು ಪಕ್ಷೇತರ ಸದಸ್ಯರಾಗಿ ಏನು ಚಿಕ್ಕ ವಯಸ್ಸಿನಲ್ಲೇ ಮೊದಲನೇ ಬಾರಿಗೆ ಸದನಕ್ಕೆ ಪ್ರವೇಶ ಮಾಡಿದರು, ಆ ಸಂದರ್ಭದಲ್ಲೇ ಒಂದು ನೀರಾವರಿಯ ಬಗ್ಗೆ Private Bill ತಂದಿದ್ದರು. ಅವರು ಆ ವಯಸ್ಸಿನಲ್ಲಿ ಏನು ರೈತರ ಬಗ್ಗೆ, ನೀರಾವರಿಯ ಬಗ್ಗೆ ಚರ್ಚೆಯನ್ನು ಮಾಡಿದರೋ, ಅವರದ್ದು ಇವತ್ತಿಗೂ ಅದೇ stand. ನಿನ್ನೆ ಪಾಪ! ನಮ್ಮ ಮಾನ್ಯ ರಾಜೇಂದ್ರನ್‌ರವರು ಒಂದು ಮಾತನ್ನು ಬಹಳ ಸ್ವಾರಸ್ಯವಾಗಿ ಹೇಳಿದರು. 'ರೈತರು, ರೈತರು' ಎಂದು ಎಲ್ಲರೂ ರೈತರ ಬಗ್ಗೆ ಹೇಳುತ್ತೇನೆ. ಆದರೆ ಪಾಪ! ಆತ ಎಲ್ಲೋ ಒಂದು ಕಡೆ ಬಿದ್ದಿದ್ದಾನೆ. ಅವನನ್ನು ಯಾರು ಕೇಳುತ್ತಾರೆ. ಅವನ ಹೆಸರಿನಲ್ಲಿ ನಾವು ಇಲ್ಲಿ ಕುಳಿತಿದ್ದೇವೆ ಎನ್ನುವಂತಹ ಒಂದು ಮಾತನ್ನು ಹೇಳಿದರು. ಆದರೆ ಒಂದು clarification ಅನ್ನು ನಾನಿಲ್ಲಿ ಕೊಡಬಯಸುತ್ತೇನೆ. ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ, ಟೀಕೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ನಾನು ಯಾರ ಮೇಲೂ ದೋಷ ಹೊರಿಸುವುದಕ್ಕೆ ಹೋಗುವುದಿಲ್ಲ. ಅವರು ನಡೆದು ಬಂದಂತಹ ದಾರಿ ಬಗ್ಗೆ ಒಂದೆರಡು ಉದಾಹರಣೆಗಳನ್ನು ಮಾತ್ರ ಇಲ್ಲಿ ಕೊಟ್ಟಿದ್ದೇನೆ ಅಷ್ಟೆ. ಅವತ್ತು ಏನು ಅವರು ಚಿಕ್ಕ ವಯಸ್ಸಿನಲ್ಲಿ ರೈತರ ಬಗ್ಗೆ ಚಿಂತನೆ ಮಾಡಿದರೋ, ಇವತ್ತಿಗೂ ಅವರ ಬಗ್ಗೆ ಅದೇ ಚಿಂತನೆಯಲ್ಲಿದ್ದಾರೆ. ಮುಂದೆ ಈ ವಿಷಯದ ಬಗ್ಗೆ ಚರ್ಚೆಯನ್ನು ಮಾಡಿದಾಗ ನಾನು ಹೇಳ ಬಯಸುತ್ತೇನೆ. ಅದೇ ರೀತಿ ಇವತ್ತು ಸೀ–ಬರ್ಡ್ ಪ್ರಾಜೆಕ್ಟ್ ಬಗ್ಗೆಯೂ ಸಹ ಮಾತನಾಡುತ್ತೇವೆ, ಕೈಗಾ ಪ್ರಾಜೆಕ್ಟ್ ಬಗ್ಗೆಯೂ ಸಹ ಮಾತನಾಡುತ್ತೇವೆ. ನಮ್ಮ ಸನ್ಮಾನ್ಯ ದೇಶಪಾಂಡೆಯವರು ಹೇಳಿದ ಹಾಗೆ, ಎಲ್ಲೋ ಒಂದು ಕಡೆ ಭಗವಂತ ಮೂಲೆಯಲ್ಲಿ ಕುಳಿತುಕೊಂಡು ನೋಡುತ್ತಾನೆ

ಎಂದು ಹೇಳಿದರಲ್ಲಾ, ಆ ಭಗವಂತನ ಆರ್ಶೀವಾದದಿಂದ, ಈ ರಾಜ್ಯದ ಜನತೆ ಮೊದಲನೇ ಬಾರಿಗೇ 16 ಸ್ಥಾನಗಳನ್ನು ಗೆಲ್ಲಿಸಿ ಕೊಟ್ಟು ಏನು ಪ್ರಧಾನ ಮಂತ್ರಿಗಳು ಆದರು ಅದನ್ನು ನೆನಪಿಸಿಕೊಳ್ಳಲಿಕ್ಕೆ ಬಯಸುತ್ತೇನೆ, ಕೈಗಾ ಪ್ರಾಜೆಕ್ಟ್‌ನಲ್ಲಿ ಮೇಲ್ಛಾವಣಿಗಳು ಕುಸಿದು ಬಿದ್ದಾಗ, ಅದರ ಬಗ್ಗೆ ಯಾರದ್ದೂ ಚಿಂತನೆಯೇ ಇರಲಿಲ್ಲ. 150 ಕೋಟಿ ರೂಪಾಯಿಗಳನ್ನು ಕೊಡತಕ್ಕಂಥ ತೀರ್ಮಾನ ಮಾಡಿದ್ದು ಅವರೇ. ನಂತರ ಈ International Airport ವಿಷಯ, ಅದೂ ಒಂದು ದೊಡ್ಡ ಚರ್ಚೆಯಾಯಿತು. ಆಗ ನಾನು ಕನಕಪುರ ಕ್ಷೇತ್ರದಿಂದ ಲೋಕಸಭಾ ಸದಸ್ಯನಾಗಿದ್ದೆ. ಆ ಸಂದರ್ಭದಲ್ಲಿ ಏನು ದೇವನಹಳ್ಳಿ ಹತ್ತಿರ ಮಾಡಬೇಕೋ, ರಾಮನಗರ-ಬಿಡದಿ ಹತ್ತಿರ ಮಾಡಬೇಕೋ ಎಂಬ ಬಗ್ಗೆ ಚರ್ಚೆಯಾಯಿತು. ಅದರ ಬಗ್ಗೆ ಇಲ್ಲಿ ಯಾರೋ ಗಮನ ಸೆಳೆದರು, ಅದರ ಬಗ್ಗೆ ಒಂದು ದೊಡ್ಡ ಚರ್ಚೆ ನಡೆಯಿತು. ದೇವೇಗೌಡರು ಮತ್ತು ದೇವೇಗೌಡರು ಕುಟುಂಬದ 400 ಎಕರೆ ಜಮೀನು ಇದೆ, ಅದಕ್ಕೋಸ್ಕರ ಅವರು ಅಲ್ಲಿ Airport ತೆಗೆದುಕೊಂಡು ಹೋಗಲಿಕ್ಕೆ ಹೊರಟಿದ್ದಾರೆ ಎಂದರು. ಅವತ್ತು ಆದಂತಹ ತೀರ್ಮಾನ Defence ನವರು, ಏನು ಅಲ್ಲಿ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದೆಲ್ಲಾ ಏಕೆ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಅದೆಲ್ಲಾ ಬೇಕು, ಒಂದು ನಿಮಿಷ. ಏಕೆಂದರೆ ಅದರ ಬಗ್ಗೆ ಇಲ್ಲಿ ಪ್ರಸ್ತಾಪವಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದು ಹೋಗಲಿ ಬಿಡಿ. ಎಷ್ಟು ಸಾವಿರ ಎಕರೆ ಇದೆ ಎಂಬುದೆಲ್ಲಾ ಬೇಡ. ಎಷ್ಟು ಇದೆ ಎಂಬುದನ್ನಾದರೂ ನೀವೇ ಹೇಳಿಬಿಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ನೀವೇ ಅದರ ಬಗ್ಗೆ Election Commissionಗೆ ಕೊಟ್ಟು ಬಿಟ್ಟಿದ್ದೀರಿ. ಪಾಪ! ನನ್ನ ಆಸ್ತಿ ಎಷ್ಟು ಎಂದು ಆ ಪುಣ್ಯಾತ್ಮನೇ ನಿಮಗೆ ಒದಗಿಸಿ ಕೊಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಆಸ್ತಿ ಎಷ್ಟಿದೆ ಎಂಬುದನ್ನು ನೀವೇ ಹೇಳಿಬಿಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ನಾನು ಈಗ ಅದಕ್ಕೇ ಬರುತ್ತಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ : ದಯವಿಟ್ಟು ಒಂದು ನಿಮಿಷ ಯೀಲ್ಡ್ ಆಗಿ. ಮಾನ್ಯ ಖರ್ಗೆ ಸಾಹೇಬರು ದೇವೇಗೌಡರ ಆಸ್ತಿ ಮತ್ತು ಅವರ ಮಕ್ಕಳ ಆಸ್ತಿ ಏನೇನಿದೆ ಎನ್ನುವುದನ್ನು ಹೇಳಿಬಿಡಿ ಎಂದರು. ಈ ರಾಜ್ಯದಲ್ಲಿ COD, ಲೋಕಾಯುಕ್ತ ಎಲ್ಲಾ ತನಿಖೆ ಎದುರಿಸಿರುವಂತಹ ಯಾರಾದರೂ ಒಬ್ಬ ರಾಜಕಾರಣಿ ಇದ್ದರೆ, ಅದು ದೇವೇಗೌಡರು ಬಿಟ್ಟು ಬೇರೆ ಯಾರೂ ಇಲ್ಲ. ಎಲ್ಲಾ entire ಆಸ್ತಿ ಲೋಕಾಯುಕ್ತ,

High Court, Supreme Court ಎಲ್ಲಾ ಕಡೆಯೂ ರೆಕಾರ್ಡ್ ಆಗಿ ರಿಜಿಸ್ಟರ್ ಮಾಡಿ ಇಟ್ಟು ಬಿಟ್ಟಿದ್ದಾರೆ. ಅದನ್ನು ಮಾನ್ಯ ಖರ್ಗೆ ಸಾಹೇಬರಿಗೆ ತಿಳಿಸುತ್ತೇನೆ ಅಷ್ಟೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆ ಮಾತು ಮಾನ್ಯ ಮುಖ್ಯಮಂತ್ರಿಗಳ ಬಾಯಿಂದ ಬರುತ್ತಿದೆ. ಅದಕ್ಕೇ ನಾನು ಕೇಳಿದೆ. ಹೀಗೆಲ್ಲಾ ಹೇಳುತ್ತಿದ್ದಾರೆ ಎಂದು ಅವರು ಹೇಳಿದರು. ಜನ ಹೇಳುವುದು ಬಿಡಿ, ನಿಮ್ಮ ಬಾಯಿಂದಲೇ ಎಷ್ಟಿದೆ ಎಂಬುದನ್ನು ಹೇಳಿ ಎಂದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಹಿರಿಯ ಸದಸ್ಯರಾದ ಖರ್ಗೆಯವರ ಗಮನಕ್ಕೆ ನಾನೇ ಅದನ್ನು ತಂದು ಬಿಡುತ್ತೇನೆ. ಅದರಲ್ಲಿ ಏನೂ ಕದ್ದು ಮುಚ್ಚಿ ಮಾಡುವಂತಾದ್ದು ಇಲ್ಲ. ನಾನು ಮಾನ್ಯ ರಾಯರೆಡ್ಡಿಯವರಿಗೂ ಅದನ್ನೇ ಹೇಳಿದೆ. ಮಾನ್ಯ ರಾಯರೆಡ್ಡಿಯವರು ಮಾತನಾಡುವಾಗ ಎಲ್ಲೋ ಒಂದು ಕಡೆ ನಮ್ಮ ಸದಸ್ಯರು ಉದ್ವೇಗಕ್ಕೆ ಒಳಗಾದರು. ಆಗ ನಾನು ದಯವಿಟ್ಟು ಅವರಿಗೆ free ಆಗಿ ಮಾತನಾಡಲು ಬಿಡಿ ಎಂದು ಹೇಳಿದೆ. ದೇವೇಗೌಡರು ಬಹಳ ತ್ವರಿತವಾಗಿ ಏಕೆ decision ತೆಗೆದುಕೊಂಡು ಬಿಟ್ಟರು ಎಂದು ಕೇಳಿದರು. ನಾನು ಆಗ ಅದಕ್ಕೇ ಹೇಳಿದೆ, ನೇರವಾಗಿಯೇ ಮಾತನಾಡಿ, ದೇವೇಗೌಡರು ಏನು ಮಾಡಿದ್ದಾರೆ, ಇದನ್ನೆಲ್ಲಾ ಸದನದ ಮುಂದೆ ಅವರು ತರಲಿ ಸುತ್ತು ಬಳಸಿ ಯಾರೂ ಮಾತನಾಡುವುದು ಬೇಡ ಎಂದು ಹೇಳಿದೆ. ಈ International Airport ವಿಷಯದಲ್ಲಿ ಏನು ತೀರ್ಮಾನ ಮಾಡಿದರು ಅಂದರೆ, ಇವತ್ತು ಕೆಲವು ಪಕ್ಷದವರು ನಾವು ಇದನ್ನು ತಂದು ಬಿಟ್ಟೆವು ಎಂದು ಬೆನ್ನು ತಟ್ಟಿಕೊಳ್ಳುತ್ತಾರೆ. ಈ International Airport standard ಅನ್ನುವುದನ್ನು ಬದಲಾವಣೆ ಮಾಡಿಸಬೇಕೆಂದು ಏನು ಮಾನ್ಯ ರೋಷನ್ ಬೇಗ್‌ರವರ ಜೊತೆಯಲ್ಲಿ ಎರಡು ಬಾರಿ ಮಾನ್ಯ ದೇವೇಗೌಡರು ಮುಖ್ಯಮಂತ್ರಿಯಾಗಿ ಹೋದರು, ಕೇಂದ್ರ ಸರ್ಕಾರ ಅದಕ್ಕೆ permission ಅನ್ನು ಕೊಟ್ಟಿರಲಿಲ್ಲ. 1996ರಲ್ಲಿ ಕೇಂದ್ರದಲ್ಲಿ ಅವರು ಪ್ರಧಾನ ಮಂತ್ರಿಗಳಾದಾಗ, ಅವರು ಆ ಸಂದರ್ಭದಲ್ಲಿ ಇದು International Airport ಎಂದು ಹೇಳಿ ತೀರ್ಮಾನ ಕೊಟ್ಟರು. ನಾನು Defence subject ಏಕೆ ತಂದೆ ಎಂದರೆ, ಅವತ್ತು ನಮ್ಮ ಮೇಲೆ ಏನೊಂದು ಆಪಾದನೆ ಬಂತು, ಆ ದೃಷ್ಟಿಯಿಂದ. ಆಪಾದನೆ ಮಾಡಿದರು ಎಂದು ನಾನು ಯಾರ ಬಗ್ಗೆಯೂ ನಾನು ಏನು ಹೇಳುವುದಿಲ್ಲ. ನಾನು ಸದನದಲ್ಲಿ ಒಬ್ಬ ಯುವಕನಾಗಿ ಇಲ್ಲಿ ನಿಂತಿದ್ದೇನೆ, ನನಗೆ ಅನುಭವ ಇಲ್ಲ, ವಯಸ್ಸಿನಲ್ಲೂ ನಾನು ಚಿಕ್ಕವನಾಗಿದ್ದೇನೆ, ನಾನು ಯಾವುದೇ ರಾಗ-ದ್ವೇಷಕ್ಕೆ ಒಳಗಾಗುವುದಿಲ್ಲ, ನಿಮ್ಮೆಲ್ಲರ ಸಹಕಾರ ಬೇಕು ಎಂದು ವಿಶ್ವಾಸ ಸಮತ ಕೇಳುವ ಸನ್ನಿವೇಶದಲ್ಲಿ ಅವತ್ತೇನು ಕೇಳಿದ್ದೇನೊ, ಅದೇ ಮಾತುಗಳನ್ನು ಇವತ್ತು ಪುನರುಚ್ಚಾರ

ಮಾಡಲಿಕ್ಕೆ ಬಯಸುತ್ತೇನೆ. ಆದರೆ ಅವರ ವಿಷಯಗಳು ಬಂದಿದ್ದರಿಂದ ನಾನು ಅದರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದೆ. ಇಲ್ಲದಿದ್ದರೆ ಇವತ್ತಿನ ಸಂದರ್ಭದಲ್ಲಿ ಆ ವಿಚಾರಗಳನ್ನು ನಾನು ತರುತ್ತಿರಲಿಲ್ಲ. ಅವತ್ತು ಕೈಗಾ ಪ್ರಾಜೆಕ್ಟ್‌ಗೆ 150 ಕೋಟಿ ರೂಪಾಯಿಗಳನ್ನು ಕೊಟ್ಟು ತೀರ್ಮಾನ ಮಾಡಿದರು ಎಂದು ಹೇಳಿದೆ. ಇವತ್ತು ನೀರಾವರಿಯ ಬಗ್ಗೆ, ರೈತರ ಬಗ್ಗೆ ಓಟಿಗೋಸ್ಕರ ಮೊಸಳೆ ಕಣ್ಣೀರು ಹಾಕುತ್ತಾರೆ, ಅವರ ಹೆಸರಿನಲ್ಲಿ ಅಧಿಕಾರಕ್ಕೆ ಬರಲು ಮತ್ತು ಆಸ್ತಿ ಮಾಡಲಿಕ್ಕೆ ಇದೆಲ್ಲಾ ನಾಟಕ ಎನ್ನುತ್ತಾರೆ. ಪ್ರಧಾನ ಮಂತ್ರಿಗಳಾಗಿ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ Accelerated Fund ಎಂದು create ಮಾಡಿದಂತಹವರು, ಅದರ ಮುಖಾಂತರ ಉತ್ತರ ಕರ್ನಾಟಕದ ನೀರಾವರಿಗೆ 2 ಸಾವಿರ ಕೋಟಿ ರೂಪಾಯಿಗಳವರೆಗೆ ಹಣ ತಂದು ಕೊಟ್ಟಂತಹವರು, ಅದರ ಬಗ್ಗೆ ಮೊದಲನೇ ತೀರ್ಮಾನ ಮಾಡಿದವರು ದೇವೇಗೌಡರು ಎಂದು ನಾನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಲಿಕ್ಕೆ ಬಯಸುತ್ತೇನೆ. ಅದೇ ರೀತಿ ಇವತ್ತು ನಬಾರ್ಡ್ ಇರಬಹುದು. ಇವತ್ತು ನಬಾರ್ಡ್‌ನಿಂದ ನಮ್ಮ ಶಾಸಕ ಮಿತ್ರರುಗಳು ರಸ್ತೆ ಕೆಲಸಕ್ಕೆ, bridge ಕೆಲಸಕ್ಕೆ ಹಣ ಕೇಳುತ್ತಾರೆ. ಪ್ರಧಾನ ಮಂತ್ರಿಗಳಾಗಿ ನಬಾರ್ಡ್ ಸಂಸ್ಥೆಯಿಂದ ಹಣವನ್ನು ರೈತರಿಗೆ, ಹಳ್ಳಿಗಳ ಕೆಲಸಗಳಿಗೆ ಹಣವನ್ನು ಕೊಡಬೇಕು ಎಂದು ತೀರ್ಮಾನ ಮಾಡಿದಂತಹವರು ದೇವೇಗೌಡರು ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಇವತ್ತು ಭೂಸುಧಾರಣೆ ವಿಷಯದಲ್ಲಿ ದೇವೇಗೌಡರು ತಪ್ಪು ಮಾಡಿದರು ಎಂದು ಹಿರಿಯ ಸ್ನೇಹಿತರಾಗಿರತಕ್ಕಂಥ ಖರ್ಗೆ ಸಾಹೇಬರು ಹೇಳಿದ್ದಾರೆ; ಈ ಒಂದು ಹೊಸ ವ್ಯವಸ್ಥೆ ಉದಾರೀಕರಣ–ಜಾಗತೀಕರಣದ ವ್ಯವಸ್ಥೆಯೊಳಗೆ ಕೆಲವು ತೀರ್ಮಾನಗಳನ್ನು ಮಾಡಬೇಕು ಎಂದು ದಾವೋಸ್‌ಗೆ ಹೋಗತಕ್ಕಂಥ ಹಿನ್ನೆಲೆಯೊಳಗೆ, ಹಲವಾರು ಸಮಸ್ಯೆಗಳು ಏನಿತ್ತೋ, ಬಂಡವಾಳ ಹೂಡತಕ್ಕಂಥವರಿಗೆ, ಜಮೀನು ಕೊಡತಕ್ಕಂಥ ವಿಷಯದಲ್ಲಿ ತೀರ್ಮಾನ ಮಾಡಿ, ಆಗ ಮಾನ್ಯ ದೇವರಾಜ್ ಅರಸ್‌ರವರು ತಂದಂತಹ ಒಂದು ಕಾನೂನನ್ನು ಬದಲಾವಣೆ ಮಾಡಿ, ರೈತರ ಹೊಟ್ಟೆ ಮೇಲೆ ಹೊಡೆದಿದ್ದಾರೆ ಎಂದು ಏನು ಇವತ್ತು ಸನ್ಮಾನ್ಯ ಹಿರಿಯ ಸದಸ್ಯರುಗಳು ಹೇಳುತ್ತಿದ್ದಾರೆ, ಅವರು ಅವತ್ತೂ ವಿರೋಧ ಮಾಡಿದ್ದಾರೆ. ನಾನು ಈ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ, ಇತ್ತೀಚೆಗೆ ಪತ್ರಿಕಾ ಸಂದರ್ಶನದಲ್ಲೂ ಅದನ್ನು ಹೇಳಿದ್ದಾರೆ, ಅವರ ಸ್ಟ್ಯಾಂಡ್ ಅವತ್ತಿನಿಂದ ಇವತ್ತಿನವರೆಗೆ ಅದೇ ಇದೆ; ಅದನ್ನು ತಪ್ಪು ಎಂದು ಹೇಳುವುದಿಲ್ಲ, ಒಂದು ಸುದ್ದುದ್ದೇಶ ಇಟ್ಟುಕೊಂಡು ಅವರು ಹೇಳಿರತಕ್ಕಂಥದ್ದು. ಈ ರೀತಿಯಾಗಿ ಭೂಸುಧಾರಣೆ ಕಾನೂನಿನಲ್ಲಿ ಮಾರ್ಪಾಡು ತರುವುದರ ಮೂಲಕ, ಮತ್ತೆ ಬಡರೈತರ ಹೊಟ್ಟೆ ಮೇಲೆ ಒಡೆದು ಈ ಬಂಡವಾಳ ಶಾಹಿಗಳು ಮತ್ತೆ ಈ ಜಮೀನನ್ನು

ಕಬಳಿಸುತ್ತಾರೆನ್ನುವ ಆ ಭಾವನೆಯಿಂದ ಈ ಸಂದರ್ಭದಲ್ಲಿ ವಿರೋಧ ಮಾಡಿರತಕ್ಕಂಥದ್ದು. ಆ ಭೂಸುಧಾರಣಾ ಕಾನೂನನ್ನು ಈ ಸದನದಲ್ಲಿ ದೇವೇಗೌಡರು ತಂದಂತಹ ಸಂದರ್ಭದಲ್ಲಿ ಅದರಲ್ಲಿ ಕೆಲವು ಕಾನೂನುಗಳನ್ನೂ ಇಟ್ಟಿದ್ದರು, ಒಂದು ಕಮಿಟಿ ಮಾಡಿದ್ದರು; ಲ್ಯಾಂಡ್ ವ್ಯಾಲ್ಯುವೇಷನ್ ಇರಬಹುದು,. ಬಂಡವಾಳ ಹೂಡತಕ್ಕಂಥ ಒಂದು ಜಮೀನು ಕೇಳುವ ಮಾಲೀಕ ಬರುತ್ತಾನೆ, ಅವನು ಎಷ್ಟು ಜನಕ್ಕೆ ಉದ್ಯೋಗ ಕೊಡುತ್ತಾನೆ, ಅವನ ಹಿನ್ನೆಲೆ ಏನು ಆ ಒಂದು ಬಂಡವಾಳ ಹೂಡುವುದಕ್ಕೆ ಎಷ್ಟು ಜಮೀನು ಬೇಕಾಗುತ್ತದೆ, ಇದನ್ನು ತೀರ್ಮಾನ ಮಾಡುವುದಕ್ಕೆ ಒಂದು ಹೈಲೆವಲ್ ಕಮಿಟಿಯನ್ನೂ ಅವರು ಈ ಸಂದರ್ಭದಲ್ಲಿ ಮಾಡಿದ್ದರು. ಇದನ್ನೆಲ್ಲಾ ಅವರು ಗಮನದಲ್ಲಿಟ್ಟುಕೊಂಡು ಅವತ್ತು ಅವರು ಭೂಸುಧಾರಣೆ ಕಾನೂನು ತರುವುದಕ್ಕೆ ಆಗ ತೀರ್ಮಾನ ಮಾಡಿದ್ದರು. ಅದಕ್ಕೆ ಕೆಲವು ಕಾನೂನಿನ ಚೌಕಟ್ಟಿನಲ್ಲಿ ಕಾನೂನು ತಂದು ಸರಿಯಾದ ಶಕ್ತಿಯನ್ನು ಕೊಟ್ಟಿದ್ದರೆಂದು ಹೇಳುವುದಕ್ಕೆ ಬಯಸುತ್ತೇನೆ. ಈ ಭೂಸುಧಾರಣೆಯ ವಿಷಯದಲ್ಲಿ ನಮ್ಮ ಹಿರಿಯ ಸದಸ್ಯರು ಏನು ಈ ಸಂದರ್ಭದಲ್ಲಿ ಹೇಳಿದ್ದಾರೆ; ಮತ್ತೆ ಬ್ರಿಟನ್‌ನ ಕೆನಿತ್ ಕ್ಲಾರ್ಕ್ ಎಂಬುವವರು ಭೇಟಿ ಕೊಟ್ಟಿದ್ದಾರೆ, ಆವಾಗ ನಾವೆಲ್ಲಾ ಹುಡುಗರು ಅಷ್ಟೊಂದು ವಿಷಯಗಳು ತಿಳಿದಿರಲಿಲ್ಲ, ಆದರೆ ದೇಶ ಪಾಂಡೆಯವರಿಗೆ ಗೊತ್ತಿರುವ ವಿಚಾರ. ಆ ಸಂದರ್ಭದಲ್ಲಿ ಎನ್ರಾನ್ ಪ್ರಾಜೆಕ್ಟ್ ಮತ್ತೆ ಕೆಲವು ವಿಷಯಗಳ ಬಗ್ಗೆ ಅವರು ಈ ಬೆಂಗಳೂರಿಗೆ ಬಂದಂತಹ ಸಂದರ್ಭದಲ್ಲಿ ಕೆಲವು ಪ್ರಶ್ನೆಗಳನ್ನು ಇಡುತ್ತಾರೆ. ಏನು ದಾವೂಸ್‌ಗೆ ಹೋಗಬೇಕೆಂದು ಅಂದಿನ ಪ್ರಧಾನಮಂತ್ರಿಗಳು ನಮ್ಮ ರಾಜ್ಯದ ಮುಖ್ಯಮಂತ್ರಿಗಳಿಗೆ ಹೇಳಿದರು, ಆ ಸಂದರ್ಭದಲ್ಲಿ ದೇವೇಗೌಡರೇ ಕೆಲವು ಕ್ಲಾರಿಫಿಕೇಷನ್ಸ್ ಕೊಟಿದ್ದಾರೆ, ಅದು ಬಂದಿದೆ. ಅದು ಭೂಸುಧಾರಣಾ ತಿದ್ದುಪಡಿಯನ್ನು ತರುವುದಕ್ಕೆ ಕಾರಣ, ಮತ್ತೆ ಕೆಲವು ಮಾರ್ಪಾಡುಗಳನ್ನು ತರುವುದಕ್ಕೆ ಏನು ಕಾರಣವೆನ್ನುವುದರ ಬಗ್ಗೆ ಅಲ್ಲಿ ಏನು ಚರ್ಚೆಗಳಾಗಿದ್ದಾವೆ, ಅವೆಲ್ಲಾವನ್ನೂ ಇಲ್ಲಿ ಓದುವುದಕ್ಕೆ ಹೋಗುವುದಿಲ್ಲ; ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ವಿದೇಶಕ್ಕೆ ಹೋಗುವ ಸನ್ನಿವೇಶದಲ್ಲಿ ಕೆಲವು ತೀರ್ಮಾನಗಳನ್ನು ಮಾಡಿದರು; ಇವತ್ತೇನು ಐಟಿ ಪಾರ್ಕ್ ಕುರಿತೇನು ಮಾತನಾಡುತ್ತೇವೆ, ಬೆಂಗಳೂರುನಗರವನ್ನು ಇವತ್ತು ವಿಶ್ವನೋಡುತ್ತಿರುವುದಕ್ಕೆ, ಈ ಸಾಫ್ಟ್‌ವೇರ್ ಇಂಡಸ್ಟ್ರೀ ಮೂಲ ಕಾರಣವೆಂದೇನು ನಾವು ಹೆಮ್ಮೆಯಿಂದ ಹೇಳುತ್ತೇವೆ. ನಾನು ದೇಶಪಾಂಡೆಯವರನ್ನು ನೆನಪಿಸಿಕೊಳ್ಳುವುದಕ್ಕೆ ಬಯಸುತ್ತೇನೆ; ಸಿಡಿಪಿ ಪ್ಲಾನ್, ಅವತ್ತಿನ ಮುಖ್ಯಮಂತ್ರಿಗಳು ಎಲ್ಲೋ ಹಳ್ಳಿಯಿಂದ ಬಂದಂಥವರು; ಅವರಿಗೆ ವಿದೇಶವನ್ನು ಇನ್ನೂ ಸುತ್ತಿರಲಿಲ್ಲ, ವಿದೇಶಗಳಿಗೆ

ವಿರೋಧಪಕ್ಷದ ನಾಯಕರಾಗಿ ಹೋಗಿದ್ದರೇನೋ ಗೊತ್ತಿಲ್ಲ, ಆ ಒಂದು ಬಂದಂಥ ಹಿನ್ನೆಲೆಯಲ್ಲಿ ತಕ್ಷಣ ಸಿಡಿಪಿ ಪ್ಲಾನ್ ಬದಲಾವಣೆ ಮಾಡಬೇಕೆಂದು ತೀರ್ಮಾನ ಮಾಡಿ, ಕೆಲವು ತೀರ್ಮಾನಗಳನ್ನು ಕೊಟ್ಟರು. ಇವತ್ತು ನಮ್ಮ ಹಿರಿಯ ಸದಸ್ಯರು ಇವತ್ತು 17–18 ಕಿ.ಮೀ ವ್ಯವಸ್ಥೆಯೊಳಗಿರುವ ಎಲ್ಲಾ ಜಮೀನುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಕಾನೂನನ್ನು ತನ್ನಿ ಎಂದು ಹೇಳಿದರು. ಅವತ್ತು ಆ ರಿಲ್ಯಾಕ್ಸೇಷನ್ ತರುವುದಕ್ಕೆ ಕಾರಣ, ವೀರಪ್ಪಮೊಯ್ಲಿಯವರು ಮುಖ್ಯಮಂತ್ರಿಗಳಾಗಿ, ಸಿಂಗಾಪುರ್‌ನ ಪ್ರಧಾನಮಂತ್ರಿಗಳೊಡನೆ ಎಂಒಯು ಸೈನ್ ಆಗಿತ್ತು ಅಷ್ಟೆ. ಅದಕ್ಕಿಂತ ಒಂದು ಹಜ್ಜೆ ಮುಂದಕ್ಕೆ ಹೋಗಿರಲಿಲ್ಲ, ಅದು ಅಲ್ಲಿಗೆ ನಿಂತಿತ್ತು. ಈ ಸಿಡಿಪಿ ಪ್ಲಾನ್ ಅನ್ನು ಬದಲಾವಣೆ ಮಾಡಿ; ಏನು ಆ ಐಟಿ ಪಾರ್ಕ್ ಅನ್ನು ಪ್ರಾರಂಭ ಮಾಡುವುದಕ್ಕೆ, ಸಿಂಗಾಪುರ ಮತ್ತೆ ನಮ್ಮ ಸರ್ಕಾರ ಇಬ್ಬರೂ ಸೇರಿ ಏನು ಪ್ರಾರಂಭ ಮಾಡಿದರು, ಆ ಸಿಡಿಪಿ ಪ್ಲಾನ್ ಅನ್ನು ಬದಲಾವಣೆ ಮಾಡದೇ ಹೋಗಿದ್ದರೆ, ಆ ಐಟಿ ಪಾರ್ಕ್ ಬರುವುದಕ್ಕೆ ಸಾಧ್ಯವಿರಲಿಲ್ಲ, ಅದು ಮೂಲ ಕಾರಣ, ದೇಶಪಾಂಡೆಯವರು ಮಾತನಾಡುವಾಗ ಇವತ್ತು ಈ ರಾಜ್ಯದಲ್ಲಿ ಸಾಫ್ಟ್‌ವೇರ್ ಇಂಡಸ್ಟ್ರೀಗಳ ಮುಖಾಂತರ ಇವತ್ತು ವಿಶ್ವ ಒಂದು ಸಣ್ಣ ಹಳ್ಳಿಯಾಗಿ ಮಾರ್ಪಾಡಾಗಿದೆ ಎಂದು ಹೇಳಿದರು, ಇವತ್ತು ಬೆಂಗಳೂರು ನಗರವೂ ಒಂದು ಹಳ್ಳಿಯಾಗಿ ಪರಿವರ್ತನೆಯಾಗುವುದಕ್ಕೆ, ಆ ಸಿಡಿಪಿ ಪ್ಲಾನ್ ಕಾರಣವೆಂದು ಹೇಳುವುದಕ್ಕೆ ಬಯಸುತ್ತೇನೆ. ಈಗಲೂ ಒಂದು ಸಿಡಿಪಿ ಪ್ಲಾನ್ ಮಾಡಿದ್ದಾರೆ, ಸಿಡಿಪಿ ಪ್ಲಾನ್ ಬಗ್ಗೆ ವರದಿಯನ್ನು ಕೊಡಲು ಕಮಿಟಿಯನ್ನು ಮಾಡಿ ಒಬ್ಬರಿಗೆ ಕೊಟ್ಟರು, 35 ಕೋಟಿ ರೂಪಾಯಿಗಳನ್ನು ಇವತ್ತು ವಿದೇಶಿ ಕಂಪನಿಗೆ ಕೊಟ್ಟು ಆ ಸಿಡಿಪಿಪ್ಲಾನ್ ಅನ್ನು ತಯಾರು ಮಾಡಿಸುತ್ತಿದ್ದಾರೆ, ಅದು ಇನ್ನೂ ಆಗಲಿಲ್ಲ. ಅವತ್ತು ಯಾವ ವಿದೇಶಿ ಕಂಪನಿ ಬರಲಿಲ್ಲ, ಒಂದು ಸಾಮಾನ್ಯ ಜ್ಞಾನ ಇರತಕ್ಕಂದ ಒಂದು ಹಳ್ಳಿಯಿಂದ ಬಂದಂತಹ ಮುಖ್ಯಮಂತ್ರಿಗಳು, ದೇಶಪಾಂಡೆಯವರು ಹಾಗೂ ಅವರ ಮಂತ್ರಿಮಂಡಲದ ಸದಸ್ಯರು ತಕ್ಷಣ ಏನು ತೀರ್ಮಾನ ಮಾಡಿದರು. ಅವತ್ತು ಅದಕ್ಕೆ ಯಾವ ವಿದೇಶಿ ಕಂಪನಿಯೂ ಬರಲಿಲ್ಲ. ಇದನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಅದುದರಿಂದ ಅವರು ಭೂಸುಧಾರಣೆ ಕಾನೂನನ್ನು ತರಬೇಕಾದರೂ ಗಮನದಲ್ಲಿಟ್ಟುಕೊಂಡು ಇದನ್ನೆಲ್ಲಾ ಆ ಒಂದು ಕಮಿಟಿಯನ್ನೇನು ಮಾಡಿದ್ದರು, ಅದಾದ ನಂತರ ಏನೇನು ಬದಲಾವಣೆಗಳನ್ನು ಮಾಡಿದರು, ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ಈಗ ಹೋಗುವುದಿಲ್ಲ; ಇದು ಒಂದು ಹಂತ. ಇವತ್ತು ನಮ್ಮ ದೇಶಪಾಂಡೆಯವರು ಮಾತನಾಡುವಾಗ ಹೇಳುತ್ತಿದ್ದರು, ಅದೇನೆಂದರೆ, ನಾನು ಐದು ಸಲ ಗೆದ್ದು ಬಂದಿದ್ದೇನೆ, ನನ್ನ ಕ್ಷೇತ್ರದಲ್ಲಿ ನಾನು ಮೈನಾರಿಟಿ, ನಮಗೆ ರಾಜಕೀಯ

ಮಾಡುವುದು ಕಷ್ಟವಿದೆ, ಇಂತಹದ್ದರಲ್ಲೂ ಬಂದಿದ್ದೇವೆಂದು ಹೇಳಿದರು; ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿ ನಾನು ತಮಾಷೆಗೆ ಹೇಳುತ್ತಿದ್ದೇನೆ ಅಷ್ಟೆ. ಬೂದುಕುಂಬಳಕಾಯಿ ಕದ್ದವನ ಬಗ್ಗೆ ಮಾಧುಸ್ವಾಮಿಯವರು ಮಾತನಾಡುವಾಗ ಚರ್ಚೆ ನಡೆಯಿತು ಅದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ, ಮೈನಾರಿಟಿ ಜನಸಂಖ್ಯೆಯಲ್ಲಿ, ಮ್ಯಾನುಪು ಲೇಷನ್‌ನಲ್ಲಿ ಅವರದ್ದು ಮೆಜಾರಿಟಿ; ಇದನ್ನು ಸ್ಪೋರ್ಟೀವ್ ಆಗಿ ತೆಗೆದುಕೊಳ್ಳಿ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮುಖ್ಯಮಂತ್ರಿಗಳೇ, ಆ ತರಹದ ಸ್ಟ್ರಾಟರ್ಜಿಗಳು ನನಗಿದ್ದರೆ ಈಗ ನೀವೇನು ಕುಳಿತಿದ್ದೀರಲ್ಲಾ ಆ ಜಾಗಕ್ಕೆ ನಾನು ಐದು ವರ್ಷದ ಹಿಂದೆಯೇ ಬರುತ್ತಿದ್ದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮುಂದಕ್ಕೆ ಬರಬಹುದು.

ಮಾನ್ಯ ಸದಸ್ಯರೊಬ್ಬರು : ಪ್ರಯತ್ನ ಮಾಡಿದ್ದಿರಿ, ಆಗಲಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಇದರ ಬಗ್ಗೆ ಬಹಳ ಸಮಯವನ್ನು ತೆಗೆದುಕೊಂಡೆ, ಇದರ ಬಗ್ಗೆ ಬಹಳಷ್ಟು ವಿಷಯಗಳಿವೆ, ಆದರೆ ಇಲ್ಲಿಗೇ ಇದನ್ನು ನಿಲ್ಲಿಸುತ್ತೇನೆ, ಏಕೆಂದರೆ ಸದನದ ಸದಸ್ಯರಿಗೆ ನಮ್ಮ ಬೆಂಗಳೂರು–ಮೈಸೂರು ಕಾರಿಡಾರ್ ರಾಮಾಯಣ ಬಿಟ್ಟು, ಮಹಾಭಾರತ ಬಿಟ್ಟು ಇವರು ಯಾವುದೋ ರಾಮಾಯಣ ಶುರು ಮಾಡಿಬಿಟ್ಟರಲ್ಲಾವೆಂದು ಮಾನ್ಯ ಸದಸ್ಯರಿಗೆ ನನ್ನ ಬಗ್ಗೆ ಬೇಜಾರು ಬರುವುದು ಬೇಡ. ನಮ್ಮ ಮಾನ್ಯ ಹಿರಿಯ ಸದಸ್ಯರು ಜನತಾದಳದ ಜಾಹಿರಾತಿನ ಬಗ್ಗೆ ಹೇಳಿದ್ದಕ್ಕೆ ನಾನು ಕ್ಲಾರಿಫಿಕೇಷನ್ ಕೊಟ್ಟೆ. ಏಕೆಂದರೆ, ನಮ್ಮ ಪಕ್ಷದ ಕಾರ್ಯಕ್ರಮಗಳನ್ನು ನಾನು ಮುಂದೆ ಹೇಳುತ್ತೇನೆ, ಇವತ್ತು ನಮ್ಮ ಯುವಕ ಸದಸ್ಯರುಗಳು ಚುನಾವಣೆಯಲ್ಲಿ ಗೆದ್ದಿದ್ದಾರೆ, ನಾವು ಚುನಾವಣೆಗೆ ಹೋಗಿದ್ದೇ ಈ ಇಷ್ಯೂ ಮೇಲೆ, ನಾನು ನೇರವಾಗಿಯೇ ಹೇಳುತ್ತೇನೆ, ಈ ಇಷ್ಯುವನ್ನೇ ತೆಗೆದುಕೊಂಡೇ ಚುನಾವಣೆಗೆ ಹೋಗಿದ್ದು; ಈ ಭಾಗದ ಜನ ಈ ಇಷ್ಯೂ ಮೇಲೆ ಏನು ತೀರ್ಮಾನ ಮಾಡಬೇಕೆಂದು ತೀರ್ಮಾನ ಮಾಡಿದರು, ಅದನ್ನು ಅಲ್ಲಿಗೇ ನಿಲ್ಲಿಸುತ್ತೇನೆ. ಈಗ ಎಂಒಯು; ಮೊದಲನೇ ಪ್ರಾರಂಭ ಹಂತ, ಮಾನ್ಯ ರಾಯರೆಡ್ಡಿಯವರು ಮೊನ್ನೆ ಮಾತನಾಡುತ್ತಾ ದೇವೇಗೌಡರು ಬಹಳ ಆತುರವಾಗಿ ತೀರ್ಮಾನ ಮಾಡಿಬಿಟ್ಟರು ಎಂದು ಹೇಳಿದರು, 1988 ರಿಂದ ಆರಂಭವಾಗಿದ್ದೆಂದು ಸನ್ಮಾನ್ಯ ಹಿರಿಯ ಸದಸ್ಯರು ಮಾತನಾಡುವಾಗ ಹೇಳಿದ್ದಾರೆ; ಎಂಓಯುನಲ್ಲಿ ಏನು ಮಾಡಿದರು, ಎಂಒಯು ಮಾಡಿದ್ದೇ ತಪ್ಪೆಂದರು, ಇದಕ್ಕೆ ಕೈಯೇ ಹಾಕಬಾರದಿತ್ತು, ಇದು ಅಲ್ಲಿಂದಲೇ ಪ್ರಾರಂಭವಾಯಿತೆಂದು ಕೆಲವರು ಹೇಳಿದರು. ಅದು ಅವರ ಶಿಶು ಅವರ ಭ್ರೂಣವೆಂದು ಹೇಳಿದರು, ಎಂಒಯುನಲ್ಲಿ ಸಹಿ ಹಾಕಿದ್ದು;

"The smooth movement of traffic is becoming a problem and also accidents are increasing. Considering this, a proposal was mooted from the year 1988 itself, to provide an expressway between these two cities, the project through private enterpreneur and to meet their expenditure. Therefore, the Government was strained consistently to take up this scheme under BOT concept by any consortium to take up the construction of this road from their own resources."

.......at first instance and get back their expenditure, maintenance profit, etc. through collection of tolls. In recent years, taking advantage of the liberlisation policy in India, many were collecting data and also enquiring with the government. When His Excellency the Governor of Massachusetts State, USA, during his visit to India and discussion with the Hon'ble Chief Minister of Karnataka on 20th February 1995. The Government of Karnataka entered into an MOU with the Consortium of M/s. VHB INc, SAB Engineering and Construction, USA and Kalyani Group Ltd in the presence of His Excellency Governor of Massachusetts and Hon'ble Chief Minister of Karnataka. Under this MOU, what they say, for view of the project report work done by the Consortium and also give necessary advice under the chairmanship of the Minsiter for Public

Works in Go No. PWD 32 CSR 95 dated: 5-6-95..."

ಅದಕ್ಕಿಂತ ಮುಂಚೆ ಎಮ್‌ಓಯು ಸೈನ್ ಆದ ಮೇಲೆ ಒಂದು ಕಮಿಟಿ ಮಾಡುತ್ತಾರೆ. ಆ ಕಮಿಟಿಯಲ್ಲಿ ಯಾರ್‍ಯಾರಿದ್ದಾರೆಂದು ಮತ್ತೆ ನಾನು ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ಆ ಕಮಿಟಿನೂ ಒಂದು ರಿಪೋರ್ಟ್ ಕೊಡುತ್ತದೆ. ಇದನ್ನು ನಾನು ಜಾಸ್ತಿ ಎಲ್ಲಾ ವಿಷಯಗಳನ್ನು ತರಲಿಕ್ಕೆ ಹೋಗುವುದಿಲ್ಲ. ಆ ಎಮ್‌ಓಯುನಲ್ಲಿಯೇ ಒಂದು ವಿಷಯ ಇದೆ. ಸರ್ಕಾರ ಒಂದೇ ಒಂದು ರೂಪಾಯಿ ಬಂಡವಾಳ ಹೂಡಿಕೆ ಮಾಡುವ ಹಾಗಿಲ್ಲ. ಆ ರಸ್ತೆಯನ್ನು ಮಾಡತಕ್ಕಂಥವರೇ ಸಂಪೂರ್ಣ ಬಂಡವಾಳವನ್ನೂ ಅವರೇ ಹೂಡಬೇಕು. ಟೋಲ್ ಕಲೆಕ್ಷನ್ ಮಾಡಿಕೊಳ್ಳಬೇಕೆಂದು ಮೊದಲು ತೀರ್ಮಾನವಾಯಿತು. ಸರ್ಕಾರಕ್ಕೆ ಯಾವುದೇ ಒಂದು ನಯಾಪೈಸೆ ಹೊರೆ ಇರಬಾರದು ಎಂದು ಎಮ್‌ಓಯುನಲ್ಲಿ ತೀರ್ಮಾನ ಮಾಡಿದರು. ಇದು ಮೊದಲನೇ ತೀರ್ಮಾನ. ಇದಾದ ನಂತರ ಈ ಉದ್ದೇಶಕ್ಕೆ ಏನು ತೀರ್ಮಾನ ಮಾಡಿದರು 5.6.1995ರಲ್ಲಿ ಒಂದು ಸಮಿತಿ ರಚನೆ ಮಾಡಿದರು. ಆ ಉನ್ನತ ಮಟ್ಟದ ಸಮಿತಿ ಒಂದು ರಿಪೋರ್ಟ್ ಕೊಡುತ್ತದೆ. ಭೂಮಿ ಕಳೆದುಕೊಳ್ಳತಕ್ಕಂತಹ ರೈತರಿಗೆ ಕಂಪನಿಗಳ ಸಮೂಹ ಈ ರೀತಿ ಪರಿಹಾರ ನೀಡಬೇಕೆಂದು ಇದೆ. ಅವರು ಇಂಗ್ಲೀಷ್‌ನಲ್ಲಿ ಹೇಳಿರುವುದನ್ನು ನಾನು ಕನ್ನಡದಲ್ಲಿಯೇ ಹೇಳುತ್ತೇನೆ. ಮಾರುಕಟ್ಟೆ ದರದಲ್ಲಿ ಪರಿಹಾರ ಮತ್ತು ಒಂದು ಕುಟುಂಬಕ್ಕೆ ಒಂದು ಉದ್ಯೋಗ. ಅಥವಾ ಉತ್ತಮ ಪರಿಹಾರ ಮತ್ತು ರಿಯಾಯಿತಿ ದರದಲ್ಲಿ ಒಂದು ಮನೆ. ಅಥವಾ ಸಮಾನ ಪ್ರಮಾಣದ ಭೂಮಿ, ಮತ್ತು ಅಲ್ಪ ಮೊತ್ತದ ಪರಿಹಾರ. ಅಥವಾ ಉದ್ಯೋಗ. ಇದು ಹೈ ಪವರ್ ಕಮಿಟಿಯಲ್ಲಿ ತೀರ್ಮಾನವಾಗುತ್ತದೆ. ಅದಕ್ಕೆ 60 ವರ್ಷಗಳ ಲೈಫ್ ಇರತಕ್ಕಂತಹ ರೀತಿಯಲ್ಲಿ ಆ ರಸ್ತೆ ಕೆಲಸ ಆಗಬೇಕಾಗುತ್ತದೆ. ಉತ್ತಮ ಮಟ್ಟದ ಕಾಂಕ್ರೀಟ್ ರಸ್ತೆ ಆಗಬೇಕಾಗುತ್ತದೆ. ನಾಲ್ಕು ಪಥದ ರಸ್ತೆಯನ್ನು ಮೊದಲನೇ ಹಂತದಲ್ಲಿ ಮಾಡಿ, ಎರಡನೇ ಹಂತದಲ್ಲಿ ಆರು ಪಥದ ರಸ್ತೆಯಾಗಿ ಅದನ್ನು ಮಾಡಬೇಕೆಂದು ಆ ಕಮಿಟಿಯವರು ರಿಪೋರ್ಟ್ ಕೊಡುತ್ತಾರೆ. 30 ವರ್ಷಗಳ ಕಾಲ ಆ ಕಂಪನಿ ಟೋಲ್ ಕಲೆಕ್ಷನ್ ಮಾಡಿ ಮತ್ತೆ ವಾಪಸ್ ಕೊಡತಕ್ಕಂಥದ್ದು. ಆ ಕಂಪನಿ ಬಂಡವಾಳ ಹೂಡತಕ್ಕಂಥದ್ದಕ್ಕೆ ಅನುಕೂಲಗಳನ್ನು ಮಾಡಿ ಕೊಡುವುದಕ್ಕೆ, ಮತ್ತು ಆ ಕಂಪನಿಗೆ ಲಾಭ ಬರುವುದಕ್ಕೆ ಎಂದು ಹೇಳಿ, ನಮ್ಮ ಸನ್ಮಾನ್ಯ ಅಧ್ಯಕ್ಷರು ಮತ್ತು ಕೆಲವು ಸದಸ್ಯರುಗಳು ಹೇಳಿದರು. 18 ಪರ್ಸೆಂಡ್ ಲಾಭ ತರತಕ್ಕಂಥದ್ದಕ್ಕೆ ಏಳು ಟೌನ್‌ಶಿಫ್‌ಗಳನ್ನು ಕೊಡಬೇಕೆಂದು ರೆಕಮೆಂಟ್ ಮಾಡಿದ್ದರು; ಆ ರೆಕಮಂಡೇಷನ್

ಮೇಲೆ ಒಂದು ತೀರ್ಮಾನಕ್ಕೆ ಬರುತ್ತಾರೆ. ಐದು ಟೌನ್‌ಶಿಫ್‌ಗೆ ಎಂದು ಈ ಐದು ಟೌನ್‌ಶಿಫ್‌ಗಳು ಎಲ್ಲಿ ಎಂದು ಈಗಾಗಲೇ ಹಲವಾರು ಸದಸ್ಯರುಗಳು ಹೇಳಿದ್ದೀರಿ. ಅದನ್ನೇನೂ ನಾನು ಪ್ರಸ್ತಾಪ ಮಾಡಬೇಕಾಗಿಲ್ಲವೆಂದು ಕಾಣುತ್ತದೆ. ಇಲ್ಲಿ ಅದರ ಬಗ್ಗೆ ಸಂಪೂರ್ಣ ಮಾಹಿತಿ ಇದೆ. ನಂತರ ಜನವರಿ 29, 1996ರಲ್ಲಿ ಮೂರು ಕಂಪನಿಗಳ ಪೈಕಿ ಒಂದು ಬಾಬಾ ಕಲ್ಯಾಣ ಕಂಪನಿ, ಭಾರತ್ ಫೋರ್ಜ್ ಲಿಮಿಟೆಡ್ ಸಂಸ್ಥೆಯವರು ಮುಖ್ಯ ಮಂತ್ರಿಗಳಿಗೆ ಪತ್ರ ಬರೆಯುತ್ತಾರೆ. ಅವರು ಕೇಳತಕ್ಕಂಥದ್ದು ಸರ್ಕಾರದಿಂದ ಐದು ಟೌನ್‌ಶಿಫ್‌ಗೆ 13,203 ಎಕರೆ, ರಸ್ತೆ ನಿರ್ಮಾಣಕ್ಕೆ 5,205 ಎಕರೆ; ಒಟ್ಟು 18,408 ಎಕರೆ, ಮೊದಲನೇ ಹಂತದಲ್ಲಿ 1996ರಲ್ಲಿ ಕೇಳುತ್ತಾರೆ.

> "The Kalyani Group led Consortium is thankful to the Government of Karnataka for issuing order No.PWD 32 CSR 95 dated 20th November 1995 in respect of the above project. The Consortium has in pursuance of the order, taken several steps to position itself to begin implementing the project as expeditiously as possible. This inter-alia inclue .... the detailed break-up - land, ownership of express peripheral road, link, road service areas, inter-changes...."

ಇದೆಲ್ಲಾ ಹೇಳಿಕೊಂಡು ಬರುತ್ತಾರೆ. ಎಲ್ಲೆಲ್ಲಿ ಯಾವ ತರಹ ಎಂದು ಡೀಟೇಲ್ ಕೊಡುತ್ತಾರೆ. ಇವೆಲ್ಲಾ ಮಾಹಿತಿ ಇದೆ. ನಂತರ 1997 ಇದು ಒಂದು ಕಡೆ ಹೋಯಿತು. ಒಂದು ಸೈಡಿಗೆ ಇಟ್ಟು ಬಿಟ್ಟರು. 1997ಕ್ಕೆ ಹೊಸ ಫ್ರೇಮ್ ಅಗ್ರಿಮೆಂಟ್ ಪ್ರಾರಂಭ ಆಗುತ್ತದೆ. ಆ ಮೂರು ಕಂಪನಿಗಳು ಏನಿವೆ, ಮೊದಲು ಎಮ್‌ಒಯು ಸೈನ್ ಹಾಕಿದವರು, ಅವರ ಜೊತೆ ಈಗ ಇನ್ನೊಬ್ಬರು ಬಂದು ಫ್ರೇಮ್ ಅಗ್ರಿಮೆಂಟ್‌ಗೆ ಸೇರುತ್ತಾರೆ. ಅದೇ ಈ ನೈಸ್ ಕಂಪನಿ. ಎಮ್‌ಒಯು ಆದಾಗ ನೈಸ್ ಇರಲಿಲ್ಲ. 1997ರಲ್ಲಿ ಪ್ರಾರಂಭವಾಯಿತು. ಇವರು ಹಿಂಬಾಗಿಲಿನಿಂದ ಬರುತ್ತಾರೆ. ಮುಂಬಾಗಿಲಿನಿಂದ ಬರಲಿಲ್ಲ. ಅದಕ್ಕೆ ಆಮೇಲೆ ಬರುತ್ತೇನೆ. ಈ ನೈಸ್ ಕಂಪನಿಯವರ ಬಂಡವಾಳ ಆ ಮೇಲೆ ಹೇಳುತ್ತೇನೆ. ಇವರು ಯಾವ ರೀತಿ ಪ್ರಾರಂಭ ಮಾಡಿದರು ಎಂಬುದನ್ನು ಆಮೇಲೆ ಹೇಳುತ್ತೇನೆ. ಈ ಫ್ರೇಮ್ ಅಗ್ರಿಮೆಂಟ್ ಏನು ಹೇಳುತ್ತದೆ, 111 ಕಿ.ಮೀ. ಉದ್ದದ ಎಕ್ಸ್‌ಪ್ರೆಸ್ ರಸ್ತೆ, ಇಂಟರ್ ಛೇಂಜ್‌ಗಳು ಮತ್ತು ಟೋಲ್ ಪ್ಲಾಜಾಗಳು

ಸೇರಿ 4,528 ಎಕರೆ. 48 ಕಿ.ಮಿ. ಉದ್ದದ ಪೆರಿಫೆರಲ್ ರಸ್ತೆ. ಅದಕ್ಕೆ 2193 ಎಕರೆ, ಇಂಟರ್ ಛೇಂಜ್‌ಗಳು ಸೇರಿಕೊಂಡ ಹಾಗೆ. 9.8 ಕಿ.ಮಿ. ಉದ್ದದ ಲಿಂಕ್ ರಸ್ತೆ. ಒಟ್ಟು ಟೋಲ್ ರಸ್ತೆ ನಿರ್ಮಾಣಕ್ಕೆ 6999 ಎಕರೆ, 228 ಎಕರೆ, ಐದು ಟೌನ್ ಶಿಫ್‌ಗೆ 13,194 ಎಕರೆ, ಇದು ಎಲ್ಲಿಗೆ ಬಂದು ನಿಲ್ಲುತ್ತದೆ, ಈ ಫ್ರೇಮ್ ಅಗ್ರಿಮೆಂಟ್‌ನಲ್ಲಿ ಇದು 20,193 ಎಕರೆಗೆ ಹೋಯಿತು. 18,000 ಚಿಲ್ಲರೆಯಿಂದ ಇನ್ನೂ ಒಂದು ಕ್ಲಾಜ್ ಹಾಕುತ್ತಾತೆ, "ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ ಲಿಮಿಟೆಡ್ a company incorporated under the laws of India with its registered office located…. ಒಂದು ಕಾನ್‌ಫಿಡೆನ್‌ಷಿಯಾಲಿಟಿ ಎಂದು ತರುತ್ತಾರೆ.

"Each party shall hold in strict confidence in all confidential information received by it form the other parties. The party receiving such confidential information shall not publish or otherwise disclose or use confidential information of its own purpose otherwise than as may be required by it, its professional advisers, potential leaders or investors to perform its obligations under this agreement and shall directors, officers….." ಇದೆಲ್ಲಾ ಹೇಳಿಕೊಂಡು ಹೋಗುತ್ತಾರೆ. ಇದು ಇಲ್ಲಿಗೆ ಬಂದು ನಿಲ್ಲುತ್ತದೆ. ಮೂರನೇ ಹಂತ. 1995ರಲ್ಲಿ ಎಮ್‌ಒಯು ಮಾಡಿಕೊಂಡು ಈ ಮೂರು ಕಂಪನಿಗಳು, ಈ ಎಲ್ಲಾ ಹಕ್ಕುಗಳನ್ನು ಆ ನೈಸ್ ಕಂಪನಿಗೆ ಟ್ರಾನ್ಸ್‌ಫರ್ ಮಾಡುತ್ತಾರೆ. ನೈಸ್ ಕಂಪನಿ ಮತ್ತು ಕರ್ನಾಟಕ ಸರ್ಕಾರ ಇವೆರಡರ ಮಧ್ಯೆ consent and acknowledgement agreement ಆಗಿದೆ ಎಂದು ಹೇಳುತ್ತಾರೆ. ಇದು ಆಗಿರತಕ್ಕಂಥದ್ದು 6.9.1996ರಲ್ಲಿ. ಕರ್ನಾಟಕ ಸರ್ಕಾರದ ಜೊತೆ ಈ ನೈಸ್ ಕಂಪನಿ ಬಾಂಧವ್ಯ ಏನು ಪ್ರಾರಂಭವಾಯಿತು, ಆಗ ಇವರು ಮಾಡಿಕೊಂಡಿರುವ ಒಂದು ಅಗ್ರಿಮೆಂಟ್ ಕಾಪಿ ತೋರಿಸುತ್ತಾರೆ. ನಾನು ಇಲ್ಲಿ ತೋರಿಸಲಿಕ್ಕೆ ಬಯಸುತ್ತೇನೆ. ಯಾರ್‍ಯಾರು ಈ ಅಗ್ರಿಮೆಂಟ್‌ಗೆ ಸೈನ್ ಹಾಕಿದ್ದಾರೆ, between the State Government and NICE Company. ಈ ಮೂರು ಕಂಪನಿಯವರು.

Mr. Speaker : What about previous people ಹಿಂದೆ ಇದ್ದವರು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಅವರೂ ಸೇರಿಕೊಂಡಿದ್ದಾರೆ. ಆ ಮೂರು ಕಂಪನಿಗಳು, ಈ ನೈಸ್ ಕಂಪನಿ ಮತ್ತು ಕರ್ನಾಟಕ ರಾಜ್ಯ ಸರ್ಕಾರ, ಇದು ತಮಾಷೆ ಹೇಗೆ ಎಂದರೆ, ಸೈನ್ ಹಾಕಿರತಕ್ಕಂತಹವರು ಯಾರು? ಸೈನ್ ಹಾಕಿರತಕ್ಕಂಥವರು

ಯಾರೆಂದರೆ, ಒಂದು ಬಾಬಾ ಕಲ್ಯಾಣಿಯವರು, ಎರಡನೆಯದಾಗಿ ವಿ.ಹೆಚ್.ಬಿ. ಕಂಪನಿಯವರು, ಡೊನಾಲ್ಡ್ ಥಾಮ್ಸನ್ ಎಂದು, ಮೂರನೆಯವರು ಅಶೋಕ್ ಖೇಣಿಯವರು. ನಂತರ ಇನ್ನೊಬ್ಬರು ಡೈರೆಕ್ಟರ್ ಬರುತ್ತಾರೆ. ಅಶೋಕ್ ಖೇಣಿಯವರು ಅಧ್ಯಕ್ಷರು. ಇನ್ನೊಬ್ಬ ಡೈರೆಕ್ಟರ್ ಶಿವಕುಮಾರ್ ಖೇಣಿ ಎನ್ನುವವರು, ಪಾಪ ಇನ್ನೂ ಅವರು ಹೊರಗಡೆಗೆ ಬಂದಿಲ್ಲ, ಹೊರಗಡೆ ಅವರು ಕಾಣಿಸುತ್ತಿಲ್ಲ. Governor of Karnataka, on behalf of the Government of State of Karnataka is the consenting party. ಎಂದು ಇಷ್ಟೇ ಇರುವುದು ಅಧ್ಯಕ್ಷರೆ, ಸರ್ಕಾರದಿಂದ ಯಾರದ್ದೂ ಸೈನ್ ಇಲ್ಲ. ರಾಜ್ಯಪಾಲರ ಸೈನ್ ಕೂಡ ಇಲ್ಲ.

ಅಧ್ಯಕ್ಷರು : ಅಧಿಕಾರಿಗಳದ್ದು, ಇಂಡಸ್ಟ್ರೀ ಸೆಕ್ರೆಟರಿ ಅಥವಾ ಪ್ರಿನ್ಸಿಪಲ್ ಸೆಕ್ರೆಟರಿ ಅಥವಾ ಚೀಫ್ ಸೆಕ್ರೆಟರಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಯಾರ್‍ಯಾರದ್ದೂ ಇಲ್ಲ.

ಶ್ರೀ ಅಂಜನಮೂರ್ತಿ : ಯಾರ ಸರ್ಕಾರ ಇತ್ತು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಸರ್ಕಾರ ಯಾರದ್ದಾದರೂ ಇರಲಿ. ಇವೊತ್ತು ನೀವೆಲ್ಲಾ ಇಲ್ಲಿ ಸಪೋರ್ಟ್ ಕೊಟ್ಟಿದ್ದೀರಿ.

ಶ್ರೀ ಅಂಜನಮೂರ್ತಿ : ಎಲ್ಲವನ್ನೂ ಹೇಳುತ್ತಿದ್ದೀರಲ್ಲಾ ಹಾಗೆಯೇ ಯಾರ ಸರ್ಕಾರ ಇತ್ತು ಎನ್ನುವುದನ್ನು ಹೇಳಿ ಎಂದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಹೇಳುತ್ತೇನೆ. ನನಗೇನೂ ಅಂಜಿಕೆ ಇಲ್ಲ. ಇವೊತ್ತು ಹಿರಿಯ ಸದಸ್ಯರಾದ ಮಾನ್ಯ ಖರ್ಗೆಯವರು ಇವೊತ್ತು ಏನು ಮಾತನಾಡಿದ್ದಾರೆ ಅದು ನನಗೆ ಅರ್ಥವಾಗುತ್ತದೆ. ಅಂಜನಮೂರ್ತಿಯವರೆ, ಇವೊತ್ತು ನಿಮ್ಮ ಮೇಲೆ ನಾನು ದೋಷ ಮಾಡುತ್ತಿಲ್ಲ ಮತ್ತು ಖರ್ಗೆಯವರ ಮೇಲೂ ದೋಷ ಮಾಡುತ್ತಿಲ್ಲ. ಮಾನ್ಯ ಖರ್ಗೆಯವರು ಇವೊತ್ತೇನು ಬಹಳ ನೋವಿನಿಂದ ಮಾತನಾಡಿದ್ದಾರೆ ಅದು ನನಗೆ ಅರ್ಥವಾಗುತ್ತದೆ. ಯಾರೋ ಮಾಡಿದ ಪಾಪದ ಹೊರೆ ನಮಗೆ ಏಕಪ್ಪಾ ಎಂದು ಬಹಳ ನೋವಿನಿಂದ ಅವರು ಇವೊತ್ತು ಮಾತನಾಡಿದರು. 1996ರಲ್ಲಿ ಆಗಿರುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರೆಕಾರ್ಡ್ಸ್‌ಗೆ ಸರಿಯಾಗಿ ಹೋಗಬೇಕು, ಯಾರೋ ಮಾಡಿದ್ದು ನಮಗ್ಯಾಕೆ ಎನ್ನತಕ್ಕಂಥ ಪ್ರಶ್ನೆಯಲ್ಲ. ಮೂಲಭೂತವಾಗಿ ಏನು ಹೇಳುತ್ತೇನೆಂದರೆ ಈ ಭೂ ಸುಧಾರಣಾ ಕಾನೂನಿಗೆ ನಾನು ಬಹಳ ಹೋರಾಟ ಮಾಡಿದ್ದೇನೆ. ಮೂಲಭೂತವಾಗಿ ಭೂ ಸುಧಾರಣೆ ಕಾನೂನಿಗೆ ತಿದ್ದುಪಡಿ ಆಗದೇ

ಇದ್ದಿದ್ದರೆ ಇಂಥ ಪ್ರಶ್ನೆಗಳು ಉದ್ಭವಿಸುತ್ತಿರಲಿಲ್ಲ. ಏಕೆಂದರೆ ಕೆ.ಐ.ಎ.ಡಿ.ಬಿ.ಯಂಥ ಏಜೆನ್ಸಿಗಳು ಇದ್ದವು, ಲ್ಯಾಂಡ್ ಅಕ್ವಿಸಿಶನ್ ಆ್ಯಕ್ಟ್ ಇತ್ತು, ಇವೆಲ್ಲಾ ಕಾನೂನುಗಳನ್ನು ನಾವು ಉಪಯೋಗ ಮಾಡಿಕೊಂಡು ಯಾರ್‍ಯಾರಿಗೆ ಹಿಂದೆಯಿಂದಲೂ ಇಂಡಸ್ಟ್ರೀಗಳಿಗೆ ಕೊಟ್ಟಿಕೊಂಡು ಬಂದಿದ್ದೇವೆ ಅದೇ ರೀತಿಯಾಗಿ expedite ಆಗಿ ಬೇಕಾದರೆ ನಾವು ಸಮಯವನ್ನು ಕಟ್ ಮಾಡಿ ಮಾಡಬಹುದಾದಂಥ ಪ್ರಮೇಯ ಇತ್ತು. ಆದರೆ ಈಗ ಅವರು ಹೇಳಿಕೊಂಡರು ದಾವೂಸ್‌ಗೆ ಹೋಗಬೇಕಾಗಿತ್ತು, ಇನ್‌ವೆಸ್ಟ್‌ಮೆಂಟ್ ಇತ್ತು, Kenneth ರವರು ಬಂದರು, ಹೀಗೆ ಅವರು ಇದೆಲ್ಲಾ ಹೇಳಿಕೊಂಡು ಅವರನ್ನು ಅವರು ಸಮರ್ಥನೆ ಮಾಡಿಕೊಳ್ಳಲಿ. But basic ಆಗಿ ಯಾವ ರೀತಿಯಾಗಿ ಒಂದು ಧರ್ಮದವರಿಗೆ ಭಗವಂತನ ಗೀತೋಪದೇಶ ಶ್ರೇಷ್ಠವೂ ದೇಶದ ನಾಗರೀಕರಿಗೆ Indian Constitution ಶ್ರೇಷ್ಠವೋ ಹಾಗೆಯೇ ರೈತರಿಗೆ ಭೂಸುಧಾರಣಾ ಕಾನೂನು ಮತ್ತು ಲ್ಯಾಂಡ್ ರೆವಿನ್ಯೂ ಆ್ಯಕ್ಟ್ ಇವು ಎರಡೂ ಬಹಳ ಮಹತ್ವದ್ದಾಗಿವೆ. ಈ ಮೂಲಭೂತ ಕಾನೂನುಗಳಿಗೆ ನೀವು ತಿದ್ದುಪಡಿಯನ್ನು ತರಬಾರದಾಗಿತ್ತು. ಅದರಿಂದ ನಮಗೆ ನೋವಾಗಿದೆ ಎಂದು ನಾನು ಹೇಳಿದೆ. ಯಾರದೋ ಕೂಸು, ಯಾರದೋ ಕೂಸನ್ನು ಯಾರ್‍ಯಾದರೂ ಎತ್ತಿಕೊಳ್ಳಲಿ, ಆದರೆ ಇದು ಮೂಲಭೂತವಾಗಿ ಕಾನೂನಿನಲ್ಲಿ ಬರದೇ ಹೋಗಿದ್ದರೆ ನಿಜವಾಗಿಯೂ ಎಲ್ಲರೂ ನಿಮ್ಮಲ್ಲಿಗೆ ಪರ್ಮಿಶನ್‌ಗಾಗಿ ಬರುತ್ತಿದ್ದರಲ್ಲಾ, ಈಗ ನನಗೆ 500 ಎಕರೆ ಅಕ್ವೈರ್ ಮಾಡಿಕೊಡ್ರಿ ಎಂದರೆ 300 ಮಾಡ್ರಿ. ನೀವು ಬೇಕಾದರೆ ಮೂರು ತಿಂಗಳು ಇದ್ದುದ್ದನ್ನು ಒಂದು ತಿಂಗಳು ಮಾಡಿಕೊಳ್ಳಿ. ನಾನು ಏಕೆ ಈ ಮಾತನ್ನು ಹೇಳಿದೆನೆಂದರೆ ಮೂಲಭೂತ ಕಾನೂನು ನಮ್ಮಲ್ಲಿ ಇದ್ದಿದ್ದರೆ ಅದು ಸರಳವಾಗುತ್ತಿತ್ತು. ಈಗಲೂ ಕೂಡ ನಿಮ್ಮಲ್ಲಿ ಬರುತ್ತಾರೆ ಪರ್ಮೀಶನ್‌ಗೆ, ಆ ಆ್ಯಕ್ಟ್ ಕೆಳಗಡೆ. ಆ ಸೆಕ್ಷನ್ ಕೆಳಗಡೆ. ಸೆಕ್ಷನ್ 109ರ ಕೆಳಗಡೆ ನೀವೇನೇ ಕೊಡುತ್ತೀರಿ. ಆದ್ದರಿಂದ ರೆಗ್ಯುಲರ್ ಪ್ರೊಸೀಜರ್ ಇದ್ದರೂ ಕೂಡ ಏನೂ ಅಂತಹ ತಾಪತ್ರಯ ಆಗುತ್ತಿರಲಿಲ್ಲ. ನಮ್ಮ ಜಮೀನುಗಳು ಉಳಿಯುತ್ತಿದ್ದವು. ನಾನ್ ಅಗ್ರಿಕಲ್ಚರಿಸ್ಟ್ ಅಷ್ಟು ಪರ್ಚೇಸ್ ಮಾಡುತ್ತಿರಲಿಲ್ಲ. ಇವೊತ್ತು ಎಲ್ಲಾ ಕದ್ದು ಕದ್ದು ಸುಮ್ಮನೆ ಹೇಳಿಕೊಂಡು ಇನ್‌ಕಂ ಫಾಲ್ಸ್ ತೋರಿಸಿ ಅವ್ವನ ಹೆಸರಿನಲ್ಲಿ, ಅಪ್ಪನ ಹೆಸರಿನಲ್ಲಿ ಬೀಗರ ನೆಂಟರ ಹೆಸರಿನಲ್ಲಿ ತೆಗೆದುಕೊಳ್ಳುತ್ತಾರೆ. ಅದೆಲ್ಲಾ ನಿಂತುಹೋಗುತ್ತಿತ್ತು. ಅಥವಾ ಹೆದರಿಕೊಳ್ಳುತ್ತಿದ್ದರು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಅದಕ್ಕೇ ಹೇಳಿದೆ, ಅವರು ಅವೊತ್ತು ಕೂಡ ಭೂ ಸುಧಾರಣಾ ವಿಷಯದಲ್ಲಿ ವಿರೋಧ ಮಾಡಿದ್ದಾರೆ ಎಂದು ಹೇಳಿದೆ. ಆ ಭೂ ಸುಧಾರಣಾ ಕಾನೂನುಗಳಿಗೆ ಕೆಲವು ಪರಿವರ್ತನೆ ತರಬೇಕಾದರೆ ಹೈ ಪವರ್ ಕಮಿಟಿ ಎಂದು ಮಾಡಿದ್ದರು, ಅದನ್ನು

ಕಳುಹಿಸಿಯೇ ಬಿಟ್ಟರು. ಆ ಕಮಿಟಿಯನ್ನು ಮಾಡಿದ್ದೇ ಆ ಉದ್ದೇಶಕ್ಕೋಸ್ಕರವೇ. ಈಗ ನಾನು ಓದುವುದಕ್ಕೆ ಹೋಗಲಿಲ್ಲ. ಏನೇನು ಚರ್ಚೆಗಳಾಗಿವೆ. ಆ ಬಂಡವಾಳ ಹೂಡತಕ್ಕಂಥದ್ದಕ್ಕೆ ಉದಾರೀಕರಣ, ಜಾಗತೀಕರಣವನ್ನು ನಾವೆಲ್ಲ ತಂದದ್ದು. ಈ ಬದಲಾವಣೆಗಳನ್ನು ತಂದಿದ್ದು ನಾವಲ್ಲ. ಇವೊತ್ತು ಈ ದೇಶ ಆಳುತ್ತಿರತಕ್ಕಂಥ ಪ್ರಧಾನಮಂತ್ರಿಗಳ ಚಿಂತನೆ ಇದು. ಉದಾರೀಕರಣ, ಜಾಗತೀಕರಣದ ವ್ಯವಸ್ಥೆ ಏನಿದೆ, ಅದು ಅವರ ಚಿಂತನೆ. ಆ ಚಿಂತನೆಯಿಂದಲೇ ಅಂಥ ತೀರ್ಮಾನ ಅಂದು ಮಾಡಬೇಕಾಗಿ ಬಂತು. ಅದಕ್ಕಾಗಿ ಹೈ ಪವರ್ ಕಮಿಟಿ ಮಾಡಿ ಅದಕ್ಕೇನು ತೀರ್ಮಾನ ಮಾಡತಕ್ಕಂಥ ಶಕ್ತಿಯನ್ನು ಕೊಟ್ಟಿದ್ದರೋ ಅದನ್ನು ಮುಂದಿನ ದಿನಗಳಲ್ಲಿ ಬಂದಂಥವರು ಅವರು ಹೇಳಿದ ಹಾಗೆ ಬೀಗರು, ಮಾವ, ಎಂದು ಈಗ ನಡೆದಿದೆಯಲ್ಲಾ, ಆ ರೀತಿ ಎಲ್ಲಾ ನಡೆಯಿತು. ಅವರು ತಂದ ಉದ್ದೇಶ ಒಳ್ಳೆಯ ಉದ್ದೇಶವಾಗಿದ್ದರೂ ಕೂಡ ಕಡೆಗೆ ಅದನ್ನು ಬೇರೆ ಭೇರೆ ರೀತಿಯಲ್ಲಿ ದುರುಪಯೋಗ ಪಡಿಸಿಕೊಂಡಿದ್ದಾರೆ. ಅವರು ತರಬೇಕಾದರೆ ಈ ರೀತಿ ದುರುಪಯೋಗಪಡಿಸಿಕೊಳ್ಳತಕ್ಕಂಥ ವ್ಯವಸ್ಥೆ ಬರುತ್ತದೆ ಎಂದು ಬಹುಶಃ ಅವರಿಗೆ ಗೊತ್ತಿರಲಿಲ್ಲ. ಏಕೆಂದರೆ ಅವರು ಹಳ್ಳಿಯಿಂದ ಬಂದವರಲ್ಲಾ, ಅಧ್ಯಕ್ಷರೆ, ನಾನು ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಕೆಲವರು ಹೊರಗಡೆ ಹೇಳುತ್ತಾರೆ; ದಿನ ಪತ್ರಿಕೆ ತೆಗೆದರೆ ಎರಡು ರೀತಿಯ ವರ್ಗ ಇದೆಯೆಂದು ಹೇಳುತ್ತಾರೆ. ಮೊದಲನೆ ವರ್ಗದವರು ಶೇರ್ ಮಾರ್ಕೆಟ್, ಸ್ಟಾಕ್ ಎಕ್ಸ್‌ಛೇಂಜ್ ಬಗ್ಗೆ ನೋಡುತ್ತಾರೆ. ಇನ್ನೊಂದು ವರ್ಗದವರು ಈ ದೇಶದಲ್ಲಿ ಏನು ಆಗುತ್ತಿದೆಯಪ್ಪಾ, ಈ ಜನರ ಪರಿಸ್ಥಿತಿ ಏನು ಎಂಬುದನ್ನು ಪತ್ರಿಕೆಯಲ್ಲಿ ನೋಡುತ್ತಾರೆ. ಇಂಥ ಎರಡು ವರ್ಗ ಇದೆಯೆಂದು ಚರ್ಚೆ ಮಾಡುತ್ತಾರೆ. ನಮಗೆ ಮೊದಲನೆಯ ವರ್ಗ ಸ್ಟಾಕ್ ಮಾರ್ಕೆಟ್, ಸ್ಟಾಕ್ ಛಕ್ಸ್‌ಛೇಂಜ್‌ಗಳನ್ನು ನೋಡುವವರಿದ್ದಾರಲ್ಲಾ ಅದು ನಮಗೆ ಗೊತ್ತಿಲ್ಲ. ನಮಗೆ ಗೊತ್ತಿರುವುದು ಈ ಹಳ್ಳಿ ಜನಗಳ ಬಗ್ಗೆಯೇ. ಆದರೆ ಅವೊತ್ತು ಈ ರೀತಿ ಈಗ ಪರಿವರ್ತನೆಯಾಗುತ್ತದೆ ಎಂದು ಅಂದು ಹಳ್ಳಿಗಾಡಿನಿಂದ ಬಂದ ಅವೊತ್ತಿನ ಮುಖ್ಯಮಂತ್ರಿಗಳಿಗೆ ಗೊತ್ತಿರಲಿಲ್ಲವೆಂದು ಕಾಣಿಸುತ್ತದೆ ಅಧ್ಯಕ್ಷರೆ. ಅಷ್ಟು ಹೇಳುವುದಕ್ಕೆ ನಾನು ಬಯಸುತ್ತೇನೆ. ಇದರಲ್ಲಿ ಸರ್ಕಾರದಿಂದ ಯಾರದೇ ಸಹಿ ಇಲ್ಲ. ನಾನು ಮುಂದೆ ಹೇಳುತ್ತೇನೆ. ಪಾಪ ಮಾಧುಸ್ವಾಮಿಯವರಿಗೂ ಇದು ಸಿಕ್ಕಿರಲಿಲ್ಲ. ಅವರು ಕೋರ್ಟ್‌ಗೆ ಹೋಗಬೇಕಾದರೆ; ಇದು ಎಲ್ಲೆಲ್ಲಿ ಇತ್ತು ಎಂದು ಆಮೇಲೆ ಹೇಳುತ್ತೇನೆ. ಈ ಡಾಕ್ಯುಮೆಂಟ್‌ಗಳ ಬಗ್ಗೆ. ದಿನಾಂಕ: 14-10-1998 ರಂದು ನೈಸ್ ಕಂಪನಿ ಮತ್ತು ಕೆ.ಐ.ಎ.ಡಿ.ಬಿ ಮಧ್ಯೆ ಒಪ್ಪಂದ ಆಗುತ್ತದೆ. ಫ್ರೇಂ ವರ್ಕ್ ಅಗ್ರಿಮೆಂಟ್‌ನಲ್ಲಿರತಕ್ಕಂಥ 13194 ಎಕರೆ ಖಾಸಗಿ ಜಮೀನಿಗೆ

ಒಪ್ಪಂದವಾಗಿದ್ದರೆ ಮತ್ತೊಂದು ಹೊಸ ಒಪ್ಪಂದದಲ್ಲಿ ಖಾಸಗಿ ಜಮೀನು ಮತ್ತು ಸರ್ಕಾರಿ ಜಮೀನಿನ ಪ್ರಮಾಣ 23846 ಎಕರೆಗೆ ಏರಿಸುತ್ತಾರೆ. ಈ ವಿಷಯವನ್ನು ಈಗಾಗಲೇ ತಾವೆಲ್ಲರೂ ಹೇಳಿದ್ದೀರಿ. ಈ ಕೆ.ಐ.ಎ.ಡಿ.ಬಿ.ಯವರಿಗೆ ತೀರ್ಮಾನ ಮಾಡುವುದಕ್ಕೆ ಸರ್ಕಾರ ಪರವಾನಗಿಯನ್ನು ಕೊಟ್ಟಿದ್ದರಾ ಎಂಬ ಬಗ್ಗೆ ನಾವೆಲ್ಲಾ ಯೋಚನೆ ಮಾಡಬೇಕಾಗಿದೆ. ಇದರ ಜೊತೆಗೆ ಇಂತಹ ತೀರ್ಮಾನವಾಗಿಕೊಂಡು ಬಂದಿದೆಯಲ್ಲಾ ಕೈಗಾರಿಕಾ ಇಲಾಖೆಯಲ್ಲಿ ಇದ್ದಂಥ ಕಾರ್ಯದರ್ಶಿಗಳು, ಕೈಗಾರಿಕಾ ಮಂತ್ರಿಗಳು ಒಬ್ಬರೇ ಇರುತ್ತಾರೆ. ಇವೆಲ್ಲಾ ತೀರ್ಮಾನಗಳಾಗಬೇಕಾದರೆ. ಇಲ್ಲಿದೆ ಅಧ್ಯಕ್ಷರೆ, 23 ಸಾವಿರ ಎಕರೆ ಮತ್ತೆ ಏನು ನೋಟಿಫೈ ಮಾಡುತ್ತಾರೆ ಇವೆಲ್ಲಾ ಡಾಕ್ಯುಮೆಂಟ್ ಇದೆ ಅಧ್ಯಕ್ಷರೆ, ಇದರ ಬಗ್ಗೆ ಹೆಚ್ಚಿಗೆ ಇನ್ನೇನೂ ಹೇಳುವುದಕ್ಕೆ ಹೇಳುವುದಿಲ್ಲ. ಇನ್ನು 1999ರಲ್ಲಿ ಅಧ್ಯಕ್ಷರೆ, ರಾಜ್ಯ ಸರ್ಕಾರದ ಗೆಜೆಟ್ ನೋಟೀಫಿಕೇಶನ್ ಇಶ್ಯೂ ಮಾಡುತ್ತಾರೆ. ಎಷ್ಟಕ್ಕೆ ಅಂದರೆ 20190 ಎಕರೆಗೆ ಮಾಡುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಮುಖ್ಯಮಂತ್ರಿಗಳೇ, ಈಗೇನು ತಾವು ಫೈಲ್ ತೆಗೆದಿಟ್ಟಿರಿ ಅದರ ಮೇಲಿಯೇ ಆ್ಯಕ್ಷನ್ ತೆಗೆದುಕೊಳ್ಳಬೇಕೆಂದು ನಾವು ಒತ್ತಾಯ ಮಾಡಿರುವುದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ನಿಮ್ಮ ಎಲ್ಲಾ ಭಾವನೆಗಳನ್ನು ಕ್ರೋಢಿಕರಿಸಿದ್ದೇನೆ. ಇಡೀ ಸದನದಲ್ಲಿ ನಿಮ್ಮ ಭಾವನೆಗಳನ್ನು ಅರಿತು ಪಕ್ಷಬೇದ ಮರೆತು ಮಾತನಾಡಿದ್ದೇನೆ. ಪಕ್ಷಬೇದ ಮರೆತು ಈ ವಿಷಯದಲ್ಲಿ ಒಂದು ಅಂತಿಮವಾದ ನಿರ್ಧಾರ ಆಗಲೇಬೇಕೆಂದು ಎಲ್ಲರಲ್ಲೂ ಆ ಭಾವನೆ ಇರುವುದಕ್ಕೆ ನಾನು ಅಭಿನಂದಿಸುತ್ತೇನೆ. ನಾನು ಮುಂದಕ್ಕೆ ಆ ಬಗ್ಗೆ ಬರುತ್ತೇನೆ. ಇರುವುದರಲ್ಲಿ ಕೆಲವು ವಿಷಯಗಳನ್ನು ಹೇಳಿಬಿಡುತ್ತೇನೆ. ಆಮೇಲೆ ಏನು ತೀರ್ಮಾನ ಮಾಡೋಣ ಎಂಬ ಬಗ್ಗೆ ಸದನಕ್ಕೆ ಬಿಡುತ್ತೇನೆ. ಸದನದಲ್ಲಿ ನಾವು ನೀವೆಲ್ಲಾ ಕುಳಿತು ತೀರ್ಮಾನ ಮಾಡೋಣ. ಮೊನ್ನೆ ದೇಶಪಾಂಡೆಯವರು ಬಹಳ ವಿಷಯಗಳನ್ನು ಹೇಳಿದರು. ಸುಪ್ರೀಂಕೋರ್ಟಿನ ಜಡ್ಜ್‌ಮೆಂಟ್, ಹೈಕೋರ್ಟಿನ ಜಡ್ಜ್‌ಮೆಂಟ್ ಬಗ್ಗೆ ಸುದೀರ್ಘವಾಗಿ ಸುಮಾರು ಮೂರು ಗಂಟೆಗಳ ಕಾಲ ಎಲ್ಲಾ ವಿಷಯಗಳನ್ನು ಸದನದಲ್ಲಿ ಇಟ್ಟಿದ್ದಾರೆ. ಅವರು ಏನು ಮಾಡಿದರು ಇಂಡಸ್ಟ್ರೀಸ್ ಮಿನಿಸ್ಟರ್ ಆಗಿ? 2003ನೇ ಇಸವಿಯಲ್ಲಿ ಪ್ರೋಗ್ರೆಸ್ ರಿವ್ಯೂ ಮಿಟಿಂಗ್‌ನಲ್ಲಿ ಏನು ಹಿಂದಿನ ತೀರ್ಮಾನಗಳೇನಿದ್ದಾವೆ ಎಂಬ ಬಗ್ಗೆ ಹೇಳುತ್ತೇನೆ. ಹಿಂದಿನಿಂದಲೂ ಬಹುಶಃ ನೀವೇ ಇಂಡಸ್ಟ್ರೀಸ್ ಮಿನಿಸ್ಟರ್ ಆಗಿದ್ದಿರಿ ಎಂದು ಬಹುಶಃ ನನಗೆ ಕಾಣಿಸುತ್ತದೆ ದೇಶಪಾಂಡೆಯವರೇ, ಆದರೆ ನೀವು ಪಾತ್ರರು ಎಂದಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ನಿಮಗೆ ಕ್ಲಾರಿಫೈ ಮಾಡುತ್ತೇನೆ. ನಾನು ಕೈಗಾರಿಕಾ ಮಂತ್ರಿಯಾಗಿ ಇದ್ದದ್ದು ನಿಜ. ಆದರೆ for your information, ಜನವರಿ 98 ರಿಂದ 17 ಅಕ್ಟೋಬರ್ 99 ರವರೆಗೆ ಒಂದು ವರ್ಷ ಹತ್ತು ತಿಂಗಳು ಆ ಪೀರಿಯಡ್ ಇರಲಿಲ್ಲ. ಬಾಕಿ ಪೀರಿಯಡ್ ಇದ್ದದ್ದು ನಿಜ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಧ್ಯದಲ್ಲಿ ಒಂದು ವರ್ಷ ನೀವು ರಾಜೀನಾಮೆ ಕೊಟ್ಟಿದ್ದೀರಿ. ಸನ್ಮಾನ್ಯ ದೇಶಪಾಂಡೆಯವರು ಆ ಸಭೆಯಲ್ಲಿ ಆಶ್ಚರ್ಯ ವ್ಯಕ್ತಪಡಿಸಿ ಇದನ್ನೆಲ್ಲಾ ನೋಡಿ ಆ್ಯಕ್ಷುಯಲಿ ಅವರು ಈ ರೀತಿ ನೋಟ್ ಮಾಡುತ್ತಾರೆ:– "Hon'ble Minister reviewed the progress relating to the Bangalore-Mysore Infrastructure Corridor project. I have gone though the letter of Nice at page 38. The contents of the letter are out of imagination and there is no necessity that they get a rude shock. I am told that as per the agreement with Government of Karnataka, we were required to acquire 20,000 acres of land for the project including about 5000 acres of Government land. But now we have acquired more than 26000 acres of land. How could we do this? What Nice has to say about it? Preliminary Notification u/s 28(1) of KIADB Act has been issued about 5 years back. The owners of land have been left high and dry; as now we are now acquiring the lands and taking possession and we have to wait for the dikhats of the Nice company with regard to final notification. This cannot happen. The project has been fully supported by the Government of Karnataka and it has to come in time. However, the land acquisition has also to be done in a stipulated time bound period. Hence, it is necessary to re-examine the entire land acquisition process of this project. In a meeting held recently, I have also instructed to identify the 5000 acres of land acquired and whether there is such a necessity. This cannot be a real estate project. There is no question of again notifying the lands in question as they have been developed and they do not in any way affect the project of Nice. So also, as per Nice, these

lands are required to them in the second phase of the project and nobody knows as for when the second phase is to see the light of the day. I must compliment your senior leader. ಅವತ್ತು ಕಂಡುಹಿಡಿದರು ಆ್ಯಕ್ಷುಯಲ್ಲಿ ಅಲ್ಲೇ ಡೌಟ್ ಪಟ್ಟರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೇ ಅವರು ಆರು ಸಲ ಆರಿಸಿ ಬಂದಿದ್ದು, ನೀವು ಕಾರಣ ಕೇಳಿದಿರಲ್ಲಾ ಅದಕ್ಕೆ.

ಶ್ರೀ ಕೆ.ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, ಮೂಲಭೂತವಾದಂತಹ ವಿಚಾರವನ್ನು ಸದನದ ಗಮನಕ್ಕೆ ತಂದಿದ್ದೇನೆ. ಓರಿಜಿನಲ್ ಎಂ.ಓ.ಯು ಆದಂತಹ ಸಂದರ್ಭದಲ್ಲಿ ಇದ್ದಂತಹ ಕಂಪನಿಗಳು ಏನು ರೈಟ್ಸ್ ಇತ್ತು ಅದನ್ನೆಲ್ಲಾ ನೈಸ್‌ಗೆ ಕೊಟ್ಟಿದ್ದಾರೆ ಎನ್ನುವುದನ್ನು ಹೇಳಿದಿರಿ. ಆ ಒಂದು ಅಗ್ರಿಮೆಂಟ್‌ಗೆ ನಮ್ಮ ಸರ್ಕಾರದ ಪರವಾಗಿ ಯಾರ ಸೈನ್ ಇಲ್ಲವೆಂದು ಹೇಳಿದಿರಿ. ಮಂತ್ರಿಗಳು ಫೈಲ್‌ನಲ್ಲಿ ಬರೆಯುವಾಗ ಎಂ.ಓ.ಯು ನಲ್ಲಿ ಇದ್ದಂತಹ ಕಂಪನಿಗಳನ್ನು ಬಿಟ್ಟು ಈ ನೈಸ್ ಕಂಪನಿ ಹೇಗೆ ಬಂತು ಎನ್ನುವುದು ಮೂಲಭೂತವಾದಂತಹ ಪ್ರಶ್ನೆ ಆ ಫೈಲ್‌ನಲ್ಲಿ ಏಕೆ ಬರಲಿಲ್ಲ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಮಂತ್ರಿಗಳಿಗೆ ಕೆಲವು ವಿಷಯಗಳು ಗೊತ್ತಾಗುವುದಿಲ್ಲ. ನಾನು ಯಾರಿಗೂ ದೋಷ ಕೊಡುವುದಕ್ಕೆ ಹೋಗುವುದಿಲ್ಲ. ಇದರಲ್ಲಿ ಅಧಿಕಾರಿಗಳದ್ದು ಮೂಲ ಪಾತ್ರ ನಡೆಯುತಕ್ಕಂಥಾದ್ದು ಏನಿದೆ......

ಶ್ರೀ ದಿನೇಶ್ ಗುಂಡೂರಾವ್ : ಫ್ರೇಮ್‌ವರ್ಕ್ ಅಗ್ರಿಮೆಂಟ್ ಆಗಿದ್ದು ನೈಸ್ ಕಂಪನಿ ಅವರ ಜೊತೆಯಲ್ಲಿ, ಅದು 1997ರಲ್ಲಿ ಆಗಿದ್ದು ಎಂ.ಓ.ಯು ಆಗಿದ್ದು ಬೇರೆ. During the year 1997 with Nice company not with the consortium. Sir, am I right? ಅಷ್ಟೊತ್ತಿಗೆ ಸರ್ಕಾರ ನೈಸ್ ಜೊತೆ ಒಪ್ಪಂದ ಮಾಡಿಕೊಂಡು ಬಿಟ್ಟಿದ್ದರಲ್ಲಾ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಅದನ್ನೇ ಗುಂಡುರಾಯರೇ ಹೇಳುತ್ತಿರುವುದು.

ಶ್ರೀ ದಿನೇಶ್ ಗುಂಡೂರಾವ್ : ಫ್ರೇಮ್‌ವರ್ಕ್ ಅಗ್ರಿಮೆಂಟ್‌ನದ್ದು ವಿವರವಾದ ಪತ್ರ 1997ರಲ್ಲೇ ಆಗಿಹೋಯಿತು.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ಅಧ್ಯಕ್ಷರೆ, ರಾಜಣ್ಣನವರು ಹೇಳುವುದು ಸಿ.ಎ.ಎ. ಅಗ್ರಿಮೆಂಟ್. ಅದಾದಮೇಲೆ ಫ್ರೇಮ್‌ವರ್ಕ್ ಅಗ್ರಿಮೆಂಟ್..........

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಒಂದು ನಿಮಿಷ ಇರಿ, ನಾನು ಹೇಳುತ್ತೇನೆ ಕುಳಿತುಕೊಳ್ಳಿ, ವಿಷಯಕ್ಕೆ ಬರುತ್ತೇನೆ, ಆತುರ ಬೇಡ. ಇದು ಯಾರ ಟೈಂನಲ್ಲಿ ಆಯಿತು ಯಾವ ಫ್ರೇಮ್‌ವರ್ಕ್ ಅಗ್ರಿಮೆಂಟ್ ಇದೆಲ್ಲಾ ಇರಲಿ. ವಿಷಯವನ್ನು ನಿಮ್ಮ ಗಮನಕ್ಕೆ ತರುತ್ತೇನೆ, ಆಮೇಲೆ ಚರ್ಚೆ ಮಾಡೋಣ. ಏಕೆಂದರೆ ನಾನು ಹೇಳಿದೆ, ನೈಸ್ ಕಂಪನಿ ಜೊತೆ ಮೂರು ಕಂಪನಿಗಳು ಅಗ್ರಿಮೆಂಟ್ ಮಾಡಿಕೊಳ್ಳುತ್ತವೆ ಅದಕ್ಕೆ ಸರ್ಕಾರ ಪಾರ್ಟಿ ಅಲ್ಲ. ಅದು ಈಗ ಇತ್ತೀಚೆಗೆ ಬಂದಿರತಕ್ಕಂಥದ್ದು. ಏಕೆಂದರೆ ಕಾನ್‌ಫಿಡೆನ್ಶಿಯಾಲಿಟಿ ಮೇಂಟೇನ್ ಮಾಡಬೇಕು ಎಂದು ತೀರ್ಮಾನ ಮಾಡಿಕೊಳ್ಳುತ್ತಾರಲ್ಲಾ, ಅದಕ್ಕೆ ಅಧಿಕಾರಿಗಳು ಕಾರಣನೋ ಯಾರು ಕಾರಣ ಎಂಬುದನ್ನು ನೋಡೋಣ ಆಮೇಲೆ. ಅದನ್ನು ಚರ್ಚೆ ಮಾಡೋಣವಂತೆ. ಆ ದೃಷ್ಟಿಯಿಂದ ಎಷ್ಟೋ ವಿಷಯಗಳು ಮಂತ್ರಿಗಳಿಗೆ ಗೊತ್ತಿರುವುದಿಲ್ಲ. ಬಹುಶಃ ಇವತ್ತು ನಮ್ಮ ಮುಂದೆ ಹಿರಿಯ ನಾಯಕರಾದಂತಹ ಜೆ.ಹೆಚ್. ಪಟೇಲರು ಇಲ್ಲ. ಅವರಿಗೂ ಹಲವಾರು ವಿಷಯಗಳು ಗೊತ್ತಿತ್ತೋ ಇಲ್ಲವೋ. ಅವನು ಯಾವ್ಯಾವ ಸಂದರ್ಭದಲ್ಲಿ ಉಪಯೋಗ ಮಾಡಿಕೊಂಡರೋ, ದುರುಪಯೋಗಪಡಿಸಿಕೊಂಡರೋ ಅದನ್ನು ಆಮೇಲೆ ಸದನ ಕುಳಿತು ತೀರ್ಮಾನ ಮಾಡೋಣ. ಇನ್ನೊಂದು ತಮಾಷೆ ನೋಡಿ ಮಾನ್ಯ ಅಧ್ಯಕ್ಷರೆ, ಅದು ವರ್ಷವರ್ಷಕ್ಕೆ ಯಾವರೀತಿ ಮುಂದುವರೆದುಕೊಂಡು ಬಂತು ಎನ್ನುವುದಕ್ಕೆ ಈ ಫ್ರೇಮ್‌ವರ್ಕ್ ಅಗ್ರಿಮೆಂಟ್‌ನಲ್ಲಿ 20,193 ಎಕರೆಗೆ ಬದ್ಧ ಎಂದೇಳಿ ಸರ್ಕಾರ ಮತ್ತು ಈ ಕಂಪನಿಗಳು ಏನು ಮೊದಲು ಒಡಂಬಡಿಕೆ ಮಾಡಿಕೊಂಡಿರುತ್ತವೆ ಮತ್ತೆ ದಿನಾಂಕ: 20.11.2001ರಂದು 29,000 ಎಕರೆಗೆ ಮತ್ತೆ ಗೆಜೆಟ್ ನೋಟೀಫಿಕೇಷನ್ ಮಾಡುತ್ತಾರೆ. ಇದನ್ನು ಇಷ್ಟಕ್ಕೆ ನಿಲ್ಲಿಸುತ್ತೇನೆ. ಈಗ ನೋಡಿ 1996ರಲ್ಲಿ ಒಂದು ಕಂಪನಿ ಬರುತ್ತದೆ. ಅದು ಸರ್ಕಾರದ ಜೊತೆ ಬಂದಿರುವುದಿಲ್ಲ. ಒಂದು ಕಂಪನಿ ಬೆಂಗಳೂರು ನಿವಾಸಿಗಳು ಎಂದು ಹೇಳಿ ರಿಜಿಸ್ಟರ್ ಮಾಡಿಕೊಳ್ಳುತ್ತಾರೆ. ದಿನಾಂಕ: 20.1.1996ರಲ್ಲಿ, ನಂದಿ, ಇದರ ಬಗ್ಗೆ ತಮಾಷೆ ಮಾಡುತ್ತಿದ್ದರು, ನಂದಿ ಎಲ್ಲಾ ಸವೆದುಹೋಗಿದೆ ಮೈಸೂರಿನಲ್ಲಿ ಇರುವುದು ಎಂದು ಇವರ ಬಂಡವಾಳ ಏನು? ಇವರ ವಿಳಾಸಗಳು ಏನು? ಇದೆಲ್ಲಾ ಇಲ್ಲಿ ಇದೆ ಇವರ ಬಂಡವಾಳ 70 ರೂಪಾಯಿ! ಇವತ್ತು ನಮ್ಮ ಸರ್ಕಾರದ ಬಗ್ಗೆ ಹೇಳಿಕೆ ಕೊಡುತ್ತಾನೆ. ಈ ಸರ್ಕಾರಕ್ಕೆ ರಸ್ತೆ ಮಾಡುವ ಯೋಗ್ಯತೆ ಇದೆಯಾ? 80 ಸಾವಿರ ಕೋಟಿ ರೂಪಾಯಿ ಇನ್‌ವೆಸ್ಟ್ ಮಾಡುವ ಯೋಗ್ಯತೆ ಇದೆಯಾ? 20,000 ರೂಪಾಯಿ

ಚೆಕ್ ಪಾಸ್ ಮಾಡಲಿಲ್ಲ ಅಂತ. ಈ 70 ರೂಪಾಯಿ ಕಂಪನಿಯವನು ಇವತ್ತು ಸರ್ಕಾರದ ಬಗ್ಗೆ ಹೊರಗಡೆ ಮಾತನಾಡುವಂತಹ ಉದ್ಧಟತನ! ದಿನಾಂಕ: 6.4.98 ರಂದು ಎಂಪವರ್ ಕಮಿಟಿಯ 2ನೇ ಮಿಟಿಂಗ್. ಈ ಕೋಟ್ಯಾಧಿಪತಿಗೆ, ನಿನ್ನೆ ನೀವು ಯಾರೋ ಹೇಳಿದ್ದು, ಬೀದರ್‌ನಲ್ಲಿ ಹೈದಾರಾಬಾದ್ ನಿಜಾಮರಿಗೆ ಸಾಲ ಕೊಟ್ಟಂತಹ ಕುಟುಂಬ. ಅದು ಹೇಳಿದ ಮೇಲೆ ನಮ್ಮ ವಿರೋಧ ಪಕ್ಷದ ನಾಯಕರು ಒಂದು ಕ್ಲಾರಿಫಿಕೇಷನ್ ಕೊಟ್ಟರು. ಇವರಿಗೆ 2ನೇ ಮಿಟಿಂಗ್‌ನಲ್ಲಿ 50 ಕೋಟಿ ರೂಪಾಯಿ ದುಡ್ಡು ತಂದು ಕಟ್ಟಿ ಎಂದು ಹೇಳುತ್ತಾರೆ. ಅದಕ್ಕೆ ಅವರ ರಿಯಾಕ್ಷನ್ ಏನು? ಸರ್ಕಾರದ ಯೋಗ್ಯತೆ ಬಗ್ಗೆ ಪ್ರಶ್ನೆ ಮಾಡುವುದಕ್ಕೆ ಬೆಳೆದಿರುವ ಈ ಮಹಾನುಭಾವರು ಇಲ್ಲಿ ಸರ್ಕಾರದವರು ಕೇಳುತ್ತಾರೆ. To permit the company to deposit Rs.50 crores before issue of notification u/s 3(1) Rs.100 crores before issue of notification u/s 28(1) and the entire probable cost of land before publication of notification u/s 28(4) of the Act; ಇವನ್ನು ದುಡ್ಡೇ ಕಟ್ಟದೆ ನೋಟಿಫಿಕೇಷನ್ ಎಲ್ಲಾ ಮಾಡಿಬಿಟ್ಟರು. Sri Ashok Kheni representing the consortium requested that it would be very difficult for the consortium to remit such large amount of deposit and this would lack of the resources. He requested for concessions to be extended. ಇದು ಈ ಕಂಪನಿಯ ಬಂಡವಾಳ. ಇವತ್ತು ಕೋಟ್ಯಾಂತರ ರೂಪಾಯಿಗಳ ಬಗ್ಗೆ ಚರ್ಚೆ ಮಾಡುತ್ತಾರೆ. ಈ ಕಮಿಟಿಯ ಮುಂದೆ ಇದ್ದವರು ಯಾರು? ರಾಜ್ಯ ಸರ್ಕಾರದ ಚೀಫ್ ಸ್ಕ್ರೆಟರಿ, ಪ್ರಿನ್ಸಿಪಲ್ ಸ್ಕ್ರೆಟರಿ, ಈ ಸಭೆಯಲ್ಲಿ ಅವರು ರಿಕ್ವೆಸ್ಟ್ ಮಾಡುತ್ತಾರೆ. ಈ 50 ಕೋಟಿ ರೂಪಾಯಿಗಳ ಬಗ್ಗೆ, ಅವರು ಕಷ್ಟ ಎಂದು ಮನವಿಯನ್ನು ಮಾಡುತ್ತಾರೆ. ನಿನ್ನೆ ಮಾನ್ಯ ಕೆ. ಜಯಪ್ರಕಾಶ್ ಹೆಗ್ಡೆಯವರು ಸರ್ಕಾರದ ಕಂಪನಿ ಏನು ಬಂಡವಾಳವೆಂದು ಹಾಕುತ್ತೇವೆಂಬ ಬಗ್ಗೆ ಹೇಳಿದರು. ನಮ್ಮ ಮಾನ್ಯ ಎಂ.ಪಿ. ಪ್ರಕಾಶ್‌ರವರು ಮಾತನಾಡಿರಬೇಕು. ಇದರಲ್ಲಿ 522 ಕೋಟಿ ರೂಪಾಯಿಗಳ ಬಂಡವಾಳ ಇದೆಯೆಂದು ತೋರಿಸುತ್ತಾರೆ. ಈ ಕ್ವಿಟಿ ಎಂದು, ಮತ್ತೆ ಒಂದೂವರೆ ಸಾವಿರ ಕೋಟಿ ರೂಪಾಯಿಗಳನ್ನು ಮಾರ್ಕೆಟ್‌ನಲ್ಲಿ ಕಲೆಕ್ಟ್ ಮಾಡುತ್ತೇವೆಂದು ಹೇಳುತ್ತಾರೆ. ಇದು ಬೇರೆ ಎಲ್ಲೂ ಅಲ್ಲ, ನಮ್ಮ ಸರ್ಕಾರದ ಅಧಿಕಾರಿಗಳಿಗೆ ಛೀಮಾರಿಯನ್ನು ಹಾಕಿದ್ದಾರೆಂದು, ಸುಪ್ರೀಂ ಕೋರ್ಟ್‌ನ ಪ್ರಕರಣಗಳನ್ನು, ನಮ್ಮ ಸನ್ಮಾನ್ಯ ಹಿರಿಯ ಸದಸ್ಯರುಗಳು ಈ ಸದನದಲ್ಲಿ ಹೇಳಿದ್ದಾರೆ. ಇವತ್ತು ನನ್ನದೂ ಒಂದು ಸುಳ್ಳು ಅಫಿಡವಿಟ್ ಕೊಟ್ಟಿದ್ದೇನೆಂದು, ಎಲೆಕ್ಷನ್ ಕಮೀಷನ್‌ಗೆ ಅದಕ್ಕೆಲ್ಲಾ ಇವರೇ ಕೊಟ್ಟದ್ದು, ಅದು ಎಲ್ಲಾ ನನ್ನ ಕೈಯಲ್ಲಿ

ಇದೆ. ಏನೋ ಮುಖ್ಯಮಂತ್ರಿಯವರ ಕುತ್ತಿಗೆಯನ್ನು ಹಿಡಿದು ಹಾಕಿಬಿಟ್ಟಿದ್ದೇನೆ. ನಾಳೆ ಬೆಳಿಗ್ಗೆ ರಾಜೀನಾಮೆಯನ್ನು ಕೊಡಿಸಿ ಬಿಡುತ್ತೇನೆ, ಏನೋ ತಪ್ಪು ಈ ರಾಜ್ಯದ ಮುಖ್ಯಮಂತ್ರಿ ಮಾಡಿದ್ದಾರೆಂದು, ಅವರಿಗೂ ಮತ್ತೆ ದಾರಿ ತಪ್ಪಿಸಲು ಹೊರಟಿದ್ದನು. ಇವರು ಕೋರ್ಟ್ ಮುಂದೆ ಅಫಿಡವಿಟ್‌ನಲ್ಲಿ ಏನು ಹೇಳುತ್ತಾನೆಂದರೆ, 522 ಕೋಟಿ ರೂಪಾಯಿಗಳ ಅಫಿಡವಿಟ್ ಅನ್ನು ಇವನು ಹಾಕಿರುವಂಥಾದ್ದು, ನಾನಲ್ಲ, ಅಥವಾ ಸರ್ಕಾರ ಅಲ್ಲ; ಅಥವಾ ಕೆಐಎಡಿಬಿ ಅಲ್ಲ, ಇವನು ಅಫಿಡವಿಟ್ ಅನ್ನು ಹಾಕಿರುವಂಥಾದ್ದು. ಆದರೆ ಇಲ್ಲಿ ನನಗೆ 50 ಕೋಟಿ ರೂಪಾಯಿಗಳನ್ನು ಕಟ್ಟಲು ದುಡ್ಡು ಇಲ್ಲವೆಂದು ಹೇಳುತ್ತಾನೆ. ಇದು ಈ ಕಂಪನಿಯ ಬಂಡವಾಳ. ದಿನಾಂಕ: 22.9.2000ನೇ ಇಸವಿಯಲ್ಲಿ ಉನ್ನತ ಮಟ್ಟದ ಸಭೆ, BMICP Progress Review Meeting ಆಯಿತು. ಈ ಸಭೆಯ ಅಧ್ಯಕ್ಷತೆಯನ್ನು ಯಾರು ವಹಿಸಿದ್ದರು? ಅಂದಿನ ಮುಖ್ಯಮಂತ್ರಿಗಳೇ ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದಾರೆ. ಲೆವಿ ಮತ್ತು ಮತ್ತಿತರ ಸುಂಕಗಳ ವಿನಾಯಿತಿ ಹಾಗೂ ಜಮೀನುಗಳನ್ನು ಮಾರಿಕೊಳ್ಳುವಂಥಾದ್ದಕ್ಕೆ, ಅವಕಾಶ ಕೊಡಿ ಎಂದು ಕಂಪನಿ, ಈ ಉನ್ನತಮಟ್ಟದ ಸಭೆ ಮುಂದೆ ಅರ್ಜಿಯನ್ನು ಹಾಕಿಕೊಳ್ಳುತ್ತಾರೆ. ಆ ಸಂದರ್ಭದಲ್ಲಿ ನಮ್ಮ ಅಧಿಕಾರಿಗಳು ಒಂದು ಸಲಹೆಯನ್ನು ಕೊಡುತ್ತಾರೆ. ಇದು 2000ನೇ ಇಸವಿಯ 9ನೇ ತಿಂಗಳಲ್ಲಿ ಏನು ಸಭೆ ನಡೆಯಿತು, ಇದಕ್ಕೆ ಪರ್ಮಿಷನ್ ಕೊಡಬೇಡಿಯೆಂದು ಹೇಳುತ್ತಾರೆ. Letter of comfort ಬಗ್ಗೆ ಇಲ್ಲಿ ಬಹಳ ಚರ್ಚೆ ನಡೆಯಿತ್ತಲ್ಲಾ, ಅದು ಈ ಡೇಟ್‌ನಲ್ಲಿ ತೆಗೆದುಕೊಂಡಿರುವಂಥಾದ್ದು. ಅಧಿಕಾರಿಗಳು ಬೇಡವೆಂದು ಹೇಳಿದರು. ಅವತ್ತು ಮುಖ್ಯಮಂತ್ರಿಯವರೇ ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಏನು ಸಭೆ ಮಾಡಿದ್ದಾರೆ, ಅದರಲ್ಲಿ Hon'ble Minister for Revenue, Hon'ble Minister for public works, Additional Chief Secretary to Government, Public Works and Housing, Principal secretary to Government, Urban Development, Secretary to Hon'ble Chief Minister. ಎಲ್ಲರೂ ಇರುತ್ತಾರೆ. ಇಲ್ಲಿ ನಾನು ಇನ್ನೊಂದು ವಿಷಯವನ್ನು ಹೇಳುವಂಥಾದ್ದು ಮರೆತ್ತಿದ್ದೇನೆ. ಇಲ್ಲಿ ಬಸವರಾಜು ಎನ್ನುವವರು ಒಬ್ಬ ಪ್ರಾಜೆಕ್ಟ್ ಕೋ ಆರ್ಡಿನೇಟರ್; ಇವನದೇ ಎಲ್ಲಾ, ನಮ್ಮ ಮಾನ್ಯ ಧರ್ಮಸಿಂಗ್‌ರವರು ಒಂದು ದೊಡ್ಡತನದ ಮಾತನ್ನು ಹೇಳಿದರು. ನಮ್ಮ ಹಿಂದಿನ ಕಾಂಗ್ರೆಸ್ ಸರ್ಕಾರದಲ್ಲಿ ಏನೇ ತೀರ್ಮಾನಗಳು ಆಗಿದ್ದರೂ ಅದಕ್ಕೆ ನಾನು ಪಾಲುದಾರನಾಗಿದ್ದೇನೆ, ನಾನು ಜವಾಬ್ದಾರಿಯನ್ನು ಹೊತ್ತು ಕೊಳ್ಳುತ್ತೇನೆಂಬ ದೊಡ್ಡತನದ ಮಾತನ್ನು ಹೇಳಿದರು. ಅದು ಏನು ಆಯಿತೆಂಬುದು ಸಧ್ಯಕ್ಕೆ ಬೇಡ. ಈ

ಹೈಫವರ್ ಕಮಿಟಿ ಮಿಟಿಂಗ್‌ನಲ್ಲಿ ಏನು ಮಾಡುತ್ತಾರೆ. The Additional Chief Secretary informed that the proposal could not get the consent of the Governor since it was included with other concessions to be extended to high raise buildings, star hotels etc. The Principal secretary Urban Development Department explained further and assured that this subject will be placed before the next Assembly session for necessary clearances since this will take some more time, the company requested an assurance from the government for issue of a letter of comfort that the government would take up the responsibility to exempt the levies and cess. ಇದು ವಿಧಾನಸಭೆಯಲ್ಲಿ ತರುವಂಥಾದ್ದು ಸೂಕ್ತವಲ್ಲ. ದಯವಿಟ್ಟು ಇದನ್ನು ಮಾಡಬೇಡಿ ಎಂದು ಸಲಹೆಯನ್ನು ಕೊಡುತ್ತಾರೆ. ನಿನ್ನೆ ನನ್ನ ಮೇಲೆ privelege motion move- ಮಾಡಬೇಕೆಂದು ಪ್ರಯತ್ನವನ್ನು ಪಟ್ಟಿರಿ. ಇದನ್ನು ಸದನದ ಗಮನಕ್ಕೆ ತರಲಿಲ್ಲವೆಂದು, ಸದನದ ಘನತೆಗೆ ಅಗೌರವವನ್ನು ತರುತ್ತಿದ್ದೀರಿ, ಎಂದು ನನ್ನ ಸರ್ಕಾರದ ಮೇಲೆ review petition ಹಾಕಿದ್ದೇನೆ, ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಪ್ರಯತ್ನವನ್ನು ಪಟ್ಟರು. ಅದಕ್ಕೆ ತಾವು ರೂಲಿಂಗ್ ಅನ್ನು ಕಾದಿರಿಸಿದ್ದೀರಿ. ಇಲ್ಲಿ ಏನು ಹೇಳುತ್ತಾರೆಂಬುದನ್ನು ನೋಡಿ, ಅವತ್ತು ಅಧಿಕಾರಿಗಳು ಸಲಹೆಯನ್ನು ಕೊಟ್ಟಿರುವಂಥಾದ್ದನ್ನು ತಿರಸ್ಕಾರ ಮಾಡುತ್ತಾರೆ. ಇಲ್ಲಿ ಕೊಡತಕ್ಕಂಥ ಕನ್ಸೆಷನ್‌ಗಳು ಬೇರೆ ಹೋಟೆಲ್‌ಗಳವರು ಬೇರೆ ಹೈರೈಸ್ ಬಿಲ್ಡಿಂಗ್‌ನವರು, ನಿಮ್ಮ ಹತ್ತಿರ ಬರಬಹುದು, ಅದುದರಿಂದ ಇದು ಬೇಡವೆಂದು ಹೇಳುತ್ತಾರೆ. It was decided in the meeting that the letter of comfort may be issued to the company assuring that the government would exempt the levies and other payable u/s 18 of KPCP Act 1961 to the BMICP to facilitate early financial closure. The Principal Secretary, Urban Development Department was directed to issue the letter of comfort immediately before 30.9.2000. ಎಂದು ಡೈರೆಕ್ಟ್ ಮಾಡುತ್ತಾರೆ, ತಕ್ಷಣ ತೀರ್ಮಾನವನ್ನು ಕೊಡಬೇಕು. 30ನೇ ತಾರೀಖಿನೊಳಗೆ ಕೊಡಬೇಕೆಂದು ಹೇಳುತ್ತಾರೆ. ಇದು ಅದಮೇಲೆ That this proposal was examined by the Revenue Department and Finance Department. Initially, Revenue Department

proposed that for the government land to be utilized for commercial development. The fixation of price is to be 10% of the district average guidance value. ಅಲ್ಲೂ ಅಧಿಕಾರಿಗಳು ಎಚ್ಚರಿಕೆಯನ್ನು, ಸಲಹೆಯನ್ನು ಕೊಡುತ್ತಾರೆ. The Finance Department suggested the price of 10% above the guideline value, after reconsideration the proposal, the Revenue Department suggested to fix at market value, whereas the Finance Department suggested to fix market value at prevailing rate, at the time of taking possession of the government land by the company ಮಾರ್ಕೆಟ್ ವಾಲ್ಯುವನ್ನು ಫಿಕ್ಸ್ ಮಾಡಬೇಕಾಗಿರುವಂಥಾದ್ದು, ಯಾವಾಗ ಭೂಮಿಯನ್ನು ಪರ್ಚೇಸ್ ಮಾಡುತ್ತಾರೆ. ಆ ಟೈಮ್‌ನಲ್ಲಿ ಮಾಡಬೇಕೆಂದು ಎಲ್ಲಾ ಅಧಿಕಾರಿಗಳು ಹೇಳುತ್ತಾರೆ. The company represented that the Government of India and other State Governments make available the land free of cost for the road projects and also other lands for commercial exploitation only with a purpose of meeting the project viability in case of BOT project. ಇವನು represent ಮಾಡುತ್ತಾನೆ. ಆ ರೀತಿ ರಿಕ್ವೆಸ್ಟ್ ಮಾಡುತ್ತಾನೆ. This was discussed at length and it was decided that the price to be fixed for the Government land utilized by the company for commercial development shall be at district average guidelines value prevailing in the year of 1999-2000. However, any cost to be incurred for clearance of encroachments etc., in the Government land, will have to be borne by the company itself,; The Government will extend all assistance in this matter. Orders of the Government in this regard are to be issued immediately. The Hon'ble Chief Minister stated that, if all the clearance given from the Government within the end of this month, there will be no more hindrances and it directed that the company should start the civil works of BMICP in the first week of November 2000 to which the representatives of Nice shall agreed. ಕೆಲವು ಅಧಿಕಾರಿಗಳು ಒಳ್ಳೆಯ

ಕೆಲಸವನ್ನು ಮಾಡಿದ್ದಾರೆಂಬುದಕ್ಕೆ ಎಕ್ಸಾಂಪಲ್ ಇದು. ಈ ಮಿಟಿಂಗ್ ಆದಮೇಲೆ, ಅವತ್ತು ಈ ಕಂಪನಿಗೆ 2011ಕ್ಕೆ ಇವರು ಏನು ಲ್ಯಾಂಡ್ ಕೊಡುವಂಥಾದ್ದಕ್ಕೆ ಆ ರೇಟ್‌ನಲ್ಲಿ ಪರ್ಚೇಸ್ ಮಾಡಬೇಕೆಂದು ತೀರ್ಮಾನವನ್ನು ಮಾಡುತ್ತಾರೆ. ಇವರು ಯಾವ ಸಂದರ್ಭದಲ್ಲಿ ಜಮೀನನ್ನು ಪರ್ಚೇಸ್ ಮಾಡುತ್ತಾರೆ, ಅವತ್ತಿನ ವ್ಯಾಲ್ಯೂವನ್ನು ಕೊಡಬೇಕೆಂದು ಅಧಿಕಾರಿಗಳು ಕೊಟ್ಟಂಥ ಸಲಹೆಯನ್ನು ತಿರಸ್ಕಾರ ಮಾಡಿ, 2011ಕ್ಕೆ ಎಂದು ತೀರ್ಮಾನವನ್ನು ಮಾಡುತ್ತಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : 2014ರವರೆಗೆ...

ಶ್ರೀ ಹೆಚ್.ಡಿ. ಕುಮಾರಸ್ವಾಮಿ : 2014ರವರೆಗೆ.....

ಶ್ರೀ ಎಂ.ಪಿ. ವೆಂಕಟೇಶ್ : ಯಾರು ಆ ಪುಣ್ಯಾತ್ಮ ಮುಖ್ಯಮಂತ್ರಿ ಎಂದು ದಯಮಾಡಿ ಹೆಸರು ಹೇಳಿ. ಜನರೆಲ್ಲಾ ನೋಡುತ್ತಿದ್ದಾರೆ, ದಯಮಾಡಿ ಹೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಅವೆಲ್ಲಾ ಬೇಡ ಬಿಡಿ. ಇದಕ್ಕೆ ಯಾರನ್ನೂ ದೂಷಿಸುವುದು ಬೇಡ. ಇವತ್ತಿನ ವ್ಯವಸ್ಥೆ ಏನಾಗಿದೆ ಎನ್ನುವುದನ್ನು ಹೇಳುತ್ತಿದ್ದೇನೆ. ನನ್ನ ಒಂದು ಮನವಿ ಎಂದರೆ ಈ ವ್ಯವಸ್ಥೆ ಬಗ್ಗೆ ದೇಶದಲ್ಲಿ ಒಂದು ತೀರ್ಮಾನ ಇಲ್ಲಿಂದಲೇ ಆಗಬೇಕು. ನಂತರ ಸದನ ಅದನ್ನು ತೀರ್ಮಾನ ಮಾಡಲಿ. ಯಾರನ್ನೂ ದೂಷಿಸುವುದು ಬೇಡ, ಯಾರ ಬಗ್ಗೆಯೂ ನಾವು ಚರ್ಚೆ ಮಾಡುವುದು ಬೇಡ, ಯಾರ ಬಗ್ಗೆಯೂ ಟೀಕೆ ಮಾಡುವುದು ಬೇಡ, ಆಗಿದ್ದು ಆಗಿದೆ. ನಾನು ಕೊನೆಯ ಹಂತಕ್ಕೆ ಬಂದಾಗ ಏನು ಹೇಳಬೇಕೋ ಅದನ್ನು ಹೇಳುತ್ತೇನೆ. ನಂತರ ಅದನ್ನು ಸದನ ತೀರ್ಮಾನ ಮಾಡಲಿ. ರೈತರು, ರೈತರು, ರೈತರು ಎಂದು ಎಲ್ಲರೂ ಹೇಳುತ್ತಾರೆ ಎಂದು ಮಾನ್ಯ ರಾಜೇಂದ್ರನ್‌ರವರು ಹೇಳುತ್ತಿದ್ದರು. ಯಾರಾದರೂ ಒಬ್ಬ ರೈತ ಎಲ್ಲಾದರೂ ಹೋಗಿ ಸಾಲ ಕೇಳಿದರೆ ಅವನಿಗೆ ನೂರಾರು ಪ್ರಶ್ನೆಗಳು ಎದುರಾಗುತ್ತವೆ. ಆದರೆ ಇಲ್ಲಿ ಮಜಾ ಹೇಗಿದೆ ನೋಡಿ. ಮುಖ್ಯಮಂತ್ರಿಗಳ ಆದೇಶವನ್ನು ಪಾಲಿಸತಕ್ಕಂಥ ಅಧಿಕಾರಿಗಳು, ಆ ಕಂಪನಿಗೆ ಜಮೀನನ್ನು ಅಡವಿಟ್ಟು ಸಾಲ ತೆಗೆದುಕೊಳ್ಳಲು ಹಕ್ಕಿನ ಪತ್ರ ಕೊಡುತ್ತಾರೆ. The government confirms that it has no objection to NICEL creating a charge, mortgage, hypothication or other ingredients on the whole or part or reserved right, title and interest under the project background the land, the project facilities or project revenues in favour of the lenders and in this regard grant such rights and or undertake such obligations as may be required by the lenders. Including the step in rights which shall subsist till all

amounts payable to the lenders have been paid in full. The Government is agreable to the proposal whereby they will informed the lenders their nominated representatives of the occurance in an event of default under the project documents or any of them and in such event, the government shall allow the lenders an opportunity to rectify the breach as may have been committed by NICEL during the period in terms of project documents. ಹೇಗಿದೆ ನೋಡಿ? ರೈತರ ಬಗ್ಗೆ ಎಲ್ಲಾ ಚರ್ಚೆ ಮಾಡುತ್ತೇವೆ, ರೈತರ ಬಗ್ಗನೇ ಎಲ್ಲರ ಕಾಳಜಿ ಇರತಕ್ಕಂಥಾದ್ದು. ಆದರೆ ಇದಕ್ಕೆ ಹೇಗಿದೆ ನೋಡಿ. ರಾಯರೆಡ್ಡಿಯವರು ತರಾತುರಿಯಲ್ಲಿ ದೇವೇಗೌಡರು ಎಂಒಯುಗೆ ಸೈನ್ ಹಾಕಿಸಿಬಿಟ್ಟರು ಎಂಬು ಹೇಳುತ್ತಿದ್ದರು. ಅದು ಇಲ್ಲಿಯವರೆಗೆ ನಡೆದುಕೊಂಡು ಬಂದಿದೆ. ಹಂತಹಂತವಾಗಿಯೇ ಕೆಲಸ ಮಾಡಿಕೊಂಡು ಬಂದಿದ್ದಾರೆ. ಹಂತಹಂತವಾಗಿ, ನಿಧಾನವಾಗಿ ವರ್ಷವರ್ಷವೂ ಬದಲಾವಣೆ ಮಾಡಿಕೊಂಡು ಬಂದರಲ್ಲಾ, ಇದು ಹೇಗಿದೆ ನೋಡಿ. ಹಂತಹಂತವಾಗಿ ಮಾಡಿಕೊಂಡು ಈ ಪ್ರಾಜೆಕ್ಟನ್ನು ಸರ್ಕಾರಕ್ಕೆ ಯಾವ ರೀತಿ ಗಟ್ಟಿಮಾಡಿಕೊಟ್ಟಿದ್ದಾರೆ ಎಂಬುದನ್ನು ತಾವು ಗಮನಿಸಬೇಕು ಎಂದು ಹೇಳಲಿಕ್ಕೆ ಬಯಸುತ್ತೇನೆ. ಇವೆಲ್ಲದರ ಪರಿಣಾಮವಾಗಿ ಈ ನೈಸ್ ಕಂಪನಿಗೆ ಆರ್‌ಟಿಸಿ ಯನ್ನು ವರ್ಗಾವಣೆ ಮಾಡುತ್ತಾರೆ. ಯಾವುದೆಂದರೆ, ಎಕರೆಗೆ 10 ರೂಪಾಯಿಗಳ ತರಹ ಕೊಡುತ್ತಾರಲ್ಲಾ, ಅದನ್ನು ವರ್ಗಾವಣೆ ಮಾಡುತ್ತಾರೆ. 2003–04ರಲ್ಲಿ ವರ್ಗಾವಣೆ ಮಾಡುತ್ತಾರೆ. ಇವರಿಗೆ ಜಮೀನು ವರ್ಗಾವಣೆ ಮಾಡಿಕೊಟ್ಟು, ರೈಟ್ಸ್ ಕೊಟ್ಟಮೇಲೆ ಈ ಮಹಾನುಭಾವ ಐಸಿಐಸಿಐ ಬ್ಯಾಂಕಿಗೆ ಹೋಗುತ್ತಾನೆ. ಐಸಿಐಸಿಐ ಬ್ಯಾಂಕಿಗೆ ಹೋಗಿ 1,931 ಎಕರೆ ಜಮೀನನ್ನು ಅಲ್ಲಿ ಅಡವಿಡುತ್ತಾನೆ. 150 ಕೋಟಿ ರೂ. ಸಾಲಕ್ಕೆ ಅರ್ಜಿ ಹಾಕುತ್ತಾನೆ. ಐಸಿಐಸಿಐ ಬ್ಯಾಂಕಿನವರು ಇವನಿಗೆ ಫಸ್ಟ್ ಇನ್‌ಸ್ಟಾಲ್‌ಮೆಂಟ್ 10 ಕೋಟಿ ರೂ. ಕೊಡುತ್ತಾರೆ. ಆಗ ದಿನಾಂಕ: 3ನೇ ಫೆಬ್ರವರಿ 2003ರಂದು ಇವನು ಫಸ್ಟ್ ಇನ್‌ಸ್ಟಾಲ್‌ಮೆಂಟ್ 10 ಕೋಟಿ ರೂ. ಕಟ್ಟುತ್ತಾನೆ. ಇವನು ಕಂಪನಿ ಪ್ರಾರಂಭ ಮಾಡಿದ್ದು ಜನವರಿ 1996ರಲ್ಲಿ ಸೇರಿಕೊಳ್ಳತಕ್ಕದ್ದು ಅಗ್ರಿಮೆಂಟ್ ಮಾಡಿಕೊಳ್ಳುವುದು 1997ರಲ್ಲಿ. ಅಂದರೆ, ಮೂರು ಒರಿಜಿನಲ್ ಕಂಪನಿಗಳ ಜೊತೆಯಲ್ಲಿ ಸೇರಿಕೊಳ್ಳುವುದು 1997ರಲ್ಲಿ. 70 ರೂಪಾಯಿ ಬಂಡವಾಳ ಹಾಕಿ ಫಾರ್ಮ್ ಮಾಡಿಕೊಳ್ಳುವಂಥ ಕಂಪನಿಯವರು ಫೆಬ್ರವರಿ 3ನೇ ತಾರೀಖು 2003ರವರೆಗೆ ದುಡ್ಡು ಕಟ್ಟುವುದೇ ಇಲ್ಲ. ನಮ್ಮ ಜಮೀನನ್ನು ತೆಗೆದುಕೊಂಡು ಹೋಗಿ ಅಡವಿಟ್ಟು. ಯಾರಪ್ಪನ ಮನೆ ದುಡ್ಡೋ ಯಲ್ಲಮ್ಮನ ಜಾತ್ರೆ ನಡೆಸಿದ. ಅಡವಿಟ್ಟು 10 ಕೋಟಿ ರೂಪಾಯಿಗಳನ್ನು ಕಟ್ಟಿದ. The first amount

of Rs. 10 crores deposited by the project Developer M/s Nandi with KIADB as on 3.2.2003 against declaration of 28/4 for 2568 acres 20 guntas. This amount is raised by pledging or mortgaging Government property of 1931 acres with the ICICI Bank Limited. The letter written by M/s ICICI Bank Limited to the KIADB on 24.1.2003 clearly establishes the financial fruad played by the project Developer. ಅನಿಲ್ ದಿವಾನ್ ಲಾಯರ್ ಬಗ್ಗೆ ಹೇಳುತ್ತಿದ್ದರು. ಕೋರ್ಟ್‌ನಲ್ಲಿ ಏನೇನಾಗಿದೆ ಎನ್ನುವುದಕ್ಕೆ ಮುಂದೆ ಬರುತ್ತೇನೆ. The project Developer has not deposited any money out of his share Capital of Rs.522 crores. ಅವನು ಹೈಕೋರ್ಟ್ ಮುಂದೆ ಕೊಟ್ಟಿದ್ದಂಥ ಅಫಿಡವಿಟ್‌ನಲ್ಲಿದ್ದ 522 ಕೋಟಿ ರೂಪಾಯಿಗಳಲ್ಲಿ ಈ ದುಡ್ಡನ್ನು ಕಟ್ಟಿಲಿಲ್ಲ. ನಮ್ಮ ಜಮೀನನ್ನು ತೆಗೆದುಕೊಂಡು ಹೋಗಿ ಅಡವಿಟ್ಟು ದುಡ್ಡು ತಂದು ಕಟ್ಟಿದ್ದಾನೆ. As mentioned in PIL.WP. 29221/1997. But mortagaged government land of 1931 acres as security to raise loands from ICICI Bank Limited to pay compensation to private land owners. The Project Developer M/s Nandi who boast of having 522 crores of share capital in W.P.No. 29221/1997 mortgaged this entire government land of 1931 acres as security with M/s ICICI Bank Limited by way of a registered document on 27.11.2002, to raise funds to pay compensation to private land owners which clearly establish the fact that the project Developer has no share capital of Rs. 522 crores and the affidavit filed in W.P.No. 28221/1997 is absolutely false and for having played fraud on the people of Karnataka, the project Developer M/s Nandi has to be dealt seriously. ಅವನ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕು ಎಂದು ಸದನದ ಸದಸ್ಯರು ಹೇಳಬೇಕು. ಇವನ ಮೇಲೆ ಕ್ರಿಮಿನಲ್ ಕೇಸ್ ಹಾಕಬೇಕೋ, ಬೇಡವೋ ಎಂಬುದನ್ನು ಮುಂದಕ್ಕೆ ತೀರ್ಮಾನ ಮಾಡಿ; ಉತ್ತರ ಕಂಪ್ಲೀಟ್ ಆದಮೇಲೆ. The Project Developer M/s Nandi Infrastructure Corridor Enterprises Limited has also spent over Rs. 49.65 crores as miscellaneous expenditure from the

year 1998 to 2005. What is this miscellaneous? ಇದು ಏನೆಂದು ಹೇಳಬೇಕಾಗುತ್ತದೆ. ಕೋರ್ಟ್‌ಗೆ ಸಬ್ಮಿಟ್ ಮಾಡಿರುವ ಎಲ್ಲಾ ಡಾಕ್ಯುಮೆಂಟ್‌ಗಳೂ ಇವೆ. ಕೋರ್ಟ್ ಮುಂದೆ ಏನೇನು ಹೇಳಿದ್ದರು, ಬ್ಯಾಂಕ್ ಟ್ರಾನ್‌ಸ್ಯಾಕ್ಷನ್‌ದ್ದು ಎಲ್ಲಾ ಡಾಕ್ಯುಮೆಂಟ್‌ಗಳಿವೆ. ಅಲ್ಲಿ ಅವರವರಲ್ಲಿ ಏನೇನು ವ್ಯವಹಾರಗಳಾಗಿವೆ ಎನ್ನುವ ಬಗ್ಗೆ ಎಲ್ಲಾ ಡಾಕ್ಯುಮೆಂಟ್‌ಗಳಿವೆ. ಕೋರ್ಟ್ ಮುಂದೆ, As already submitted, the petitioner has not produced any material before this Hon'ble Court to prove that the collaborators of this respondent are not financially and technically competent to execute a project of the nature contemplated in the agreement. ಅದು ಅನೆಕ್ಷರ್-1ರಲ್ಲಿ 'ಎ'ನಲ್ಲಿ ಇದೆ. ಇದು ಈ ಪರಿಸ್ಥಿತಿ. ಮಾನ್ಯ ರಾಜೇಂದ್ರನ್‌ರವರೇ, ನಿನ್ನೆ ನೀವು ಮಹಾಭಾರತ, ರಾಮಾಯಣದ ಕಾಂಡಗಳ ಬಗ್ಗೆ ಹೇಳುತ್ತಿದ್ದೀರಿ. ಈಗ BMIC projectನ ಇನ್ನೊಂದು ಕರ್ಮಕಾಂಡ, ಇದನ್ನು ಎರಡನೇ ಕರ್ಮಕಾಂಡ ಎಂದು ಕರೆಯಬೇಕೋ, ಮೂರನೆಯ ಕರ್ಮಕಾಂಡ ಎಂದು ಕರೆಯಬೇಕೋ ಗೊತ್ತಿಲ್ಲ ಈಗ ಪ್ರಾರಂಭವಾಗುತ್ತದೆ. ಮಾನ್ಯ ದೇವೇಗೌಡರ ಬಗ್ಗೆ ಅಭಿವೃದ್ಧಿ ವಿರೋಧಿ, ಇವರು ಯಾವ ಅಭಿವೃದ್ಧಿಗೂ ಅವಕಾಶ ಕೊಡುವುದಿಲ್ಲ, ಹೀಗೆ ಏನೇನೋ ವ್ಯಾಖ್ಯಾನಗಳಿವೆ. ಚುನಾವಣೆಯಲ್ಲಿ ಸೋತಿದ್ದರು. ಉಪ ಚುನಾವಣೆಯಲ್ಲಿ ಕನಕಪುರದ ಜನ ಅವರನ್ನು ಗೆಲ್ಲಿಸಿದರು. ಹೀಗಾಗಿ, ಅವರು ಈ ಭಾಗದ ಲೋಕಸಭಾ ಸದಸ್ಯರು. 31-01-2004ರವರೆಗೆ ಮಾನ್ಯ ದೇವೇಗೌಡರು ಈ BMIC ಕರ್ಮಕಾಂಡದ ಬಗ್ಗೆ ಎಲ್ಲಾದರೂ ಚರ್ಚೆ ಮಾಡಿದ್ದಾರೆಯೇ? ಯಾರ ಮುಂದೆಯಾದರೂ ಈ ವಿಷಯವನ್ನು ತಂದಿದ್ದರೇ ಎಂದು ಈ ಸದನದ ಮುಂದೆ ಕೇಳಲಿಕ್ಕೆ ಬಯಸುತ್ತೇನೆ. ಈ subject ಬಗ್ಗೆ ಇಲ್ಲಿಯವರೆಗೆ ಅವರು ಎಲ್ಲೂ ಮಾತನಾಡಲಿಲ್ಲ. Vote ಕೊಟ್ಟಂಥ ಪ್ರಭುಗಳೇನಿದ್ದಾರೆ, ಅವರು ಬಂದು ಇಲ್ಲಿ ಆಗಿರುವ ಅನ್ಯಾಯಗಳನ್ನು, ಈ ಒಂದು BMIC Project ಹೆಸರಿನಲ್ಲಿ ರೈತರಿಗೆ ಏನೇನು ಅನ್ಯಾಯಗಳಾಗಿವೆ, ಈಗಾಗಲೇ ಅದರ ಬಗ್ಗೆ ಹೇಳಿದ್ದಾರೆ. 1995ರಲ್ಲಿ ಅಕ್ರಮ ಸಕ್ರಮ ಮಾಡಿದಂಥ ಸರ್ಕಾರದ ನಿರ್ಧಾರಕ್ಕೆ ಮಾನ್ಯ ದೇಶಪಾಂಡೆಯವರೂ ಕೂಡ ಪಾರ್ಟಿ ಇಲ್ಲಿ ಏನಾಯಿತು? ರೈತರುಗಳು ಮನವಿ ಮಾಡಿದಾಗ ಮಾನ್ಯ ದೇವೇಗೌಡರು ಅಲ್ಲಿ ಹೋಗುತ್ತಾರೆ. ಅಲ್ಲಿ ಯಾರೋ ಎರಡು, ಮೂರು ಟಿ.ವಿ. ಮಾಧ್ಯಮದವರು ಹೋದರು. ಅಲ್ಲಿ ಇದು ಪ್ರಾರಂಭವಾಯಿತು. ರೈತರ ನೋವುಗಳೇನಿವೆ, ರೈತರಿಗೆ ತೊಂದರೆ ಏನಾಗಿದೆ, ಇದರ ಬಗ್ಗೆ ಗಮನಹರಿಸಿ ಎಂದು ಆವತ್ತಿನ ಮುಖ್ಯಮಂತ್ರಿಗಳಿಗೆ ಒಂದು ಸುದೀರ್ಘವಾದ ಪತ್ರವನ್ನು ಬರೆಯುತ್ತಾರೆ. ಆಗ

Suitcase ಕೊಡಲಿಲ್ಲವೇನೋ ದೇವೇಗೌಡರಿಗೆ ಎಂದು ಮತ್ತೆ ಶುರುವಾಯಿತು. ಇದರ ಬಗ್ಗೆ ನಾನು ಹೆಚ್ಚಿಗೆ ವ್ಯಾಖ್ಯಾನ ಮಾಡುವುದಿಲ್ಲ. ಅಲ್ಲಿಗೇ ನಿಲ್ಲಿಸುತ್ತೇನೆ. Letter ಏನು ಬರೆದರು, ಅದಕ್ಕೇನಾದರೂ ಸರ್ಕಾರ ಗಮನ ಕೊಟ್ಟಿತ್ತೇ? ಇದು ಮಾನ್ಯ ದೇವೇಗೌಡರ 1995ರ ಭ್ರೂಣ ಹೌದು, ಅಪ್ಪಂದಿರು ಮಕ್ಕಳನ್ನು ಹುಟ್ಟಿಸುತ್ತಾರೆ. ಮಗ ಚೆನ್ನಾಗಿರಬೇಕೆಂದು ಬಯಸುತ್ತಾರೆ. ಮಗ ಎಡವಿದರೆ ಅದನ್ನು ತಿದ್ದಬೇಕೋ, ಬೇಡವೋ? ಅವತ್ತೇನೋ ಮಾನ್ಯ ದೇವೇಗೌಡರು ಒಳ್ಳೆಯ ದೃಷ್ಟಿಯಿಂದ, ಈ ಭಾಗದ ಜನರಿಗೆ ಒಳ್ಳೆಯದಾಗಲಿ ಎಂದು ಈ project ಅನ್ನು ತಂದರು. ಅದು ಎಲ್ಲೋ ಒಂದು ಕಡೆ ದಿಕ್ಕು ತಪ್ಪಿತು. ಅದನ್ನು ಸರಿಪಡಿಸಿಕೊಳ್ಳಿ ಎಂದು ಅಂದಿನ ಮುಖ್ಯಮಂತ್ರಿಗಳಿಗೆ ಪತ್ರ ಬರೆದರು. ಅದಕ್ಕೆ ಬೇರೆ ಬೇರೆ ರೀತಿ ಚರ್ಚೆ, ಇದೆಲ್ಲಾ ಪ್ರಾರಂಭವಾಯಿತು. ಆಗ ಅದರ ಬಗ್ಗೆ ಬೀದಿಯಲ್ಲಿ ಚರ್ಚೆ ಪ್ರಾರಂಭವಾಯಿತು. ಅಭಿವೃದ್ಧಿಗೆ ವಿರೋಧಿ ಎಂದು ಮತ್ತೆ ಮಾನ್ಯ ದೇವೇಗೌಡರ ಬಗ್ಗೆ ಪ್ರಾರಂಭವಾಯಿತು. ಸರ್ಕಾರದಲ್ಲಿ ಯಾರೇ ಇರಲಿ, ರೈತರುಗಳು ತಮ್ಮ ಬೇಡಿಕೆಗಳನ್ನು ಮುಂದಿಟ್ಟಾಗ, ಅದಕ್ಕೆ ಸರ್ಕಾರ ಗಮನ ಕೊಡದಿದ್ದಾಗ, ಅವರಿಗೆ ನ್ಯಾಯ ದೊರಕಿಸಿಕೊಡದಿದ್ದಾಗ, then what is next step for us? ಇದಕ್ಕೆ ಮುಖ್ಯಮಂತ್ರಿಗಳು ಗಮನ ಹರಿಸದಿದ್ದಾಗ ನಾವು ಯಾರ ಮುಂದೆ ಹೋಗಿ ಅರ್ಜಿ ಕೊಡಬೇಕು? ಅವತ್ತು ಒಂದು rally ಮಾಡಿದರು. Governor ರವರಿಗೆ ಹೋಗಿ ಎಂದು Memorandum ಕೊಟ್ಟರು. Governor ಬಗ್ಗೆ ಏನು letter ಬರೆದಿದ್ದಾರೆಂದು ಹೇಳಿದರೋ ಆ Memorandum ಕೊಟ್ಟಿದ್ದಂಥದ್ದು. ಪಾಪ, Governor ಬಗ್ಗೆ ಸದನದೊಳಗೆ ಬಹಳ certificate ಕೊಟ್ಟರು. ಅದರ ಬಗ್ಗೆ ನಾನು ಚರ್ಚೆ ಮಾಡುವುದಿಲ್ಲ. ಮೊನ್ನೆ ನಡೆದಂಥ ಘಟನೆಗಳೇನಿವೆ, Governor ಬಗ್ಗೆ ಬಳಸಿದಂಥ ಪದಗಳು, ಅದನ್ನು ಸದನದ ತೀರ್ಮಾನಕ್ಕೆ ಬಿಡುತ್ತೇನೆ. ಏಕೆಂದರೆ, ನನಗೆ ಇನ್ನೂ ಅದೆಲ್ಲಾ ಗೊತ್ತಿಲ್ಲ. ಈ ಸದನದಲ್ಲಿ ಯಾವ್ಯಾವ ರೀತಿ ನಡೆದುಕೊಳ್ಳಬೇಕು, ಯಾವ ಪದಗಳನ್ನು ಬಳಸಬೇಕು.

ಡಾ|| ಹೆಚ್.ಸಿ. ಮಹದೇವಪ್ಪ : ಸಾರ್ವಜನಿಕರು ಮನವಿಗಿಂತ ಮೊದಲೇ ರೈತರ ದೂರಿನ ಮೇಲೆ ಅವರ ಜಮೀನನ್ನು ರಕ್ಷಣೆ ಮಾಡಬೇಕೆಂದು ಅಂದಿನ ರೈತ ಸಂಘದ ಅಧ್ಯಕ್ಷರಾದಂಥ ಪ್ರೊ: ನಂಜುಂಡಸ್ವಾಮಿಯವರು ಹೋರಾಟವನ್ನೇ ಮಾಡಿದ್ದರು. ಆ ಸಂದರ್ಭದಲ್ಲಿ ಸರ್ಕಾರ ಯಾವುದೇ ಇರಲಿ, ಅದು ಎಚ್ಚೆತ್ತುಕೊಂಡಿದ್ದರೆ ಆ ರೈತರ ಜಮೀನನ್ನು ಉಳಿಸಲಿಕ್ಕೆ ಸಾಧ್ಯವಾಗುತ್ತಿತ್ತು. ಅಂದು ಎಲ್ಲಾ ಮರೆತು ಇವತ್ತು ರೈತರ ಬಗ್ಗೆ ಎಲ್ಲಾ ಮಾತನಾಡಿಕೊಂಡು ಈ ಹಂತ

ತಲುಪಿದ್ದೇವೆ. ಈಗ ಜಮೀನು ಕೊಟ್ಟುಬಿಟ್ಟದ್ದಾರೆ. ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು. Comprehensive Land Reforms Act ಮುಖಾಂತರ ಸಣ್ಣ ಮತ್ತು ಅತಿ ಸಣ್ಣ ರೈತರು ಜಮೀನುಗಳನ್ನು ಪರಭಾರೆ ಮಾಡುವುದಕ್ಕೆ ಅಥವಾ ಮಾರಾಟ ಮಾಡುವುದಕ್ಕೆ ಇದ್ದಂಥ ನಿರ್ಬಂಧವನ್ನು ತೆಗೆದುಹಾಕಿದ ಮೇಲೆ flood gate open ಆದ ಹಾಗೆ ಆಯಿತು. ಮತ್ತೆ ಅದನ್ನು ಪುನರ್ ಪರಿಶೀಲನೆ ಮಾಡಿ ರೈತರು ಬದುಕತಕ್ಕಂಥ ಕೃಷಿ, ಪ್ರಮುಖವಾದ ಕಸುಬಿಗೆ ರಕ್ಷಣೆ ಆಗಬೇಕಾದರೆ ಸಮಗ್ರವಾದ ಒಂದು ಶಾಸನ ಜಾರಿ ಮಾಡಿ ಇವತ್ತು ಏನು ಜಮೀನನ್ನು ಯಾರೋ ದುಡ್ಡು ಇರುವವರು ತೆಗೆದುಕೊಂಡು ಸಾಮಾನ್ಯ ಜನರು ಬದುಕುವುದಕ್ಕೆ ಆಗದಿರುವಂಥ ವಾತಾವರಣದಲ್ಲಿ ಇದನ್ನು ಮಾರಾಟ ಮಾಡಿದರೆ ಹೆಚ್ಚು ದುಡ್ಡು ಬರುತ್ತದೆ, ಅದರಿಂದ ಮಾರಬೇಕೆಂದು ಹೇಳಿ, ಅದಕ್ಕೆ ಒಂದು ಅಂತಿಮವನ್ನು ಹಾಡಿ ಸಮಗ್ರವಾದ ಭೂ ಕಾಯಿದೆ ಶಾಸನ ಮುಖಾಂತರ ರೈತರು ಜಮೀನು ರಕ್ಷಣೆ ಮಾಡಲಿಕ್ಕೆ ರೈತ ಸಂಘ ಹೋರಾಟ ಮಾಡಿದೆ, ಬದ್ಧತೆ ಇರತಕ್ಕಂಥ ರಾಜಕಾರಣಿಗಳು ಮಾಡುತ್ತಿದ್ದಾರೆ. ನಮ್ಮ ಹೊಸ ಮುಖ್ಯಮಂತ್ರಿಗಳು ಒಂದು ಸಮಗ್ರವಾದ ಹೊಸ ನೀತಿಯನ್ನೇ ಜಾರಿಗೆ ತರಬೇಕು ಎಂದು ತಮ್ಮ ಮೂಲಕ ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ರಾಜ್ಯದ ಮುಖ್ಯಮಂತ್ರಿಗಳೇ ಈ ಬಗ್ಗೆ ಗಮನ ಹರಿಸದೇ ಇದ್ದಾಗ ಇವತ್ತು ಈ ಸಂವಿಧಾನದ ಚೌಕಟ್ಟಿನಲ್ಲಿ Ultimately ನಾವು ರಾಜಭವನಕ್ಕೆ ಹೋಗತಕ್ಕಂಥದ್ದು ಇದೆ. Governorಗೆ ಗಮನಹರಿಸಿ ಎಂದು ಹೇಳಿ ನಾವು ಅರ್ಜಿಯನ್ನು ಕೊಡುತ್ತೇವೆ. ಅದರ ಮೇಲೆ ಅವರು ಸರ್ಕಾರಕ್ಕೆ ಏನು ಮನವಿ ಕೊಟ್ಟರು? ಅವರು ಸರ್ಕಾರ ಪ್ರಧಾನ ಕಾರ್ಯದರ್ಶಿಯವರಿಗೆ 29-04-2004ರಲ್ಲಿ ಒಂದು letter ಬರೆಯುತ್ತಾರೆ. ಸನ್ಮಾನ್ಯ ರಮೇಶ್ ಕುಮಾರ್‌ರವರು ಈಗ ಸದನದಲ್ಲಿ ಇಲ್ಲ. ಅವರು ಮೊನ್ನೆ ಬಹಳ ಉದ್ವೇಗದಿಂದ ಮಾತನಾಡಿದರು. ಅವರ ಜೀವನ, ನಡೆದು ಬಂದಿರತಕ್ಕಂಥ ದಾರಿ, ಅವರು ಇವತ್ತು Governor ಆಗಿರತಕ್ಕಂಥದ್ದು, ಇದಕ್ಕೆ ಮುಂಚೆ ಅವರು Controller and Auditor General ಆಗಿ ಕೆಲಸ ಮಾಡಿರತಕ್ಕಂಥದ್ದು....

ಶ್ರೀ ಜೆ.ಸಿ. ಮಾಧುಸ್ವಾಮಿ : ಊಟಕ್ಕೆ ಹೋಗಿ ಬಂದ ಮೇಲೆ continue ಮಾಡಬಹುದು. ನಿಮಗೆ ಆಗಿನಿಂದ ಪಾಪ, ಜಮೀರ್‌ರವರು ಕಾಯ್ದುಕೊಂಡು ಕುಳಿತಿದ್ದಾರೆ. ಈಗಾಗಲೇ 2 ಗಂಟೆ ಸಮಯವಾಗಿದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಒಂದ್ನಿಮಿಷ. ಮನವಿ ಮಾಡಿಕೊಳ್ಳುತ್ತೇನೆ. ಏಕೆಂದರೆ, ಈ ವಿಷಯದಲ್ಲಿ ನೀವು ಬಹಳ ಹೋರಾಟ ಮಾಡಿಕೊಂಡು ಬಂದಿರತಕ್ಕಂಥವರು. ಮುಗಿಸಿ ಬಿಡೋಣ. Supreme Court Judgment, High Court judgementನ ವಿಷಯದ ಬಗ್ಗೆ ಬೇಕಾದರೆ ಸದನವನ್ನು ತಾವು ಮತ್ತೆ ಮುಂದುವರಿಸಿದಾಗ ಪ್ರಾರಂಭ ಮಾಡೋಣ. ನಾನು ಇನ್ನು ಎರಡು ನಿಮಿಷದಲ್ಲಿ ಇಲ್ಲಿಗೆ ನಿಲ್ಲಿಸುತ್ತೇನೆ.

ಅಧ್ಯಕ್ಷರು : ನೀವು ಇನ್ನೂ ಎಷ್ಟು ನಿಮಿಷ ಸಮಯ ತೆಗೆದುಕೊಳ್ಳುತ್ತೀರಿ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಇನ್ನು ಎರಡು ನಿಮಿಷ ಮಾತನಾಡುತ್ತೇನೆ. ನನಗೆ ಇನ್ನೂ ಒಂದು ಗಂಟೆ ಸಮಯ ಬೇಕಾಗುತ್ತದೆ.

ಅಧ್ಯಕ್ಷರು : ಒಂದು ಗಂಟೆ ಸಮಯ ಬೇಕೇ? ಈಗ ಮುಗಿಸಿಬಿಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮುಗಿಸಿಬಿಡುತ್ತೇನೆ. ನೀವು ಬೇಕಾದರೆ ವಿರಾಮ ಕೊಟ್ಟು, ಆಮೇಲೆ ಮತ್ತೆ ಪ್ರಾರಂಭ ಮಾಡೋಣ ಅಧ್ಯಕ್ಷರೇ, ರಾಜ್ಯಪಾಲರು ಸರ್ಕಾರಕ್ಕೆ ಅವರ ಒಂದು find committee ಯಿಂದ ಅವರದೇ ಆದ ಒಂದು report ತೆಗೆದುಕೊಂಡ ನಂತರ ಇದರ ಬಗ್ಗೆ detailed study ಮಾಡಿ ಅವರ ಕಛೇರಿಯಿಂದ ಸರ್ಕಾರದ Secretaryಗೆ letter ಬರೆಸುತ್ತಾರೆ. "In the frame work agreement for the toll road, the land considered is 6999 acres against 5120 acres specified in the project report, which is in excess by 1879 acres 03 guntas, about 37% excess. Out of the extent of land consider for toll road, the land considered for inter-changes 16 numbers is 3065 acres as against 1186 acres as incorporated in the project report and therefore, it is excess by 1878 acres 34 guntas. The Project Company has admitted that among others, it has used its rights on lease land as security for securing loan from the financial institutions. Governor, ಹೀಗಿದೆ, ನೋಡಿ ಈಗಲೂ ತಿದ್ದಿಕೊಳ್ಳಿ ಎಂದು ಹೇಳಿ ಸರ್ಕಾರಕ್ಕೆ ಆಗಲೂ ಎಚ್ಚರಿಕೆ ಕೊಡುತ್ತಾರೆ. First, ದೇಶಪಾಂಡೆಯವರೇ, actually ಈ finding ಕಂಡುಹಿಡಿಯುತ್ತಾರೆ. ಅದಾದನಂತರ, ಏಕೆ ದೇಶಪಾಂಡೆಯವರು ಅಷ್ಟು ಕಟುವಾದ ಶಬ್ದಗಳನ್ನು

ಉಪಯೋಗ ಮಾಡಿ file ಮೇಲೆ ಬರೆದು, ಏಕೆ ನೀವು ಮುಂದಕ್ಕೆ ತೀರ್ಮಾನ ಮಾಡತಕ್ಕಂಥದ್ದರಲ್ಲಿ.....

ಶ್ರೀ ಆರ್.ವಿ. ದೇಶಪಾಂಡೆ : 2,700 ಚಿಲ್ಲರೆ ಎಕರೆ delete ಆಯಿತು. 2,700 odd acres PWD ಯವರು proposal ಕಳುಹಿಸಿ, delete ಮಾಡಿಸಿದ್ದೇವೆ. But, direction ಏನಿತ್ತೆಂದರೆ....

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ದೇಶಪಾಂಡೆಯವರೆ, ನಾನು ನಿಮಗೆ ಅಭಿನಂದನೆ ಸಲ್ಲಿಸುತ್ತೇನೆ. ಆದರೆ, ಅದಾದಮೇಲೆ ಇಷ್ಟೆಲ್ಲಾ ಅನಾಹುತಗಳಾದುವಲ್ಲಾ? ಏಕೆಂದರೆ, 10 ವರ್ಷ ಯಾರಿಗೂ ಅವಕಾಶ ಸಿಗಲಾರದು. ಸತತವಾಗಿ, ಮಧ್ಯದಲ್ಲಿ ಒಂದು ವರ್ಷ break ಅಷ್ಟೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸನ್ಮಾನ್ಯ ಅಧ್ಯಕ್ಷರೇ, PWDಗೆ ಇದ್ದ ಅಧಿಕಾರವನ್ನು ದೇಶಪಾಂಡೆಯವರು KIADBಗೆ ಏಕೆ ಕೊಟ್ಟರು ಎನ್ನುವುದನ್ನು ನೀವು ಮೊದಲು ಚರ್ಚೆ ಮಾಡಬೇಕಾಗಿತ್ತು.

ಶ್ರೀ ಆರ್.ವಿ. ದೇಶಪಾಂಡೆ : ಗೊತ್ತಿಲ್ಲ. ಅದು ಮುಖ್ಯಮಂತ್ರಿಗಳಿಗೆ...

Sri J.C. Madhuswamy : You are responsible ಎಂದು ಹೇಳುತ್ತಿದ್ದವರು,.... ತೆಗೆದುಕೊಂಡಿದ್ದು....

ಶ್ರೀ ಆರ್.ವಿ. ದೇಶಪಾಂಡೆ : ತಾವು reply ಕೊಡುವಾಗ ಅದನ್ನು ಹೇಳಬೇಕು. PWD ಒಂದು Nodal department. ತಾವು ಅವತ್ತು ಹೇಳಿದಿರಿ. ಯಾವುದೇ ಒಂದು High Power Committee ಅಥವಾ Empowered Committee, ಯಾವ committeeಯ member Industry Minsiter ಇರಲಿಲ್ಲ. Except the Cabinet Sub-committee and the Cabinet. No.2, ಮಾಧುಸ್ವಾಮಿಯವರು ಪಾಪ ಒಂದಲ್ಲ, ಎರಡಲ್ಲ, ನಾಲ್ಕು ಸಾರಿ PWD ತೆಗೆದುಕೊಳ್ಳಬೇಡಿ ಹೇಳಿದರು. ನಾವೇನೂ PWDಯನ್ನು ತೆಗೆದುಕೊಂಡಿದ್ದೇವೆ? Nothing. ಒಂದು PWD ಮಾಡುವ ಕೆಲಸ ಕೈಗಾರಿಕಾ ಇಲಾಖೆ ಮಾಡಿರುವಂಥ ಒಂದು record ಇದ್ದರೆ ತೋರಿಸಿ.

Sri J.C. Madhuswamy : MOU ಗೆ sign ಆದಾಗ it was clear.

ಶ್ರೀ ಆರ್. ದಿನೇಶ್ ಗುಂಡೂರಾವ್ : ಮುಖ್ಯಮಂತ್ರಿಗಳು ಮಾತನಾಡುತ್ತಿದ್ದಾರೆ. ವೈಯಕ್ತಿಕ ವಿಚಾರಗಳು ಇಲ್ಲಿ ಬೇಕಾಗಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಅದು ಆಗಿದೆ. ತರುತ್ತೇನೆ. ಆ document ಇಡುತ್ತೇನೆ. KIADBಗೆ PWD ಯಿಂದ powers ಕೊಡುತ್ತಾರೆ. ಅದಾಗಿದೆ. Records ನಲ್ಲೇ ಇದೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಯಾರು ಕೊಡುತ್ತಾರೆ ಅಂತ ಅನ್ನುವುದಾದರೂ ಬರಬೇಕಲ್ಲಾ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಇದೆಲ್ಲಾ ಚರ್ಚೆಯಾದ ಮೇಲೆ, ಸಂಪೂರ್ಣ ಈ ಒಂದು project ಏನಿದೆ ಇದನ್ನು ಸಂಪೂರ್ಣವಾಗಿ ನಿಮ್ಮ custody ಗೆ ಕೊಡುತ್ತೇನೆ. ಆಮೇಲೆ, ಏನೇನು ಮಾಡಬೇಕು ಎಂದು final ಆಗಿ ಬರೋಣವಂತೆ. ಈಗ ನಿಲ್ಲಿಸಬಹುದು ಅಧ್ಯಕ್ಷರೆ. ಏಕೆಂದರೆ, ಅದು ಅಲ್ಲಿಗೇ ಒಂದು part. Next ಧರ್ಮಸಿಂಗ್‌ರವರು ಬರುತ್ತಾರೆ.

ಅಧ್ಯಕ್ಷರು : ಇದನ್ನು after lunch ತೆಗೆದುಕೊಳ್ಳೋಣ. ಸದನವನ್ನು 3.00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 2 ಗಂಟೆ 2 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು 3 ಗಂಟೆ 17 ನಿಮಿಷಕ್ಕೆ ಸಮಾವೇಶಗೊಂಡಿತು)

(ಸನ್ಮಾನ್ಯ ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

2. ಸಂತಾಪ ಸೂಚನೆ

ವಿಷಯ : ಕಾಗಿನೆಲೆ ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ಶ್ರೀ ಶ್ರೀ ಬೀರೇಂದ್ರ ಕೇಶವ ತಾರಕಾನಂದ ಪುರಿ ಅವರ ನಿಧನದ ಬಗ್ಗೆ.

ಅಧ್ಯಕ್ಷರು : ಕಾಗಿನೆಲೆ ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ಶ್ರೀ ಶ್ರೀ ಬೀರೇಂದ್ರ ಕೇಶವ ತಾರಕಾನಂದ ಪುರಿ ಅವರು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾಧದಿಂದ ತಿಳಿಸಬಯಸುತ್ತೇನೆ.

ನಂಜನಗೂಡಿನವರಾದ ಸ್ವಾಮೀಜಿಗಳು ಎಂ.ಎ. ತತ್ವಶಾಸ್ತ್ರದ ಪದವೀಧರರು ಹಾಗೂ ಸಂಸ್ಕೃತ ಭಾಷೆಯ ವಿದ್ವಾಂಸರು ಕನಕ ಸ್ಫೂರ್ತಿ ಮಾಸ ಪತ್ರಿಕೆಯ ಸಂಪಾದಕರಾಗಿ ಕನಕಗುರು ತತ್ವ ಸಿದ್ಧಾಂತವನ್ನು ನಾಡಿನ ಸಮಸ್ತರಿಗೆ ತಲುಪಿಸುವ ಕಾರ್ಯನಿರ್ವಹಿಸಿದ ಸ್ವಾಮಿಗಳು 1992ರಲ್ಲಿ ಕಾಗಿನೆಲೆಯಲ್ಲಿರುವ ಮಹಾಸಂಸ್ಥಾನದ